

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 9 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 348 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಯುದ್ಧಕ್ಕೆ ಅಲ್ಪ ವಿರಾಮ

ನಾಳೆ ಇಸ್ಲಮಾಬಾದ್‌ನಲ್ಲಿ ಮಾತುಕತೆಗೆ ಅಮೆರಿಕ, ಇಸ್ರೇಲ್–ಇರಾನ್ ಸಮ್ಮತಿ

ಇಸ್ಲಮಾಬಾದ್: ಇನ್ನೇನು ವಿಶ್ವದಲ್ಲಿ ಅಲ್ಲೋಲ–ಕಲ್ಲೋಲವೇ ನಡೆದು ಹೋಗಲಿದೆ. ಒಂದು ದೇಶ ನಿರ್ನಾಮವಾಗಲಿದೆ ಎಂಬ ಆತಂಕ ಸದ್ಯ ದೂರವಾಗಿದೆ. ಅಮೆರಿಕ, ಇಸ್ರೇಲ್ ಹಾಗೂ ಇರಾನ್ ಎರಡು ವಾರಗಳ ತಾತ್ಕಾಲಿಕ ಕದನ ವಿರಾಮದೊಂದಿಗೆ ಇಡೀ ವಿಶ್ವವೇ ನಿಟ್ಟುಸಿರು ಬಿಟ್ಟಿದೆ. ಇದರೊಂದಿಗೆ ಕಳೆದ 40 ದಿನಗಳಿಂದ ನಡೆಯುತ್ತಿರುವ ಯುದ್ಧದಿಂದ ನಲುಗಿದ್ದ ಪಶ್ಚಿಮ ಏಷ್ಯಾ ಸೇರಿ ವಿಶ್ವಕ್ಕೆ ಸದ್ಯದ ಮಟ್ಟಿಗೆ ಸಮಾಧಾನ ತಂದಿದೆ.

ಈ ತಾತ್ಕಾಲಿಕ ಕದನ ವಿರಾಮಕ್ಕೆ ಸಂಬಂಧಿಸಿ 10 ಅಂಶಗಳನ್ನು ಒಳಗೊಂಡ ಪ್ರಸ್ತಾವ ಮುಂದಿಟ್ಟಿರುವ ಇರಾನ್, ಪಾಕಿಸ್ತಾನ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ಶುಕ್ರವಾರ (ಏ. 10) ನಡೆಯಲಿರುವ ಸಭೆಯಲ್ಲಿ ಈ ಕುರಿತು ವಿಸ್ತೃತ ಮಾತುಕತೆ ನಡೆಸುವುದಾಗಿ ಹೇಳಿದೆ. ಇರಾನ್ ಮುಂದಿಟ್ಟಿರುವ ಷರತ್ತುಗಳು ಕಾರ್ಯಸಾಧ್ಯವಾದವುಗಳು ಎಂದು ಈ ಮೊದಲು ಹೇಳಿದ್ದ ಟ್ರಂಪ್ ಈಗ ತಮ್ಮ ನಿಲುವು ಬದಲಾಯಿಸಿದ್ದಾರೆ. ಈ ಅಂಶಗಳ ಕುರಿತು ವಿಸ್ತೃತವಾದ ವಿವರಣೆ ನೀಡದಿದ್ದಲ್ಲಿ ಕದನ ವಿರಾಮ ಕುರಿತ ಇರಾನ್ ಯೋಜನೆಯೇ ವಂಚನೆ ಎನಿಸಲಿದೆ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಈ ಕುರಿತು ಅವರು ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ 'ಟ್ರೂತ್ ಸೋಷಿಯಲ್'ನಲ್ಲಿ ಬರೆದುಕೊಂಡಿದ್ದಾರೆ.


ಡೊನಾಲ್ಡ್ ಟ್ರಂಪ್


ಮೊಜ್ತಾಬ ಖಮೇನಿ

ಇರಾನ್ ಸಮ್ಮತಿ: ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸಿರುವುದನ್ನು ಖಚಿತಪಡಿಸಿದ ಇರಾನ್ ವಿದೇಶಾಂಗ ಸಚಿವ ಸೈಯದ್ ಅಬ್ಬಾಸ್ ಅರಾಗ್ಚಿ ■ 11ನೇ ಪುಟಕ್ಕೆ

ಈ ಶಾಂತಿ ಸದಾ ಉಳಿಯಲಿ: ಭಾರತದ ಆಶಯ

ನವದೆಹಲಿ, ಏ.8– ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಕದನ ವಿರಾಮವನ್ನು ಸ್ವಾಗತಿಸುತ್ತೇವೆ ಮತ್ತು ಅದು ಪಶ್ಚಿಮ ಏಷ್ಯಾದಲ್ಲಿ ಶಾಶ್ವತ ಶಾಂತಿಯನ್ನು ಸ್ಥಾಪಿಸುತ್ತದೆ ಎಂದು ಆಶಿಸುತ್ತೇವೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ನಾವು ಹಿಂದೆ ಪದೇ ಪದೆ ಹೇಳಿದಂತೆ, ನಡೆಯುತ್ತಿರುವ ಸಂಘರ್ಷವನ್ನು ಸಾಧ್ಯವಾದಷ್ಟು ಬೇಗ ಕೊನೆಗೊಳಿಸಿ ಉದ್ವಿಗ್ನತೆಯನ್ನು ಕಡಿಮೆ ಮಾಡುವುದು, ಸಂವಾದ ಮತ್ತು ರಾಜತಾಂತ್ರಿಕತೆ ಅತ್ಯಗತ್ಯ ಎಂದು ಸಚಿವಾಲಯ ಹೇಳಿದೆ.

ಈ ಸಂಘರ್ಷ ಈಗಾಗಲೇ ಜನರಿಗೆ ಅಪಾರ ನೋವನ್ನುಂಟು ಮಾಡಿದೆ. ಜಾಗತಿಕ ಇಂಧನ ಪೂರೈಕೆ ಮತ್ತು ವ್ಯಾಪಾರ ಜಾಲಗಳಿಗೆ ಅಡ್ಡಿಪಡಿಸಿದೆ. ಹಾರ್ಮುಜ್ ಜಲಸಂಧಿಯ ಮೂಲಕ ಸಂಚಾರ ಮೊದಲಿನಂತೆಯೇ ಯಾವುದೇ ■ 11ನೇ ಪುಟಕ್ಕೆ

ವಿಶ್ವ ಶಾಂತಿಗೆ ದೊಡ್ಡ ದಿನ

ವಾಷಿಂಗ್ಟನ್: ಕಳೆದೊಂದು ತಿಂಗಳಿನಿಂದ ನಡೆಯುತ್ತಿದ್ದ ಅಮೆರಿಕ–ಇಸ್ರೇಲ್–ಇರಾನ್ ಯುದ್ಧಕ್ಕೆ ಕೊನೆಗೂ ಕದನ ವಿರಾಮ ಘೋಷಣೆಯಾಗಿದ್ದು ಇದರ ಬೆನ್ನಲ್ಲೇ ಇರಾನ್ ಕ್ರಮವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಅತ್ತ ಇರಾನ್ ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸುತ್ತಲೇ ಇತ್ತ ಸುದ್ದಿಗಾರರೊಂದಿಗೆ ಮಾತನಾಡಿದ ಡೊನಾಲ್ಡ್ ಟ್ರಂಪ್, ಇರಾನ್ ನಡೆಯನ್ನು ಸ್ವಾಗತಿಸಿದ್ದಾರೆ. ಮಾತ್ರವಲ್ಲದೇ ಅಮೆರಿಕ ಸುತ್ತಲೂ ಇರುತ್ತದೆ. ಹೋರ್ಮುಜ್ ಜಲಸಂಧಿಯಲ್ಲಿ ಸಂಚಾರ ಹೆಚ್ಚಳವನ್ನು ನಿರ್ವಹಿಸಲು ಅಮೆರಿಕ ಸಹಾಯ ಮಾಡುತ್ತದೆ ಎಂದು ಘೋಷಿಸಿದ್ದಾರೆ. ಇರಾನ್ ಮಿಲಿಟರಿ ಕಾರ್ಯಾಚರಣೆಗಳನ್ನು ವಿರಾಮಗೊಳಿಸಲು ಮತ್ತು ಸುರಕ್ಷಿತ ಮಾರ್ಗವನ್ನು ಅನುಮತಿಸಲು ಅಮೆರಿಕ ಒಪ್ಪುತ್ತದೆ. ಎರಡು ವಾರಗಳ ಒಪ್ಪಂದವು ವಿಶಾಲ ಮಾತುಕತೆಗಳಿಗೆ ಮತ್ತು ಸಂಭಾವ್ಯ ಶಾಂತಿ ಶೃಂಗಸಭೆಗೆ ಕಾರಣವಾಗಬಹುದು ಎಂದು ಟ್ರಂಪ್ ಅಭಿಪ್ರಾಯಪಟ್ಟಿದ್ದಾರೆ.

ಇರಾನ್‌ಗೆ ಶಸ್ತ್ರಾಸ್ತ್ರ ಪೂರೈಸುವ ದೇಶದ ಮೇಲೆ ಶೇ.50 ಸುಂಕ

ವಾಷಿಂಗ್ಟನ್: ಕಳೆದೊಂದು ತಿಂಗಳಿನಿಂದ ನಡೆಯುತ್ತಿದ್ದ ಅಮೆರಿಕ–ಇಸ್ರೇಲ್–ಇರಾನ್ ಯುದ್ಧಕ್ಕೆ ತಾತ್ಕಾಲಿಕ ಬ್ರೇಕ್ ಹಾಕಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದೀಗ ಹೊಸ ಬೆದರಿಕೆ ಹಾಕಿದ್ದಾರೆ.

ಇರಾನ್‌ಗೆ ಸೇನಾ ಶಸ್ತ್ರಾಸ್ತ್ರಗಳನ್ನು ಪೂರೈಸುವ ಯಾವುದೇ ದೇಶಗಳಿಂದ ಅಮೆರಿಕಕ್ಕೆ ರಫ್ತು ಆಗುವ ಎಲ್ಲಾ ಸರಕುಗಳ ಮೇಲೆ ತಕ್ಷಣವೇ ಶೇಕಡಾ 50 ರಷ್ಟು ಸುಂಕ ವಿಧಿಸುತ್ತೇವೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ತಮ್ಮ ಟ್ರುತ್ ಸಾಮಾಜಿಕ ಮಾಧ್ಯಮದ ಮೂಲಕ ಟ್ರಂಪ್ ಈ ಹೊಸ ಬೆದರಿಕೆ ಹಾಕಿದ್ದು, ಈ ಕ್ರಮವು ತಕ್ಷಣವೇ ಜಾರಿಗೆ ಬರುತ್ತದೆ ಮತ್ತು ಯಾವುದೇ ವಿನಾಯಿತಿ ಇರುವುದಿಲ್ಲ ಎಲ್ಲಾ ಸರಕುಗಳಿಗೆ ಅನ್ವಯಿಸುತ್ತದೆ ಎಂದು ಹೇಳಿದ್ದಾರೆ.

ಇರಾನ್‌ಗೆ ಸೇನಾ ಶಸ್ತ್ರಾಸ್ತ್ರಗಳನ್ನು ಪೂರೈಸುವ ದೇಶವು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾಕ್ಕೆ ಮಾರಾಟ ಮಾಡುವ ಯಾವುದೇ ಮತ್ತು ಎಲ್ಲಾ ಸರಕುಗಳ ಮೇಲೆ ತಕ್ಷಣವೇ ಶೇ. 50 ರಷ್ಟು ಸುಂಕವನ್ನು ವಿಧಿಸಲಾಗುತ್ತದೆ. ಇದು ತಕ್ಷಣವೇ ಜಾರಿಗೆ ಬರುತ್ತದೆ. ಯಾವುದೇ ವಿನಾಯಿತಿ ಇರುವುದಿಲ್ಲ ಎಂದು ಟ್ರಂಪ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಅನುಕೂಲವಾಗುವಂತೆ ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಎರಡು ವಾರಗಳ ಕದನ ವಿರಾಮ ಘೋಷಣೆಯಾದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಆಟೋ ಗ್ಯಾಸ್ ಕೊರತೆ ಬರೀ ವದಂತಿ

● ಆಹಾರ ಇಲಾಖೆ ಸ್ಪಷ್ಟನೆ ● ಖಾಸಗಿ ಆಟೋ ಗ್ಯಾಸ್ ಸಂಸ್ಥೆಗಳಲ್ಲಿ ಅಷ್ಟೇ ಕೊರತೆ

ಬೆಂಗಳೂರು, ಏ.8(ಕೆಎಂಶಿ)–ರಾಜ್ಯದಲ್ಲಿ ಆಟೋ ಗ್ಯಾಸ್ ದಾಸ್ತಾನು ಕೊರತೆಯಿದೆ ಎಂಬ ವರದಿಗಳು ವದಂತಿಗಳಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸ್ಪಷ್ಟಪಡಿಸಿದೆ.

ಕಳೆದ ಕೆಲವು ದಿನಗಳಿಂದ ಆಟೋ ಮಾಲೀಕರು ಮತ್ತು ಚಾಲಕರು ಬಂಕ್‌ಗಳ ಮುಂದೆ ಸರತಿ ಸಾಲಿನಲ್ಲಿ ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕೆಲವು ಖಾಸಗಿ ಆಟೋ ಗ್ಯಾಸ್ ಸರಬರಾಜು ಸಂಸ್ಥೆಗಳಲ್ಲಿ ಮಾತ್ರ ಅಲ್ಪಮಟ್ಟಿನ ಕೊರತೆ ಕಂಡುಬಂದಿದ್ದು, ಇದನ್ನು ಸರಿಪಡಿಸಲು ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ತೈಲ ಕಂಪನಿಗಳ ಮೂಲಕ ಹೆಚ್ಚಿನ ಅನಿಲ ಪೂರೈಕೆ ಮಾಡಲಾಗುತ್ತಿದೆ.

ಈ ಮೂರು ಸಂಸ್ಥೆಗಳು ಸರಾಸರಿ 56.67 ಮೆಟ್ರಿಕ್ ಟನ್ ಆಟೋ ಗ್ಯಾಸ್ ಸರಬರಾಜು ಮಾಡುತ್ತಿದ್ದು, ಪ್ರಸ್ತುತ ಬೇಡಿಕೆ ಪೂರೈಸಲು ಸರಬರಾಜು ಪ್ರಮಾಣ ಗಣನೀಯವಾಗಿ ಹೆಚ್ಚಿಸಲಾಗಿದ್ದು, ಸದ್ಯ ಪ್ರತಿದಿನ ಸರಾಸರಿ 83.58 ಮೆಟ್ರಿಕ್ ಟನ್ ಗ್ಯಾಸ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ಪೂರೈಸಲಾಗುತ್ತಿದೆ. ಕಳೆದ ಏಪ್ರಿಲ್ 2ರಿಂದ ಏಪ್ರಿಲ್ 6ರವರೆಗಿನ ಅಂಕಿ–



ಅಂಶಗಳನ್ನು ಗಮನಿಸಿದರೆ, ಪೂರೈಕೆಯಲ್ಲಿ ಸ್ಥಿರತೆ ಕಂಡುಬರುತ್ತದೆ. ಏಪ್ರಿಲ್ 2ರಂದು 87.78 ಮೆಟ್ರಿಕ್ ಟನ್, ಏಪ್ರಿಲ್ 3ರಂದು 86.05 ಮೆಟ್ರಿಕ್ ಟನ್, ಏಪ್ರಿಲ್ 4ರಂದು 84.80 ಮೆಟ್ರಿಕ್ ಟನ್, ಏಪ್ರಿಲ್ 5ರಂದು ಗರಿಷ್ಠ 94.11 ಮೆಟ್ರಿಕ್ ಟನ್ ಹಾಗೂ ಏಪ್ರಿಲ್ 6ರಂದು 83.58 ಮೆಟ್ರಿಕ್ ಟನ್ ಅನಿಲವನ್ನು ಸಂಸ್ಥೆಗಳು ಯಶಸ್ವಿಯಾಗಿ ಪೂರೈಸಿವೆ. ಆಟೋ ಮಾಲೀಕರು ಮತ್ತು ಚಾಲಕರು ಯಾವುದೇ ಸುಳ್ಳು ವದಂತಿ ನಂಬಬಾರದು ಮತ್ತು ಆತಂಕಕ್ಕೆ ಒಳಗಾಗಿ ಬಂಕ್‌ಗಳ ಮುಂದೆ ಸಾಲುಗಟ್ಟಿ ನಿಲ್ಲಬಾರದು ಎಂದು ಸರ್ಕಾರ ಮನವಿ ಮಾಡಿದೆ. ಅನಿಲ ಪೂರೈಕೆ ವ್ಯವಸ್ಥಿತವಾಗಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಪ್ರಕಟಣೆ ತಿಳಿಸಿದೆ.

ಇಂದು ಸಂಜೆ ದ್ವಿತೀಯ ಪಿಯು ಫಲಿತಾಂಶ

ಬೆಂಗಳೂರು, ಏ.8(ಕೆಎಂಶಿ)–ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ನಾಳೆ (ಗುರುವಾರ) ಸಂಜೆ ಪ್ರಕಟಗೊಳ್ಳಲಿದೆ.



ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪತ್ರಿಕಾ ಹೇಳಿಕೆ ನೀಡಿ, ಫೆ.28ರಿಂದ ಮಾ.17 ರವರೆಗೆ ರಾಜ್ಯಾದ್ಯಂತ ನಡೆದ ಪರೀಕ್ಷೆಯ ಫಲಿತಾಂಶ ಪ್ರಕಟಿಸಲಾಗುತ್ತಿದೆ ಎಂದಿದ್ದಾರೆ. ಏಕಕಾಲಕ್ಕೆ ಆಯಾ ಕಾಲೇಜುಗಳು ಹಾಗೂ ಜಾಲತಾಣದಲ್ಲಿ ಫಲಿತಾಂಶ ಪ್ರಕಟಗೊಳ್ಳಲಿದ್ದು, ರಾಜ್ಯಾದ್ಯಂತ 7,10,363 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಿಗೆ ಗುರುವಾರ ನಡೆಯಲಿರುವ ಮತದಾನ ಮುಗಿಯುತ್ತಿದ್ದಂತೆ ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ಕಚೇರಿಯಲ್ಲಿ ನಡೆಯಲಿರುವ ಸುದ್ದಿಗೋಷ್ಠಿಯಲ್ಲಿ ಫಲಿತಾಂಶ ಪ್ರಕಟಿಸಲಾಗುವುದು ಎಂದಿದ್ದಾರೆ.



ಇಂದು ದಾವಣಗೆರೆ ದಕ್ಷಿಣ, ಬಾಗಲಕೋಟೆಯಲ್ಲಿ ಮತದಾನ


ಬೆಂಗಳೂರು, ಏ.8– ಕರ್ನಾಟಕದಲ್ಲಿ ಉಪ ಚುನಾವಣೆ ಕದನ ಕ್ಲೈಮ್ಯಾಕ್ಸ್ ಘಟ್ಟಕ್ಕೆ ತಲುಪಿದೆ. ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆ ಮತ್ತು ಪ್ರತಿಪಕ್ಷ ಬಿಜೆಪಿ ಸವಾಲಿನ ಪ್ರಶ್ನೆಯಾಗಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಎರಡು ಕ್ಷೇತ್ರಗಳಲ್ಲಿ ಬೆಳಗಾದರೆ ಮತದಾನ ಶುರುವಾಗಿದೆ.

ಒಂದೆಡೆ ಚುನಾವಣೆ ಅಧಿಕಾರಿಗಳು ಕೊನೆಯ ಹಂತದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿದೆ. ಮತದಾರರು ಕೂಡ ತಮ್ಮ ನೆಚ್ಚಿನ ಅಭ್ಯರ್ಥಿಗಳಿಗೆ ವೋಟ್ ಮಾಡಲು ಸಜ್ಜಾಗಿದ್ದಾರೆ. ಮಂಗಳವಾರ ಸಂಜೆ 5.30ಕ್ಕೆ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿತ್ತು. ಕಳೆದೊಂದು ವಾರದಿಂದ ಕ್ಷೇತ್ರದಲ್ಲೇ ಬೀಡುಬಿಟ್ಟು ಬಿರುಸಿನ ಪ್ರಚಾರ ನಡೆಸಿದ್ದ ನಾಯಕರು ಕ್ಷೇತ್ರಬಿಟ್ಟು ವಾಪಸ್ ತೆರಳಿದ್ದಾರೆ. ನಾಳೆ ಬೆಳಗ್ಗೆ 7 ಗಂಟೆಯಿಂದ ಸಂಜೆ 6ಗಂಟೆಯವರೆಗೆ ಮತದಾನ ನಡೆಯಲಿದೆ.

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಮರ್ಥ್ ಶಾಮನೂರ್, ಬಿಜೆಪಿ ಯಿಂದ ಟಿ. ಶ್ರೀನಿವಾಸ್‌ದಾಸ ಕರಿಯಪ್ಪ ಹಾಗೂ ಬಾಗಲಕೋಟೆಯಲ್ಲಿ ವೀರಣ್ಣ ಚರಂತಿ ಮಠ ಬಿಜೆಪಿ ಮತ್ತು ಉಮೇಶ್ ಮೇಟಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಇವರ ನಡುವೆ ನೇರ ಸ್ಪರ್ಧೆ ಇದೆ.

ರಾಜ್ಯದಲ್ಲಿ ಅಂತರ್ಜಲ ಮಟ್ಟದಲ್ಲಿ ಸುಧಾರಣೆ

ಬೆಂಗಳೂರು, ಏ.8(ಕೆಎಂಶಿ)–ಕಳೆದ ಮುಂಗಾರಿನಲ್ಲಿ ಬಿದ್ದಿರುವ ಉತ್ತಮ ಮಳೆ ಹಾಗೂ ಜಲ ಸಂರಕ್ಷಣಾ ನೀತಿಗಳಿಂದ ಕರ್ನಾಟಕದಲ್ಲಿ ಅಂತರ್ಜಲ ಮಟ್ಟ ಹೆಚ್ಚಿದೆ ಎಂದು ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ್ ಇಂದಿಲ್ಲಿ ತಿಳಿಸಿದ್ದಾರೆ.



ಅಂತರ್ಜಲ ಬಳಕೆಯಲ್ಲಿ ಗಣನೀಯ ಇಳಿಕೆ ಮತ್ತು ವಾರ್ಷಿಕ ಮರುಪೂರಣ ಪ್ರಮಾಣದಲ್ಲಿನ ಭಾರೀ ಏರಿಕೆ ಜಲ ಸುಸ್ಥಿರತೆಗೆ ಸರ್ಕಾರ ಕೈಗೊಂಡ ಕ್ರಮದಿಂದ ಅಂತರ್ಜಲ ಮಟ್ಟ ಹೆಚ್ಚಿದೆ. ವೈಜ್ಞಾನಿಕ ಜಲ ನಿರ್ವಹಣೆ, ಕೆರೆಗಳ ಪುನಃಶ್ಚೇತನ ಹಾಗೂ ಜಲ ಸಂರಕ್ಷಣಾ ರಚನೆಗಳ ನಿರ್ಮಾಣ ಅಂತರ್ಜಲ ಹೆಚ್ಚಲು ಕಾರಣವಾಗಿದೆ. ಉತ್ತಮ ಮಳೆ ಹಾಗೂ ಜನಜಾಗೃತಿ ಅಭಿಯಾನದ ಪರಿಣಾಮ ಅಂತರ್ಜಲ ಬಳಕೆಯಲ್ಲಿ ಗಣನೀಯ ಇಳಿಕೆ ಕಂಡು ಬಂದಿದೆ ಎಂದರು. 2025ನೇ ಸಾಲಿನ ಅಂತರ್ಜಲ ಮೌಲ್ಯಮಾಪನ ವರದಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.



ಮೂಕಪ್ರಾಣಿಗಳ ಸಂತಾನ ಸಂಹಾರಕ್ಕೆ ಮುಂದಾದ ಘನ ಸರ್ಕಾರ!

ವನ್ಯಜೀವಿಗಳ ಸಂತಾನ ಶಕ್ತಿ ಹರಣಕ್ಕೆ ಚಿಂತನೆ



● ಅರಣ್ಯ ಸಚಿವರ ಮಾಸ್ಟರ್ ಪ್ಲಾನ್ ● ಕನಿಷ್ಠ ಎರಡು ವರ್ಷ ಈ ಪ್ರಯೋಗ ಅನಿವಾರ್ಯ; ಪ್ರತಿಪಾದನೆ ● ಮಾನವ–ವನ್ಯಜೀವಿ ಸಂಕಷ್ಟ ತಡೆಗೆ ಕಂಡುಕೊಂಡ ಉಪಾಯವಿದು

ಬೆಂಗಳೂರು, ಏ.8(ಕೆಎಂಶಿ)–ಮಾನವ– ವನ್ಯಜೀವಿ ಸಂಘರ್ಷ ತಪ್ಪಿಸಲು ಆನೆ, ಹುಲಿ, ಚಿರತೆ ಸೇರಿದಂತೆ ಆಯ್ದ ವನ್ಯಜೀವಿಗಳ ಸಂತಾನ ಶಕ್ತಿ ಹರಣಕ್ಕೆ ಸರ್ಕಾರ ಮುಂದಾಗಿದೆ.

ಇಂತಹ ಪ್ರಾಣಿಗಳ ಸಂತಾನ ಶಕ್ತಿ ಹರಣ ಅಥವಾ ಚುಚ್ಚುಮದ್ದು ನೀಡುವ ಕುರಿತು ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಗರಹೊಳೆ, ಬಂಡೀಪುರ, ಭದ್ರಾ ಸೇರಿದಂತೆ ರಾಜ್ಯಾದ್ಯಂತದ ಕಾಡಂಚಿನ ಭಾಗದಲ್ಲಿ ಮಾನವ ಮತ್ತು ವನ್ಯಜೀವಿಗಳ ಸಂಘರ್ಷದಿಂದ ಇತ್ತೀಚೆಗೆ ಭಾರೀ ಸಾವು–ನೋವುಗಳು ಹೆಚ್ಚಾಗಿವೆ. ಆನೆ, ಚಿರತೆ, ಹುಲಿ ಸಂಖ್ಯೆ ಹೆಚ್ಚಳದಿಂದ ಆಹಾರಕ್ಕಾಗಿ ವನ್ಯಜೀವಿಗಳು ಜನವಸತಿ ಪ್ರದೇಶಗಳಿಗೆ ಪ್ರವೇಶಿಸುತ್ತಿವೆ. ಇಂತಹ ಸಂಘರ್ಷ ತಡೆಯಲು ಕನಿಷ್ಠ 2 ವರ್ಷ ಆಯ್ದ ವನ್ಯಜೀವಿಗಳ ಸಂತಾನ ಹರಣ ಚಿಕಿತ್ಸೆ ಅನಿವಾರ್ಯ. ವನ್ಯಜೀವಿಗಳ ಸಂತಾನಶಕ್ತಿ ಹರಣ ಅಥವಾ ಚುಚ್ಚುಮದ್ದು ನೀಡುವ ಬಗ್ಗೆ ಚಿಂತನೆ ಅಗತ್ಯವಿದ್ದು, ಸಾರ್ವಜನಿಕವಾಗಿ ಚರ್ಚೆಯೂ ನಡೆಯಬೇಕಿದೆ ಎಂದರು.



ಈಶ್ವರ್ ಖಂಡ್ರೆ

ಕೆಲವು ವನ್ಯಜೀವಿಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳವಾಗಿದೆ. ಇವುಗಳ ಸಂಖ್ಯೆಗೆ ಕಡಿವಾಣ ಹಾಕುವ ಅಗತ್ಯವೂ ಕಂಡು ಬರುತ್ತಿದೆ. ವನ್ಯಜೀವಿಗಳ ಸಂರಕ್ಷಣೆಯೂ ಆಗಬೇಕು, ಅಮೂಲ್ಯ ಜೀವಹಾನಿಯೂ ತಪ್ಪಬೇಕು. ಮಾನವರ ಜೀವ ಉಳಿಸುವ ಕೆಲಸವೂ ಆಗಬೇಕಿದೆ. ಇದು ನಿರ್ಧಾರವಲ್ಲ, ಒಂದು ಚಿಂತನೆ ಮಾತ್ರ ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆ ಅಗತ್ಯವಿದೆ. ಜೊತೆಗೆ ತತ್ಸಂಬಂಧ ಪ್ರಕರಣ ಸರ್ವೋಚ್ಚ ನ್ಯಾಯಾಲಯದಲ್ಲಿದ್ದು, ತಜ್ಞರು, ಕಾನೂನು ಪಂಡಿತರೊಂದಿಗೆ ಚರ್ಚಿಸಿ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ಹಿರಿಯ ಅಧಿಕಾರಿ ಗಳೊಂದಿಗೆ ಸಭೆ ನಡೆಸಲಾಗುತ್ತದೆ ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು. ಯಾವ ಭಾಗದಲ್ಲಿ ಯಾವ ವನ್ಯಜೀವಿಗಳ ಸಂಖ್ಯೆ ಯಲ್ಲಿ ಭಾರೀ ಹೆಚ್ಚಳವಾಗುತ್ತದೆಯೋ ಅಲ್ಲಿ ಒಂದೆರಡು ವರ್ಷ ನಿಯಂತ್ರಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ಬೇರೆ ರಾಜ್ಯಗಳಲ್ಲೂ ಇಂತಹ ಆಲೋಚನೆ, ಚಿಂತನೆ ಇದೆ. ಈ ಬಗ್ಗೆ ಸಾರ್ವಜನಿಕ ಚರ್ಚೆ ■ 11ನೇ ಪುಟಕ್ಕೆ



ಮೃಗಾಲಯಗಳಲ್ಲಿರುವ ಪ್ರಾಣಿಗಳಿಗೆ ಸಂತಾನ ಶಕ್ತಿ ಹರಣ ಮಾಡಬಹುದು. ಆದರೆ ಕಾಡು ಪ್ರಾಣಿಗಳಿಗೆ ಮಾಡಲು ಸಾಧ್ಯವೇ ಇಲ್ಲ. ಈ ವಿಚಾರವಾಗಿ ಸರ್ಕಾರ ಚಿಂತನೆ ಕೂಡ ಮಾಡಬಾರದು. ಇದರಿಂದ ವನ್ಯಜೀವಿಗಳ ದೈಹಿಕ ಹಾಗೂ ಮಾನಸಿಕ ನಡವಳಿಕೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಅವುಗಳ ಆರೋಗ್ಯಕ್ಕೆ ಕುತ್ತು ಉಂಟಾಗುತ್ತದೆ. ಅವುಗಳು ಸಾವನ್ನಪ್ಪುವ ಸಾಧ್ಯತೆಯೂ ಇದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಈ ವಿಚಾರದಲ್ಲಿ ನಿರ್ಧಾರ ಮಾಡುವುದಿರಲಿ, ಚಿಂತನೆ ಕೂಡ ಮಾಡಬಾರದು.

– ಕೃಪಾಕರ ಸೇನಾನಿ, ವನ್ಯಜೀವಿ ತಜ್ಞರು



ಮೈಸೂರು ಮಿತ್ರ ಗುರುವಾರ 9 ಏಪ್ರಿಲ್ 2026

ಮೈಸೂರು ಬಾಲ ಕಾರ್ಮಿಕ ಮುಕ್ತ ಜಿಲ್ಲೆಯಾಗಬೇಕು

ಮೈಸೂರು,ಏ.8(ಎಂಕೆ)–ಮೈಸೂರನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಲು ಅಧಿಕಾರಿಗಳು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೂಚಿಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಕಾರ್ಮಿಕ ಇಲಾಖೆಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಹಾಗೂ ಜಿಲ್ಲಾ ಕಾರ್ಯಪಡೆ ಸಮಿತಿ ಸದಸ್ಯರೊಂದಿಗೆ ಸಭೆ ನಡೆಸಿದ ಅವರು, ಬಾಲ ಕಾರ್ಮಿಕ ಮಕ್ಕಳು ಹೆಚ್ಚಾಗಿ ಕಂಡು ಬರುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿನ ಪ್ರಮುಖ ವ್ಯಕ್ತಿಗಳ ಅಧ್ಯಕ್ಷತೆಯಲ್ಲಿ ಜಾಗೃತಿ ಶಿಬಿರಗಳನ್ನು ಆಯೋಜಿಸಿ, ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಬೇಕು. ಹಾಗೆಯೇ ಹೆಚ್ಚಿನ ಜಾಗೃತಿ ಶಿಬಿರಗಳನ್ನು ಆಯೋಜಿಸಿ ಮುಂದಿನ ಸಭೆಗೆ ಮಾಹಿತಿ ನೀಡಬೇಕು ಎಂದರು.

ಶಿಕ್ಷಣದಿಂದ ಮಕ್ಕಳು ವಂಚಿತರಾಗಬಾರದು. ಈ ನಿಟ್ಟಿನಲ್ಲಿ ಬಾಲಕಾರ್ಮಿಕರನ್ನು ಪತ್ತೆ ಹಚ್ಚಲು ಅಧಿಕಾರಿಗಳು ನಿಯಮಿತವಾಗಿ ಪರಿಶೀಲನೆಗಳನ್ನು ನಡೆಸಬೇಕು. ಬಾಲ ಕಾರ್ಮಿಕರು ಹಾಗೂ ಕಿಶೋರ ಕಾರ್ಮಿಕರನ್ನು ಶಾಲೆಗೆ ದಾಖಲಿಸಿ, ಅವರು ವಿದ್ಯಾಭ್ಯಾಸ ಮುಂದುವರಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಬಾಲ ಕಾರ್ಮಿಕರ ಪೋಷಕರು ತಮ್ಮ ಮಕ್ಕಳನ್ನು ಓದಿಸುವ ಸ್ಥಿತಿಯಲ್ಲಿ ಇಲ್ಲದಿದ್ದರೆ ಅಂತಹ ಮಕ್ಕಳನ್ನು ವಸತಿ ಶಾಲೆಗೆ ಸೇರಿಸಲು ಕ್ರಮ ವಹಿಸುವಂತೆ ಎಡಿಸಿ ಶಿವರಾಜು ಸಲಹೆ ನೀಡಿದರು.

ಜಿಲ್ಲೆಯ ರಸ್ತೆ ಬದಿಗಳಲ್ಲಿ ಮಕ್ಕಳು ಭಿಕ್ಷಾಟನೆ ಮಾಡುವುದನ್ನು ತಡೆಯಲು ಹಾಗೂ ಅವರಿಗೆ ಪುನರ್ವಸತಿ ಕಲ್ಪಿಸಿ ಶಿಕ್ಷಣ ನೀಡಲು ಅಧಿಕಾರಿಗಳು ಸಂಘಟಿತರಾಗಿ ಕೆಲಸ ನಿರ್ವಹಿಸಬೇಕು. ಸಮಾಜ ಕಲ್ಯಾಣ ಇಲಾಖೆ, ಮಕ್ಕಳ ರಕ್ಷಣಾಧಿಕಾರಿಗಳ ಕಚೇರಿ, ಪೊಲೀಸ್ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳು ಭಿಕ್ಷಾಟನೆ ಮಾಡುವ ಮಕ್ಕಳನ್ನು ರಕ್ಷಿಸಿ, ವಸತಿ ಕಲ್ಪಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.

ಈ ವೇಳೆ ಸಹಾಯಕ ಕಾರ್ಮಿಕ ಆಯುಕ್ತೆ ಲಲಿತಾ ಬಾಯಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್‌ಕುಮಾರ್, ಮೈಸೂರು ವಾಣಿಜ್ಯ–ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಯೋಗೇಶ್‌ಕುಮಾರ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಮುಖ್ಯಸ್ಥರು ಇದ್ದರು.

ಜಾಗೃತಿ ಕಾರ್ಯಕ್ರಮಕ್ಕೆ ಎಡಿಸಿ ಸೂಚನೆ



ಕಾರ್ಮಿಕ ಇಲಾಖೆಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಹಾಗೂ ಜಿಲ್ಲಾ ಕಾರ್ಯಪಡೆ ಸಮಿತಿ ಸದಸ್ಯರೊಂದಿಗೆ ಎಡಿಸಿ ಡಾ.ಪಿ.ಶಿವರಾಜು ಸಭೆ ನಡೆಸಿದರು.

1,62,000 ರೂ. ದಂಡ ವಸೂಲಿ

ಮೈಸೂರು ಜಿಲ್ಲೆಯಲ್ಲಿ 2025 ಏಪ್ರಿಲ್‌ನಿಂದ 2026 ಮಾರ್ಚ್ ತಿಂಗಳವರೆಗೆ 1,483 ದಾಳಿಗಳನ್ನು ನಡೆಸಿ 3 ಬಾಲ ಕಾರ್ಮಿಕರು, 34 ಕಿಶೋರ ಕಾರ್ಮಿಕರನ್ನು ರಕ್ಷಣೆ ಮಾಡಲಾಗಿದೆ. ಅಲ್ಲದೆ ಬಾಲ ಮತ್ತು ಕಿಶೋರ ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದವರ ವಿರುದ್ಧ 12 ಪ್ರಕರಣಗಳು ದಾಖಲಾಗಿದ್ದು, 1,62,000 ದಂಡ ವಸೂಲಿ ಮಾಡಲಾಗಿದೆ. **–ಕಾರ್ಮಿಕ ಇಲಾಖೆ ಅಧಿಕಾರಿಗಳು.**

ಆಟೋ ಗ್ಯಾಸ್ ಅಭಾವದಲ್ಲಿ ಬಿಜೆಪಿ ಷಡ್ಯಂತ್ರ

• ಬಿಜೆಪಿ ನಾಯಕರಿಂದ ಸರ್ಕಾರದ ವಿರುದ್ಧ ಆಪಾದನೆ • ಮೇ 4ರ ನಂತರ ಗ್ಯಾಸ್ ದರ ಗಗನಕ್ಕೆ • ನೀರಿನ ದರ ಹೆಚ್ಚಳ ಸಮರ್ಥಿಸಿಕೊಂಡ ಲಕ್ಷ್ಮಣ್

ಮೈಸೂರು, ಏ.8(ಜಿಎ)–ರಾಜ್ಯದಲ್ಲಿ ಆಟೋ ಗ್ಯಾಸ್ ಅಭಾವದ ಬಗ್ಗೆ ಆಟೋ ಚಾಲಕರನ್ನು ಮುಂದೆ ಬಿಟ್ಟು ರಾಜ್ಯ ಸರ್ಕಾರದ ವಿರುದ್ಧ ಆಪಾದನೆ ಮಾಡುವಂತೆ ಬಿಜೆಪಿ ನಾಯಕರು ಷಡ್ಯಂತ್ರ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ಮೈಸೂರು ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಧನ ಪೂರೈಕೆ ಮಾಡುವುದು ಕೇಂದ್ರ ಸರ್ಕಾರ. ಕೇಂದ್ರ ಸರ್ಕಾರದ ಮೇಲೆ ಆಪಾದನೆ ಮಾಡುವುದನ್ನು ಬಿಟ್ಟು ರಾಜ್ಯ ಸರ್ಕಾರದ ಮೇಲೆ ಬಿಜೆಪಿ ನಾಯಕರು ಮಾಡುತ್ತಿದ್ದಾರೆ ಎಂದರು.

ಆಟೋ ಸಂಘಟನೆಗಳ ಪದಾಧಿಕಾರಿಗಳು ಅಂತ ಹೇಳಿಕೊಂಡು ರಾಜ್ಯ ಸರ್ಕಾರದ ವಿರುದ್ಧ ಮಾತನಾಡುತ್ತಾರೆ. ಕಳೆದ ಒಂದು ತಿಂಗಳ ಹಿಂದೆ ಒಂದು ಕೆಜಿ ಗ್ಯಾಸ್‌ಗೆ 60 ರೂ. ಇತ್ತು ಈಗ 162 ರೂ. ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಸುಮಾರು 5 ಲಕ್ಷ ಆಟೋ ಚಾಲಕರು, ಗಿಗ್ ವರ್ಕರ್ಸ್‌ಗೆ ಸಮಸ್ಯೆ ಎದುರಾಗಿದೆ.

ಈ ವಿಚಾರವಾಗಿ ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಸೋಮಣ್ಣ, ಶೋಭಕ್ಕ, ಕುಮಾರಸ್ವಾಮಿ ಯಾರೂ ತುಟಿ ಬಿಚ್ಚುತ್ತಿಲ್ಲ. ರಾಜ್ಯ ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಮಾಡುವವರಿಗೆ ಕನಿಷ್ಠ ಸಾಮಾನ್ಯ ಜ್ಞಾನ ಇಲ್ಲ. ಕುಮಾರ ಸ್ವಾಮಿ ಅವರು ರಾಜ್ಯ ಸರ್ಕಾರ ಆಟೋ ಚಾಲಕರಿಗೆ ಪರಿಹಾರ ಕೊಡಬೇಕು ಎನ್ನುತ್ತಾರೆ. ಕರ್ನಾಟಕ ಸರ್ಕಾರ ಯಾಕೆ ಕೊಡಬೇಕು? ಕೇಂದ್ರ ಸರ್ಕಾರದಿಂದ ನೀವು ಕೊಡಿಸಿ ಎಂದರು.



ಎಂ.ಲಕ್ಷ್ಮಣ್

ನೀರಿನ ದರ ಏರಿಕೆ ಸಮರ್ಥನೆ: ಮೈಸೂರು ಮಹಾ ನಗರಪಾಲಿಕೆ ನೀರಿನ ದರ ಏರಿಕೆ ಮಾಡಿರುವುದರ ಬಗ್ಗೆ ಅನಗತ್ಯ ರಾಜಕೀಯ ಮಾಡಲಾಗುತ್ತಿದೆ. ಒಂದು ಲೀಟರ್ ಬಾಟಲಿ ನೀರಿಗೆ ಜನರು 20 ರೂ. ಕೊಡುತ್ತಾರೆ. ಆದರೆ ಮನೆಗೆ ಬರುತ್ತಿರುವ ಟ್ರೀಟೆಡ್ ನೀರಿನ ವೆಚ್ಚ ಸಾವಿರ ಲೀಟರ್‌ಗೆ ಕೇವಲ 5 ರೂ. ಮಾತ್ರ. ಅಂದರೆ ಒಂದು ಲೀಟರ್‌ಗೆ ಅರ್ಧ ಪೈಸೆಯಷ್ಟೇ ವೆಚ್ಚ ಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ 0.15 ಪೈಸೆ ಹೆಚ್ಚಳ ಮಾಡಿರುವುದನ್ನು ದೊಡ್ಡ ವಿಷಯವಾಗಿ ತೋರಿಸುವುದು ತಪ್ಪು ಎಂದು ಇದೇ ವೇಳೆ ತಿಳಿಸಿದರು.

ಕಳೆದ 15 ವರ್ಷಗಳಿಂದ ನೀರಿನ ದರ ಹೆಚ್ಚಳ ಮಾಡಿರಲಿಲ್ಲ. ಇದೀಗ ಮಾಡಿದ ಏರಿಕೆಯಿಂದ ಕಾರ್ಪೋರೇಷನ್‌ಗೆ ಬರೋದು ಕೇವಲ 35 ಲಕ್ಷ ರೂ. ಮಾತ್ರ. ಆದರೆ ಇದನ್ನು ಶೇ.30ರಷ್ಟು ಏರಿಕೆ ಎಂದು ಹೇಳುವುದು ಸಂಪೂರ್ಣ ತಪ್ಪು ಮಾಹಿತಿ ಎಂದು ಸ್ಪಷ್ಟಪಡಿಸಿ, ಟೋಲ್ ದರವನ್ನು ಪ್ರತಿ ವರ್ಷ ಹೆಚ್ಚಿಸಲಾಗುತ್ತದೆ. ಅದಕ್ಕೆ ವಿರೋಧವಾಗಿ ಯಾರು ಧ್ವನಿ ಎತ್ತುವುದಿಲ್ಲ. ಆದರೆ ನೀರಿನ ದರದಲ್ಲಿ ಅಲ್ಪ ಪ್ರಮಾಣದ ಏರಿಕೆಗೆ ಮಾತ್ರ ಪ್ರತಿಭಟನೆ ಮಾಡಲಾಗುತ್ತಿದೆ ಎಂದು ಅವರು ಟೀಕಿಸಿದರು.

> **ಹೋಟೆಲ್‌ಗೆ ಗ್ಯಾಸ್ ಸರಿಯಾಗಿ ಪೂರೈಕೆ ಆಗದೆ ಬೆಂಗಳೂರಲ್ಲಿ ಶೇ.50ರಷ್ಟು ಹೋಟೆಲ್‌ಗಳು ಮುಚ್ಚಿವೆ. ವಾಣಿಜ್ಯ ಗ್ಯಾಸ್ ಸಿಲಿಂಡರ್ ಸುಮಾರು 8 ಸಾವಿರ ಕೊಟ್ಟು ಬ್ಲ್ಯಾಕ್‌ನಲ್ಲಿ ಖರೀದಿ ಮಾಡುತ್ತಿದ್ದಾರೆ. ಮೇ 4ರ ಬಳಿಕ ದೇಶದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 150 ಆಗುತ್ತೆ. ಗೃಹ ಬಳಕೆ ಸಿಲಿಂಡರ್ 2 ಸಾವಿರ ಆಗುತ್ತೆ. ವಾಣಿಜ್ಯ ಸಿಲಿಂಡರ್ 4 ಸಾವಿರ ಆಗುತ್ತೆ. ಈಗಲೇ ಏರಿಕೆ ಮಾಡಬೇಕಿತ್ತು. ಈಗ ಚುನಾವಣೆ ಇದೆ ಅಂತ ಬೆಲೆ ಏರಿಕೆ ಮಾಡುತ್ತಿಲ್ಲ. ಚುನಾವಣೆ ಮುಗಿದ ಮಾರನೇ ದಿನವೇ ಏರಿಕೆ ಮಾಡ್ತಾರೆ ಕಾದು ನೋಡಿ. –ಎಂ.ಲಕ್ಷ್ಮಣ್**

ಬಿಜೆಪಿ ನಾಯಕರು ರೈತರ ಸಮಸ್ಯೆಗಳು, ತಂಬಾಕು ಬೆಳೆಗಾರರ ಕಷ್ಟಗಳ ಬಗ್ಗೆ ಮಾತಾಡುವುದಿಲ್ಲ. ಆದರೆ ಅರ್ಧ ಪೈಸೆ ಏರಿಕೆಗೆ ಮಾತ್ರ ಹೋರಾಟ ನಡೆಸುತ್ತಿದ್ದಾರೆ ಎಂದು ಆರೋಪಿಸಿ, ತಂಬಾಕು ಬೆಳೆಗೆ ಬೆಂಬಲ ಬೆಲೆಗಾಗಿ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ಫೋಟೋ ತೆಗೆಸಿಕೊಳ್ಳುವುದರಿಂದ ಯಾವುದೇ ಪ್ರಯೋಜನವಾಗಿಲ್ಲ. ಆ ಭೇಟಿ ಬಳಿಕವೂ ಪರಿಸ್ಥಿತಿ ಇನ್ನಷ್ಟು ಕೆಡುತ್ತಿದೆ. ಅವರು ಭೇಟಿ ವೇಳೆ ಏನು ಚರ್ಚಿಸಿದರು ಎಂಬುದೇ ಸ್ಪಷ್ಟವಾಗಿಲ್ಲ ಎಂದು ಜೆಡಿಎಸ್ ನಾಯಕರ ವಿರುದ್ಧ ಕಿಡಿಕಾರಿದರು. ಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರದಿಂದಲೇ ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಿಸಲು ಜಿಲ್ಲಾಡಳಿತಕ್ಕೆ ಬ್ರಾಹ್ಮಣ ಯುವ ವೇದಿಕೆ ಮನವಿ

ಮೈಸೂರು,ಏ.8–ಶ್ರೀ ಶಂಕರಾಚಾರ್ಯರ ಜಯಂತಿ ಜೊತೆಯಲ್ಲೆ ಶ್ರೀ ರಾಮಾನುಜಾಚಾರ್ಯರ ಜಯಂತಿಯನ್ನು ಸಹ ಸರ್ಕಾರ ಆಚರಣೆ ಜಾರಿಗೆ ತರಲು ಕರ್ನಾಟಕ ಸರ್ಕಾರ ಮುಂದಾಗಬೇಕು ಎಂದು ಶಾಸಕ ಟಿ.ಎಸ್ ಶ್ರೀವತ್ಸ ಅವರ ಮೂಲಕ ಅಪರ ಜಿಲ್ಲಾಧಿಕಾರಿ ಶಿವರಾಜ್ ಅವರಿಗೆ ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು

ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಶ್ರೀ ಶಂಕರಾಚಾರ್ಯರ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಮೈಸೂರು ಅರಸರ ಕಲೆ, ವಾಸ್ತು ಶಿಲ್ಪ, ಸಾಹಿತ್ಯಗಳಿಗೆ ಪ್ರೇರಕರು, ಮೇಲುಕೋಟೆಯಲ್ಲಿ ದಾಸಪರಂಪರೆ ಹುಟ್ಟುಹಾಕಿ ಯತಿರಾಜದಾಸರ ಪರಂಪರೆಯನ್ನು ಸ್ಥಾಪಿಸಿದವರು. ತಿರುಪತಿ, ಮೇಲುಕೋಟೆ, ಶ್ರೀರಂಗಂ, ಕಾಂಚೀಪುರಂ ಸೇರಿದಂತೆ ನೂರಾರು ದೇವಾಲಯಗಳ ಆಡಳಿತ ನಿರ್ವಹಿಸಿದ್ದಾರೆ.

ಮಾಜಿ ಸಿಎಂ ಹೆಚ್‌ಡಿ ಕುಮಾರಸ್ವಾಮಿ, ಬ್ರಾಹ್ಮಣ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪಿಸಿರುವುದು, ಶಂಕರ ಜಯಂತಿ ಜಾರಿಗೆ ತಂದಿರುವುದು ಸ್ವಾಗತಾರ್ಹ. ಹಾಗೆಯೇ ರಾಮಾನುಜರ ಸೇವೆ ಕೊಡುಗೆ ಮತ್ತು ಆದರ್ಶಗಳನ್ನು ಪರಿಗಣಿಸಿ ರಾಜ್ಯ ಸರ್ಕಾರ ಶಂಕರ ಜಯಂತಿ ಜೊತೆಯಲ್ಲೆ ರಾಮಾನುಜರ ಜಯಂತಿ ಸಹ ಆಚರಣೆ ಮಾಡಬೇಕು ಎಂದು ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಪ್ರ ಮುಖಂಡರಾದ ನಂ.ಶ್ರೀಕಂಠಕುಮಾರ್, ಕೆ.ರಘುರಾಮ್ವಾಜಪಾಯಿ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಎಂ.ಆರ್ ಬಾಲಕೃಷ್ಣ, ಹರೀಶ್, ಚಕ್ರಪಾಣಿ, ಸುಚಿಂದ್ರ, ಮಿರ್ಲೆ ಪಣೀಶ್ ಹಾಗೂ ವಿಪ್ರ ಮುಖಂಡರು ಹಾಜರಿದ್ದರು.



ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಎಡಿಸಿ ಶಿವರಾಜು ಅವರಿಗೆ ಮನವಿ ಸಲ್ಲಿಸಲಾಯಿತು.



ಸಂಸ್ಕೃತಿ ವುಮನ್ ಸ್ಫಿಯರ್ ವತಿಯಿಂದ ಮೈಸೂರು ರಿಮ್ಯಾಂಡ್ ಹೋಮ್‌ನ ಬಾಲಕಿಯರಿಗಾಗಿ ದೈನಂದಿನ ಉಪಯೋಗದ ವಸ್ತುಗಳನ್ನು ವಿತರಿಸಲಾಯಿತು. ರಿಮ್ಯಾಂಡ್ ಹೋಮ್‌ನ ಅಧೀಕ್ಷಕಿ ಲತಾ, ಶ್ರೀದೇವಿ ಭೂಪಾಳಂ, ಪೂರ್ಣಿಮಾ, ನಂದಾ, ಅರ್ಚನಾ, ಶ್ವೇತಾ ಆನಂದ್, ಶಿಲ್ಪಾ, ಸುಷ್ಮಾ, ಶಾಂತಲಾ, ವೈಷ್ಣವಿ, ಐಶ್ವರ್ಯ, ಅರ್ಚನಾ, ಆಶಾ ಉಪಸ್ಥಿತರಿದ್ದರು.

ಸಾರ್ವಜನಿಕರು ಸ್ವಯಂ ಗಣತಿಗೆ ಸಹಕರಿಸಿ

ಮೈಸೂರು,ಏ.8–ಭಾರತ ಸರ್ಕಾರದಿಂದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 2026– 27ನೇ ಸಾಲಿನ ಮನೆ ಪಟ್ಟಿ ಮತ್ತು ಮನೆ ಗಣತಿಯ ಕಾರ್ಯಕ್ರಮ ಏಪ್ರಿಲ್ 1ರಿಂದ ಪ್ರಾರಂಭವಾಗಿದ್ದು, ಸಾರ್ವಜನಿಕರು ಗಣತಿಯ ಅಧಿಕೃತ ಪೋರ್ಟಲ್ http://se.census.gov.In ಗೆ ಭೇಟಿ ನೀಡಿ ನಿಮ್ಮ ಸಂಪೂರ್ಣ ಮಾಹಿತಿಯನ್ನು ಭರ್ತಿ ಮಾಡುವುದು. ಭರ್ತಿ ಮಾಡಿದ ನಂತರ ನೀವು ಸ್ವೀಕೃತಿ ಸಂದೇಶವನ್ನು ಪಡೆದುಕೊಳ್ಳಬಹುದು. ಅದನ್ನು ಸುರಕ್ಷಿತವಾಗಿಟ್ಟುಕೊಂಡು ಏಪ್ರಿಲ್ 15ರ ನಂತರ ತಮ್ಮ ಮನೆಗೆ ಬರುವ ಗಣತಿದಾರರಿಗೆ ನೀಡಿದರೆ ಗಣತಿ ಕಾರ್ಯ ಸುಲಭ ಮತ್ತು ಬೇಗನೆ ಪೂರ್ಣಗೊಳ್ಳಲು ಸಹಕರಿಸಬಹುದು. ಒಂದು ವೇಳೆ ನಿಮಗೆ ಸ್ವಯಂ ಗಣತಿ ಮಾಡಿಕೊಳ್ಳಲು ಸಾಧ್ಯವಾಗದೆ ಇದ್ದಲ್ಲಿ ಚಿಂತಿಸುವುದು ಬೇಡ ಖುದ್ದು ಗಣತಿದಾರರೇ ನಿಮ್ಮ ಮನೆಗೆ ಭೇಟಿ ನೀಡಿ, ಸಂಪೂರ್ಣ ಮಾಹಿತಿಯನ್ನು ಪಡೆಯಲಿದ್ದಾರೆ ಎಂದು ಕಡಕೊಳ ಪಟ್ಟಣ ಪಂಚಾಯತ್ ಮುಖ್ಯ ಅಧಿಕಾರಿ ದೀಪಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2024–25ನೇ ಸಾಲಿನ ಖಾದ್ರಿ ಶಾಮಣ್ಣ ಪ್ರಶಸ್ತಿ ಪಡೆದ ಮೈಸೂರಿನ ಹಿರಿಯ ಪತ್ರಕರ್ತರು ಕೆ.ಜಿ.ಕೊಪ್ಪಲಿನ ದಯಾಶಂಕರ್ ಮೈಲಿ ಅವರನ್ನು ಮೈಮುಲ್ ನಿರ್ದೇಶಕ ಕೆ ಉಮಾಶಂಕರ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ ರಾಮಕೃಷ್ಣ, ಎನ್.ಯೋಗಾನಂದ್ ಹಾಗೂ ಸಿ.ಡಿ.ಕುಮಾರ್ ಅಭಿನಂದಿಸಿದರು.

ಇಂದು, ನಾಳೆ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಏ.8(ಜಿಎ)–ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಹಾಗೂ ಡಾ.ಬಾಬು ಜಗಜೀವನ ರಾಂ ಅವರ 119ನೇ ಜನ್ಮ ದಿನಾಚರಣೆ ಅಂಗವಾಗಿ ವಿವಿಧ ಇಲಾಖೆಗಳ ಸರ್ಕಾರಿ ನೌಕರರಿಗೆ ಅಂಬೇಡ್ಕರ್ ಕಪ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಏ.9 ಮತ್ತು 10ರಂದು ಮೈಸೂರು ವಿವಿಯ ಕಾಫಿ ಬೋರ್ಡ್ ಮೈದಾನ ಹಾಗೂ ಗೌತಮ ಹಾಸ್ಟೆಲ್ ಮೈದಾನದಲ್ಲಿ ಏರ್ಪಡಿಸಲಾಗಿದೆ. ಪಂದ್ಯಾವಳಿಯನ್ನು ಏ.9ರಂದು ಬೆಳಗ್ಗೆ 10.30ಕ್ಕೆ ಕಾಫಿ ಬೋರ್ಡ್ ಮೈದಾನದಲ್ಲಿ ಜಿಲ್ಲಾಧಿಕಾರಿ, ಜಿಪಂ ಸಿಇಓ, ಎಸ್‌ಪಿ, ಉದ್ಘಾಟಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಖಾಸಗಿ ಬಸ್ ಡಿಕ್ಕಿ: ತಿಥಿ ಕಾರ್ಯಕ್ಕೆ ಹೋಗುತ್ತಿದ್ದ ಮಹಿಳೆ ದುರ್ಮರಣ



ಮೈಸೂರು, ಏ.8(ಎಂಕೆ)– ಖಾಸಗಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸಂಬಂಧಿಕರ ಮನೆ ತಿಥಿ ಕಾರ್ಯಕ್ಕೆ ಹೋಗುತ್ತಿದ್ದ ಮಹಿಳೆಯೊಬ್ಬರು ಮೈಸೂರಿನ ಕೆ.ಆರ್.ಸರ್ಕಲ್‌ನಲ್ಲಿ ಬುಧವಾರ ಬೆಳಗ್ಗೆ ಮೃತಪಟ್ಟಿದ್ದಾರೆ

ಇಲವಾಲದ ಬಾಲಗಂಗಾಧರನಾಥ ಸ್ವಾಮಿ ಬಡಾವಣೆ ನಿವಾಸಿ ಎಂ.ಮಹಾಲಕ್ಷ್ಮಿ(39) ಮೃತ ದುರ್ದೈವಿ. ಬೆಳವಾಡಿಯಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಮಹಾಲಕ್ಷ್ಮಿ ತಮ್ಮ ತಾಯಿ ಗೀತಾ ಅವರೊಂದಿಗೆ ನಗರ ಬಸ್ ನಿಲ್ದಾಣಕ್ಕೆ ಬಂದಿದ್ದು, ಬೆಳಗ್ಗೆ 7.30ರ ಸುಮಾರಿಗೆ ಕೆ.ಆರ್.ಸರ್ಕಲ್‌ನಲ್ಲಿ ರಸ್ತೆ ದಾಟುತ್ತಿದ್ದಾಗ ಆಲ್ಬರ್ಟ್ ವಿಕ್ಟರ್ ರಸ್ತೆ (ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಕೆ.ಆರ್.ಸರ್ಕಲ್) ಕಡೆಯಿಂದ ವೇಗವಾಗಿ ಬಂದ ಖಾಸಗಿ ಬಸ್(ಕೆಎ–55–ಎ–4959) ಡಿಕ್ಕಿ ಹೊಡೆದಿದೆ. ಇದರಿಂದ ಗಂಭೀರವಾಗಿ ಗಾಯಗೊಂಡ ಮಹಾಲಕ್ಷ್ಮಿ ಅವರನ್ನು ಆಟೋದಲ್ಲಿ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ದೇವರಾಜ ಸಂಚಾರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಮತ, ಸಬ್‌ಇನ್ಸ್‌ಪೆಕ್ಟರ್ ಪ್ರಭು, ಎಎಸ್‌ಐ ಶ್ರೀನಿವಾಸ್, ಕಾನ್ಸ್‌ಟೇಬಲ್ ಭಾಸ್ಕರ್ ಸ್ಥಳ ಮಹಜರು ನಡೆಸಿ, ಖಾಸಗಿ ಬಸ್ ಅನ್ನು ವಶಕ್ಕೆ ಪಡೆದಿದ್ದಾರೆ.

ಘಟನೆ ನಡೆದ ಕೂಡಲೇ ಬಸ್ ಚಾಲಕ ಪರಾರಿಯಾಗಿದ್ದು, ಇಟ್ ಅಂಡ್ ರನ್ ಪ್ರಕರಣ ದಾಖಲಿಸಲಾಗಿದೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ವಾರಸುದಾರ ರಿಗೆ ಹಸ್ತಾರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಬಂಧಿಕರ ಮನೆಯ ತಿಥಿ ಕಾರ್ಯಕ್ಕೆಂದು ಕೆ.ಆರ್.ಎಸ್‌ನಲ್ಲಿ ತಾಯಿ ಜೊತೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ. ಬೆಳವಾಡಿಯಿಂದ ನಗರ ಬಸ್ ನಿಲ್ದಾಣಕ್ಕೆ ಬಂದು ಅಲ್ಲಿಂದ ಒಂಟಿಕೊಪ್ಪಲು ಮಾರ್ಗವಾಗಿ ಕೆ.ಆರ್.ಎಸ್‌ಗೆ ಹೋಗಬೇಕಿತ್ತು. ಅಷ್ಟರಲ್ಲೇ ಈ ದುರ್ಘಟನೆ ನಡೆದಿದೆ ಎಂದು ಮೃತ ಮಹಾಲಕ್ಷ್ಮಿ ಸಹೋದರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎನ್.ಮಹದೇವಸ್ವಾಮಿಗೆ ಪಿಹೆಚ್.ಡಿ



ಮೈಸೂರು: ಡಾ.ಕೆ.ಸದಾಶಿವ ಅವರ ಮಾರ್ಗದರ್ಶನದಲ್ಲಿ ಎನ್.ಮಹದೇವಸ್ವಾಮಿ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ "ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಗಳ ವಿಶ್ಲೇಷಣಾತ್ಮಕ ಅಧ್ಯಯನ"(1918 ರಿಂದ ಪ್ರಸ್ತುತದ ವರೆಗೆ) ಎಂಬ ಮಹಾಪ್ರಬಂಧವನ್ನು ಇತಿಹಾಸ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿರಿಯ ಸಾಹಿತಿ ಬನ್ನೂರು ರಾಜುವಿಗೆ ಮಾತೃ ವಿಯೋಗ



ಮೈಸೂರು, ಏ.8–ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅವರ ತಾಯಿ, ಬನ್ನೂರಿನ ನಿವಾಸಿ ಕೆಂಪಮ್ಮ (90) ಅವರು ಮಂಗಳವಾರ ರಾತ್ರಿ ನಿಧನರಾದರು.

ಮೃತರು ಪುತ್ರರಾದ ಬನ್ನೂರು ಕೆ.ರಾಜು, ಕೆ.ವಿಷಕಂಠೇಗೌಡ, ಪುತ್ರಿಯರಾದ ಕೆ. ಶಿವಮ್ಮ, ಕೆ. ಸರೋಜ, ಕೆ. ಪಾರ್ವತಿ, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1 ಗಂಟೆಗೆ ಬನ್ನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮರುವಂಡ ರಘು ಕಾರ್ಯಪ್ಪ ನಿಧನ

ಮೈಸೂರು,ಏ.8– ವಿಜಯನಗರ 2ನೇ ಹಂತದ ಮಹಾಜನ ಲೇಔಟ್‌ನ ನಿವಾಸಿ ಮರುವಂಡ ರಘು ಕಾರ್ಯಪ್ಪ (73) ಬುಧವಾರ ನಿಧನರಾದರು. ದಿವಂಗತ ಡಾ.ಕಾರ್ಯಪ್ಪ ಅವರ ಪುತ್ರರಾದ ಮೃತರು ಮೂಲತಃ ಕೊಡಗು ಜಿಲ್ಲೆ ಶುಂಟಿಕೊಪ್ಪದ ಕಂದನಕೊಲ್ಲಿ ಗ್ರಾಮದವರು. ಮೃತರು ಪತ್ನಿ ಮರುವಂಡ ಜಾಸ್ಮಿನ್ ಕಾರ್ಯಪ್ಪ (ತಾಮನೆ: ಬಚಿರಣಿಯಂಡ), ಪುತ್ರಿ ನಿಖಿತಾ ಬೋಪಯ್ಯ, ಪುತ್ರ ಕಾರ್ತಿಕ್ ಅಯ್ಯಪ್ಪ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಗೋಕುಲಂನ ಸ್ಮಶಾನದಲ್ಲಿ ನಾಳೆ (ಏ.9) ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.4.2026 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2026 ರಿಂದ 13.04.2026
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಫೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಪಾಸಣಾ ಮತ್ತು ಸಲಹಾ ಶಿಬಿರ, ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್** : ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಎಂ.ಜಿ. ರಸ್ತೆ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಡಾ. ಬಿ.ಆರ್. ಅಂಬೇಡ್ಕರ್ ತರಬೇತಿ, ಸಂಶೋಧನೆ ಹಾಗೂ ವಿಸ್ತರಣಾ ಕೇಂದ್ರ** : ಅಂಬೇಡ್ಕರ್ ಮತ್ತು ಮಹಿಳಾ ಪ್ರಗತಿ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ನಿರ್ದೇಶಕ ಡಾ. ಸಾಬೀರ ಅಹ್ಮದ್ ಮುಲ್ಲಾ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾ, ಅಧ್ಯಕ್ಷತೆ : ಪ್ರಿನ್ಸಿಪಾಲ್ ಪ್ರೊ. ಎಂ.ಎಸ್. ಅನಿತಾ, ಸ್ಥಳ: ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಳಗ್ಗೆ 10 ರಿಂದ.

■ **ಅಮೃತಾ ಮೈಸೂರು ಕ್ಯಾಂಪಸ್, ವಿಸ್‌ಕಮ್** : ಸಿನೆರಮಾ 8ನೇ ರಾಷ್ಟ್ರ ಮಟ್ಟದ ಕಿರು ಚಿತ್ರೋತ್ಸವ, ಉಪಸ್ಥಿತರು : ಚಲನಚಿತ್ರ ನಟರಾದ ಶ್ರೀನಿವಾಸ್ ಪ್ರಭು, ನರೇನ್, ಅನಂತನಂದ ಚೈತನ್ಯ, ಪ್ರೊ. ಶೇಖರ್ ಬಾಬು, ಪ್ರಿನ್ಸಿಪಾಲ್ ಪ್ರೊ. ಜಿ. ರವೀಂದ್ರನಾಥ್, ಸ್ಥಳ: ಅಮೃತೇಶ್ವರಿ ಹಾಲ್, ಬೆಳಗ್ಗೆ 10ರಿಂದ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಪ್ರಸೂತಿ ತಂತ್ರ ಮತ್ತು ಸ್ತ್ರೀರೋಗ ವಿಭಾಗ, ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ** : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಾರಿಶಕ್ತಿ ರಾಷ್ಟ್ರೀಯ ಕಾರ್ಯಾಗಾರ, ಉದ್ಘಾಟನೆ : ಆಯುಷ್ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿ ಶ್ರೀಮತಿ ಕಮಲಾಬಾಯಿ, ಅತಿಥಿಗಳು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಡಾ. ಮಲ್ಲಿಕಾ, ಮುಖ್ಯ ಅತಿಥಿಗಳು : ಡಾ. ಅರುಣಾ, ಶ್ರೀಮತಿ ರಾಕಿ ಧರ್ಮೇಶ್, ಡಾ. ಸಿಂಧು, ಡಾ. ಶ್ರೀವತ್ಸ, ಸ್ಥಳ: ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು** : ವ್ಯಕ್ತಿತ್ವ ವಿಕಸನ ಕಾರ್ಯಾಗಾರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಜಿ.ಬಿ. ಶಿವರಾಜು, ಅಧ್ಯಕ್ಷತೆ : ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ. ನಿರಂಜನಮೂರ್ತಿ, ಮುಖ್ಯ ಅತಿಥಿಗಳು: ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ, ಪ್ರಿನ್ಸಿಪಾಲ್ ಡಾ.ರೇಚಣ್ಣ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಜಯಶಂಕರ್ ಬದನಗುಪ್ಪೆ ಸ್ನೇಹ ಬಳಗ, ಮೈಸೂರು ಕನ್ನಡ ವೇದಿಕೆ, ಕದಳಿ ಮಹಿಳಾ ವೇದಿಕೆ** : ಡಾ. ಶ್ರೀ ಶಿವಕುಮಾರ ಮಹಾಶಿವಯೋಗಿಗಳವರ ಜಯಂತಿ ಹಾಗೂ ಅಭಿನಂದನಾ ಸಮಾರಂಭ, ಉದ್ಘಾಟನೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷ ಅಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ಉಪ ನಿರ್ದೇಶಕ ಮ.ಗು. ಸದಾನಂದಯ್ಯ, ಅಭಿನಂದಿತರು : ಡಾ. ಗುರುಬಸವರಾಜು, ಶ್ರೀಮತಿ ಪ್ರಭಾಮಣಿ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಆವರಣ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಮಹಾನಗರ ಪಾಲಿಕೆ** : ಗ್ಯಾರಂಟಿ ಅನುಷ್ಠಾನದ ಸಮಿತಿಯ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಜೆ. ವಿನಯ್ ಕುಮಾರ್ ಹಾಗೂ ಪದಾಧಿಕಾರಿಗಳ ಪದಗ್ರಹಣ ಮತ್ತು ಕಚೇರಿ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ಮಹಾನಗರ ಪಾಲಿಕೆ ವಲಯ ಕಚೇರಿ, ಸಂಜೆ 4ಕ್ಕೆ.

■ **ಧ್ವನ್ಯಾಲೋಕ** : ಮಕ್ಕಳ ಲೋಕ–2026 ಬೇಸಿಗೆ ಶಿಬಿರ, ಉದ್ಘಾಟನೆ : ಚಲನಚಿತ್ರ ನಟಿ ದಿಶಾ ರಮೇಶ್, ಮುಖ್ಯ ಅತಿಥಿಗಳು : ಧ್ವನ್ಯಾಲೋಕ ಮುಖ್ಯಸ್ಥರಾದ ಶ್ರೀಮತಿ ಜಯಶ್ರೀ ಸಂಜಯ್, ಅಧ್ಯಕ್ಷತೆ : ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ ಹೆಚ್. ಜನ್ನಿ, ಉಪಸ್ಥಿತರು : ಕೆ.ಆರ್. ಸುಮತಿ, ರೂಬಿನ್, ಸಂಯಜ್, ಜಿ.ಎಸ್. ಹರಿಣಾಕ್ಷಿ, ಸ್ಥಳ: ಧ್ವನ್ಯಾಲೋಕ, ಬೋಗಾದಿ ಮುಖ್ಯ ರಸ್ತೆ, ಸಂಜೆ 4.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಪರಮಹಂಸಾನಂದ ಅವರಿಂದ ಶ್ರೀ ರಾಮಕೃಷ್ಣರ ಶಿಷ್ಯರು ಮತ್ತು ಭಕ್ತರು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟೆಬಲ್ ಟ್ರಸ್ಟ್** : ಶಯನೋತ್ಸವ, ಸಂಜೆ 6.30ಕ್ಕೆ ವಿದುಷಿ ಅರ್ಚನ ಸಿರಸಿ ಮತ್ತು ವೃಂದದವರಿಂದ ದೇವರನಾಮ ಮತ್ತು ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ ಕುಂಚಿಟಿಗರ ಸಂಘ, ಶ್ರೀರಾಮಪೇಟೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್., 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎಸ್. ಸ್ನೇಹ, ಬಿ. ಶ್ರೀರಾಮ್ ಭಟ್ ಹಾಗೂ ಕೆ. ಶ್ರೇಯಾ, ವ್ಯಾಖ್ಯಾನ–ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ವಿ. ವಂಶಿಧರ್ – ಕೊಳಲು ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ – ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಅರಿಸಿಣದ ಸುಧಾರಿತ ತಳಿಗಳು ಬೇಸಾಯ ಮತ್ತು ರಫ್ತು ಅವಕಾಶಗಳು ಈ ಕುರಿತು ಬೆಂಗಳೂರಿನ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಬಿ.ಎಸ್. ಹರೀಶ್ ಅವರೊಂದಿಗೆ ಸಂದರ್ಶನ. ಸಂದರ್ಶನ–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಹಲೋ ಯುವವಾಣಿ, ನೇರ ಫೋನ್ ಇನ್ ಕಾರ್ಯಕ್ರಮ – ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ. ಪ್ರಸ್ತುತಿ–ನಿವೇದಿತಾ. ಹೆಚ್., 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಂದ ಸುಧಾರಾಣಿ – ಹಾಡುಗಾರಿಕೆ, 10.00 ನಾಟಕ – ತಾಯಿ

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಕಟ್ಟಡದ ನವೀಕರಣ, ನಿರ್ವಹಣೆಗೆ ಟೆಂಡರ್ ಪ್ರಕ್ರಿಯೆ ಆರಂಭ

ಏಪ್ರಿಲ್ 30 ಕೊನೆಯ ದಿನ, ಹಲವು ಕಂಪನಿಗಳಿಂದ ಟೆಂಡರ್ ಸಲ್ಲಿಕೆ



3.76 ಕೋಟಿಗೆ ಟೆಂಡರ್ ಮೌಲ್ಯ ನಿಗದಿ; 25 ಲಕ್ಷ ಇಎಂಡಿ

ಲಲಿತ ಮಹಲ್ ಹೋಟೆಲ್ ಪ್ಯಾಲೇಸ್ ಗುತ್ತಿಗೆ ಪಡೆಯುವ ಕಂಪನಿಗೆ 3.76 ಕೋಟಿ ಟೆಂಡರ್ ಮೌಲ್ಯ ನಿಗದಿ ಮಾಡಲಾಗಿದೆ. ಪಾರದರ್ಶಕತೆ ಕಾಪಾಡಲು ಇ- ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಸರ್ಕಾರ ನಿಗದಿ ಮಾಡಿರುವ ಈ ಮೊತ್ತಕ್ಕೆ ಒಪ್ಪಿ ಈಗಾಗಲೆ ಟೆಂಡರ್ ಸಲ್ಲಿಸಿರುವ ಕಂಪನಿಗಳು 25 ಲಕ್ಷ ರೂಪಾಯಿಗಳ ಇಎಂಡಿ (ಅರ್ನೆಸ್ಟ್ ಮನಿ ಠೇವಣಿ) ಪಾವತಿಸಿವೆ. ಟೆಂಡರ್ ಪಡೆಯುವ ಕಂಪನಿಯು ಹೋಟೆಲ್ ನಿರ್ವಹಣೆ ಮಾಡಿಕೊಂಡು ಹೋಗುವುದರ ಜೊತೆಗೆ ರಾಜ್ಯ ಸರ್ಕಾರಕ್ಕೆ ವರ್ಷಕ್ಕೆ 4 ಕೋಟಿ ನೀಡಬೇಕಾಗಿದೆ. ಅಲ್ಲದೆ ಪ್ರತಿ ವರ್ಷ ಶೇ.10ರಷ್ಟು ಹೆಚ್ಚಳ ಮಾಡಬೇಕು. ಈ ಎಲ್ಲಾ ಷರತ್ತಿಗೆ ಒಪ್ಪುವ ಕಂಪನಿಗೆ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನೀಡಲಾಗುತ್ತದೆ.

ಮೈಸೂರು, ಏ.8(ಬಿಎಲ್‌ಯು)- ಪ್ರತಿಷ್ಠಿತ ಮೈಸೂರು ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಿಸಿ, ನಿರ್ವಹಣೆಗೆ ರಾಜ್ಯ ಸರ್ಕಾರ ಗುತ್ತಿಗೆ ನೀಡುತ್ತಿದ್ದು, ಇದಕ್ಕಾಗಿ ಈಗಾಗಲೇ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ. ಟೆಂಡರ್ ಸಲ್ಲಿಕೆಗೆ ಏಪ್ರಿಲ್ 30 ಕೊನೆಯ ದಿನವಾಗಿದ್ದು, ಹಲವು ಕಂಪನಿಗಳು ಟೆಂಡರ್ ಸಲ್ಲಿಸಿವೆ ಎನ್ನಲಾಗಿದೆ.

ಹೋಟೆಲ್ ಕಟ್ಟಡದ ನವೀಕರಣ, ನಿರ್ವಹಣೆಗೆ 30 ವರ್ಷದ ಗುತ್ತಿಗೆ ನೀಡಲಾಗುತ್ತಿದೆ. ಇದಕ್ಕಾಗಿ ಗ್ಲೋಬಲ್ ಟೆಂಡರ್ (ಜಾಗತಿಕ ಟೆಂಡರ್) ಕರೆಯಲಾಗಿದ್ದು, ಆಸಕ್ತ ಖಾಸಗಿ ಕಂಪನಿಗಳು ಇ-ಪ್ರಕ್ಯೂರ್‌ಮೆಂಟ್ (e-Procurement) ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬೇಕಾಗಿದೆ. ಈಗಾಗಲೇ ಕೆಲವು ಕಂಪನಿಗಳು ಟೆಂಡರ್ ಸಲ್ಲಿಸಿದ್ದು, ಇನ್ನೂ ಹಲವು ಟೆಂಡರ್ ಸಲ್ಲಿಸಲು ಮುಂದಾಗಿವೆ.

ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಅನ್ನು ಪಿಪಿಪಿ ಮಾದರಿ (Public Private Partnership Model) ಗುತ್ತಿಗೆ ನೀಡಲಾಗುತ್ತಿದ್ದು, ಆದರೆ, ಇದರ ಮೇಲಿನ ಸ್ವಾಮ್ಯವನ್ನು ರಾಜ್ಯ ಸರ್ಕಾರ ಹೊಂದಿರುತ್ತದೆ.

ಈ ಮೊದಲು ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಟ್ಟಿತ್ತು. ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಡುವೆ ಆದ ಒಪ್ಪಂದದ ಅವಧಿ ಮುಗಿದ ನಂತರ ಕೇಂದ್ರ ಸರ್ಕಾರ, ರಾಜ್ಯಕ್ಕೆ ಹೋಟೆಲ್ ಅನ್ನು ಹಸ್ತಾಂತರ ಮಾಡಿತು. ಬಳಿಕ ರಾಜ್ಯ ಸರ್ಕಾರ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಸುಪರ್ದಿಗೆ ನೀಡಿದೆ. ಶತಮಾನ ಪೂರೈಸಿರುವ ಹೋಟೆಲ್, ಕಟ್ಟಡದ ಸೂಕ್ತ ನಿರ್ವಹಣೆ ಇಲ್ಲದೆ ಶಿಥಿಲಾವಸ್ಥೆಯಲ್ಲಿದೆ. ಮಳೆಗಾಲದಲ್ಲಿ ವಸ್ತಿ ಹಿಡಿದರೆ, ಕೆಲವು ಭಾಗದ ಪ್ಲಾಸ್ಟರಿಂಗ್ ಸತ್ವ ಕಳೆದುಕೊಂಡು, ಉದುರುತ್ತಿದೆ.

ಇದನ್ನು ನವೀಕರಿಸಲು ರಾಜ್ಯ ಸರ್ಕಾರ ತಜ್ಞರ ಸಮಿತಿ ರಚನೆ ಮಾಡಿತ್ತು. ತಜ್ಞರು ನವೀಕರಣಕ್ಕೆ ಸುಮಾರು 50 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಿದ್ದರು. ಆದರೆ, ಅಷ್ಟು ಹಣ ಕಲ್ಪಿಸಲು ಸಾಧ್ಯವಿಲ್ಲ ಎಂದು ಸರ್ಕಾರ ಪಿಪಿಪಿ ಮಾದರಿಯಲ್ಲಿ ಹೋಟೆಲ್ ಕಟ್ಟಡದ ನವೀಕರಣ, ನಿರ್ವಹಣೆಯನ್ನು ಗುತ್ತಿಗೆ ನೀಡಲು ತೀರ್ಮಾನಿಸಿದೆ.

ಗುತ್ತಿಗೆ ಪಡೆದ ಕಂಪನಿಯೂ ತನಗಿಷ್ಟ ಬಂದಂತೆ ನವೀಕರಣ ಮಾಡಲು ಸಾಧ್ಯವಿಲ್ಲ. ಸರ್ಕಾರ ನೇಮಕ ಮಾಡುವ ತಜ್ಞರ ಸಮಿತಿಯ ಮಾರ್ಗದರ್ಶನದಂತೆ ಕಾರ್ಯ ಕೈಗೊಳ್ಳಬೇಕಿದೆ. ಮೈಸೂರು ಮಹಾರಾಜರು ನಿರ್ಮಾಣ ಮಾಡಿರುವ ಲಲಿತ ಮಹಲ್ ಹೋಟೆಲ್‌ಗೆ ನೂರು ವರ್ಷ ಸಂದಿದ್ದು, ಪಾರಂಪರಿಕ ಶೈಲಿ ಕಾಯ್ದುಕೊಂಡಿದೆ. ಹೋಟೆಲ್‌ನ ಪಾರಂಪರಿಕ ಸೌಂದರ್ಯಕ್ಕೆ ಯಾವುದೇ ರೀತಿ ಧಕ್ಕೆಆಗದಂತೆ ನವೀಕರಣ ಮಾಡಬೇಕಾಗಿದೆ

ಏ.30ರ ನಂತರ ನಿಗದಿತ ದಿನಾಂಕದಂದು ಟೆಂಡರ್ ಓಪನ್

ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ನವೀಕರಣ, ನಿರ್ವಹಣೆಗೆ ಗುತ್ತಿಗೆಗೆ ಟೆಂಡರ್ ಸಲ್ಲಿಸಲು ಏಪ್ರಿಲ್ 30 ಕೊನೆ ದಿನವಾಗಿದೆ. ತರುವಾಯ ಸರ್ಕಾರದ ನಿಯಮದಂತೆ ನಿಗದಿತ ದಿನಾಂಕದಂದು ಟೆಂಡರ್ ತೆರೆಯಲಾಗುವುದು. ಸದ್ಯ ಎಷ್ಟು ಕಂಪನಿಗಳು ಟೆಂಡರ್ ಸಲ್ಲಿಸಿವೆ ಎಂಬ ಮಾಹಿತಿ ತೆರೆದಾಗಲೇ ಸಿಗಲಿದೆ. ಟೆಂಡರ್ ಸಲ್ಲಿಸುವ ಕಂಪನಿಗಳು ಇಂತಿಷ್ಟು ವರ್ಷದ ಅನುಭವವಿರಬೇಕೆಂದು ನಾವು ಷರತ್ತು ವಿಧಿಸಿದ್ದೇವೆ. ಇದನ್ನು ಸಡಿಲಗೊಳಿಸುವಂತೆ ಮನವಿ ಸಲ್ಲಿಸುವ ಸಾಧ್ಯತೆ ಇದೆ. ಈ ಬಗ್ಗೆ ತರುವಾಯ ಪರಿಶೀಲನೆ ಮಾಡಿ ನಿರ್ಧಾರ ಮಾಡಲಾಗುವುದು. ಟೆಂಡರ್ ಸಲ್ಲಿಸಿರುವ ಕಂಪನಿಗಳ ಹಣಕಾಸು ಸ್ಥಿತಿ ಸೇರಿದಂತೆ ಕಾನೂನಾತ್ಮಕವಾದ ಹಲವು ಮಾನದಂಡವನ್ನು ಪರಿಶೀಲನೆ ನಡೆಸಲಾಗುವುದು. ತರುವಾಯ ಅರ್ಹ ಕಂಪನಿಗೆ ಟೆಂಡರ್ ನೀಡಲಾಗುವುದು. ಸದ್ಯ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್‌ಗೆ ಪ್ರವಾಸಿಗರು ಹೆಚ್ಚಾಗಿ ಬರುತ್ತಿದ್ದಾರೆ. ಅದರಲ್ಲೂ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಹೋಟೆಲ್‌ಗೆ ಯಾವುದೇ ರೀತಿಯಲ್ಲೂ ನಷ್ಟವಾಗುತ್ತಿಲ್ಲ. ಎಂದಿನಂತೆ ಯಾವುದೇ ತೊಂದರೆ ಇಲ್ಲದೆ ಹೋಟೆಲ್ ನಡೆದುಕೊಂಡು ಹೋಗುತ್ತಿದೆ.

- ಪ್ರಶಾಂತ್, ವ್ಯವಸ್ಥಾಪಕ ನಿರ್ದೇಶಕರು, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್

ರಸಗೊಬ್ಬರ ಸಬ್ಸಿಡಿಗೆ 41,534 ಕೋಟಿ: ಕೇಂದ್ರ ಸಚಿವ ಸಂಪುಟ ಅನುಮೋದನೆ



ನವದೆಹಲಿ: 2026ರ ಖಾರಿಫ್ ಋತುವಿನಲ್ಲಿ ಫಾಸ್ಫೇಟ್ ಹಾಗೂ ಪೊಟ್ಯಾಸಿಕ್ ರಸಗೊಬ್ಬರಗಳಿಗೆ 41,534 ಕೋಟಿ ಸಬ್ಸಿಡಿ ನೀಡಲು ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಬ್ಸಿಡಿ ಪ್ರಮಾಣವು ಕಳೆದ ವರ್ಷಕ್ಕಿಂತ ಶೇ 12ರಷ್ಟು ಹೆಚ್ಚಾಗಿದೆ.

ಜೂನ್ ತಿಂಗಳಲ್ಲಿ ನೈಋತ್ಯ ಮುಂಗಾರು ಪ್ರವೇಶದೊಂದಿಗೆ ಖಾರಿಫ್ ಬೆಳೆ ನಾಟಿ ಆರಂಭವಾಗಲಿದೆ. 2025ರ ಖಾರಿಫ್ ಋತುವಿಗೆ ಹೋಲಿಸಿದರೆ ಸಬ್ಸಿಡಿ ಮೊತ್ತ 4,317 ಕೋಟಿ ಹೆಚ್ಚಳ ಆಗಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು. ಕೇಂದ್ರ ಸರ್ಕಾರವು ಖಾರಿಫ್ ಹಂಗಾಮಿನಲ್ಲಿ ಸಾರಜನಕಕ್ಕೆ ಪ್ರತಿ ಕೆಜಿಗೆ 47.32, ಫಾಸ್ಫೇಟ್ ಕೆಜಿಗೆ 52.76, ಪೊಟ್ಯಾಷ್ ಕೆಜಿಗೆ 2.38 ಮತ್ತು ಸಲ್ಫರ್‌ಗೆ ಕೆ.ಜಿ.ಗೆ 3.16 ಸಬ್ಸಿಡಿ ದರ ನಿಗದಿಪಡಿಸಿದೆ.

ಖಾರಿಫ್ ಹಂಗಾಮಿನಲ್ಲಿ ಸಾರಜನಕ, ಫಾಸ್ಫೇಟ್ ಮತ್ತು ಸಲ್ಫರ್ ರಸಗೊಬ್ಬರಗಳಿಗೆ ಸಬ್ಸಿಡಿ ದರ ಹೆಚ್ಚಿಸಲಾಗಿದೆ. ಆದರೆ, 2025ರ ರಬಿ ಹಂಗಾಮಿನಿಂದ ಪೊಟ್ಯಾಷ್‌ನ ಸಬ್ಸಿಡಿ ದರದಲ್ಲಿ ಬದಲಾವಣೆ ಆಗಿಲ್ಲ.

ಸಂಪುಟದ ಇತರ ತೀರ್ಮಾನಗಳು: ರಾಜಸ್ಥಾನದ ಜೈಪುರ ಮೆಟ್ರೊ ಎರಡನೇ ಹಂತಕ್ಕೆ ಅನುಮೋದನೆ. ಯೋಜನಾ ಮೊತ್ತ 13,037 ಕೋಟಿ. ಅರುಣಾಚಲ ಪ್ರದೇಶದ ಅಂಜಾವ್ ಜಿಲ್ಲೆಯಲ್ಲಿ 1,200 ಮೆಗಾವಾಟ್ ಕಲೈ-II ಜಲ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ 14,105 ಕೋಟಿ ಹೂಡಿಕೆ ಪ್ರಸ್ತಾವನೆಗೆ ಅನುಮೋದನೆ. ಅರುಣಾಚಲ ಪ್ರದೇಶದ ಕಮ್ಲೆ, ಕ್ರಾದಾಡಿ ಮತ್ತು ಕುರುಂಗ್ ಕುಮೆ ಜಿಲ್ಲೆಗಳಲ್ಲಿ 26,069 ಕೋಟಿ ವೆಚ್ಚದಲ್ಲಿ 1,720 ಮೆಗಾವಾಟ್ ಸಾಮರ್ಥ್ಯದ ಕಮಲಾ ಜಲ ವಿದ್ಯುತ್ ಯೋಜನೆ ಕಾರ್ಯಗತಕ್ಕೆ ಒಪ್ಪಿಗೆ.

10ನೇ ವರ್ಷದ ಸವಿನೆನಪು



ಮಹಾ ಪರಿನಿರ್ವಾಣ – 9/4/16
L.K. ಚಿಕ್ಕಮಾಯಗಯ್ಯ
ಶಿಕ್ಷಕರು

ನೀವು ನಮ್ಮನ್ನಗಲಿ ಇಂದಿ 10 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ ಭಾಸ್ಕರ್ ಸಿ. ಮತ್ತು ಕುಟುಂಬವರ್ಗ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ವರುಣ ಗ್ರಾಮ, ಮಾರಮ್ಮ ದೇವಸ್ಥಾನದ ರಸ್ತೆ ಯಲ್ಲಿರುವ ಮನೆಯಲ್ಲಿ ವಾಸವಾಗಿರುವ ಲೇಟ್ ಮಾದಪ್ಪ ರವರ ಮಗನಾದ ಶ್ರೀ ಶ್ರೀಕಂಠ ಮತ್ತು ಅವರ ಕುಟುಂಬ ಸದಸ್ಯರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಿಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣ ಹೋಬಳಿ, ವರುಣ ಗ್ರಾಮಕ್ಕೆ ಸೇರಿದ ಸರ್ವೆ ನಂ. 186/4, ವಿಸ್ತೀರ್ಣ 0-10 ಗುಂಟೆ ಜಮೀನು ಮತ್ತು ಈ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಮಹೇಶ ರವರಿಗೆ ಸೇರಿದ ಸ್ವತ್ತು, ಪಶ್ಚಿಮಕ್ಕೆ : ಖಾಸಗಿ ಸ್ವತ್ತು, ಉತ್ತರಕ್ಕೆ: ಶ್ರೀ ರಾಜಶೇಖರ ಮತ್ತು ಶ್ರೀ ನಂಜುಂಡಸ್ವಾಮಿ ರವರಿಗೆ ಸೇರಿದ ಸ್ವತ್ತು, ದಕ್ಷಿಣಕ್ಕೆ: ರಸ್ತೆ.

ಸಹಿ/– ಕೆ.ಎನ್. ಮಹಾದೇವಸ್ವಾಮಿ,
ಬಿ.ಎಸ್.ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ರೂಂ ನಂ. 1 & 2, ಒಂದನೇ ಮಹಡಿ, ಅಲ್ಲಮ್ಮ ಪ್ರಭು ಕೃಪ ಕಮರ್ಷಿಯಲ್ ಕಾಂಪ್ಲೆಕ್ಸ್, 5ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು–570004,
Mob: 9448222522,
ಕಛೇರಿ: 0821-4287998
ದಿನಾಂಕ: 4–4–2026

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಯಳಂದೂರು, ಚಾಮರಾಜನಗರ ಜಿಲ್ಲೆ

ಅಸಲು ದಾವಾ ಸಂಖ್ಯೆ: 74/2025

ವಾದಿಗಳು: ಮಾದೇಶ ನಾಯಕ ಮತ್ತು ಇನ್ನೊಬ್ಬರು

ವಿರುದ್ಧ

ಪ್ರತಿವಾದಿಗಳು: ಶಾರದಮ್ಮ ಮತ್ತು ಇತರರು

ಪ್ರತಿವಾದಿಗಳು: 1ನೇ ಪ್ರತಿವಾದಿ ಶಾರದಮ್ಮ ಕೋಂ ಲೇ ರಂಗೇಗೌಡ ವಯಸ್ಸು 65 ವರ್ಷ, 2ನೇ ಪ್ರತಿವಾದಿ ವೆಂಕಟೇಶ್ ಬಿನ್ ಲೇ ರಂಗೇಗೌಡ ವಯಸ್ಸು: 45 ವರ್ಷ, ಮತ್ತು 3ನೇ ಪ್ರತಿವಾದಿ ಉಮಾ ಬಿನ್. ಲೇ. ರಂಗೇಗೌಡ ವಯಸ್ಸು: 40 ವರ್ಷ. 1, 2 ಮತ್ತು 3ನೇ ಪ್ರತಿವಾದಿಗಳ ವಿಳಾಸ: ಹೊಂಗನೂರು ಗ್ರಾಮ, ಸಂತೇಮರಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

ಪತ್ರಿಕಾ ಪ್ರಕಟಣೆ

ವಾದಿಗಳು, ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ಈ ದಾವೆ ಸಲ್ಲಿಸಿರುತ್ತಾರೆ. ಹಾಗಾಗಿ 1, 2 ಮತ್ತು 3ನೇ ಪ್ರತಿವಾದಿಗಳು ದಿನಾಂಕ 2–5–2026 ರಂದು ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಸಮಯ ನಿಗದಿಯಾಗಿರುತ್ತದೆ. ಸದರಿ ದಿನಾಂಕದಂದು ನೀವುಗಳಾಗಲೀ, ಅಥವಾ ನಿಮ್ಮ ವಕೀಲರ ಮೂಲಕವಾಗಲೀ ನ್ಯಾಯಾಲಯಕ್ಕೆ ಹಾಜರಾಗುವುದು. ತಪ್ಪಿದಲ್ಲಿ ಈ ದಾವೆಯನ್ನು ನಿಮ್ಮ ಗೈರುಹಾಜರಾತಿಯಲ್ಲಿ ಏಕಪಕ್ಷೀಯವಾಗಿ ನಿರ್ಣಯವಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ದಾವಾ ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂ. 1: ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ಸಂತೇಮರಳ್ಳಿ ಹೋಬಳಿ, ಹೊಂಗನೂರು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 153 ರಲ್ಲಿರುವ 1.10 ಗುಂಟೆ ವಿಸ್ತೀರ್ಣ ಜಮೀನಿನ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 63 / ಭಾಗ್ಯಮ್ಮ ನವರ ಜಮೀನು; ಪಶ್ಚಿಮಕ್ಕೆ: ಸರ್ವೆ ನಂ. 154/2/ ನೀರು ಹೋಗುವ ಕಾಲುವೆ ; ಉತ್ತರಕ್ಕೆ: ಸರ್ವೆ ನಂ. 152/2/ ಕೃಷ್ಣನಾಯ್ಕರ ಜಮೀನು ; ದಕ್ಷಿಣಕ್ಕೆ: ದಾವಾ ಸ್ವತ್ತಿನ ಜಮೀನು

ಐಟಂ ನಂ. 2: ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ, ಸಂತೇಮರಳ್ಳಿ ಹೋಬಳಿ, ಹೊಂಗನೂರು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 153 ರಲ್ಲಿರುವ 0.31 ಗುಂಟೆ ವಿಸ್ತೀರ್ಣದ ಜಮೀನು ಚೆಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 63 / ಎಂ. ರಂಗೇಗೌಡರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 155/3 / ನೀರು ಹೋಗುವ ಕಾಲುವೆ ; ಉತ್ತರಕ್ಕೆ: ದಾವಾ ಸ್ವತ್ತಿನ ಜಮೀನು ; ದಕ್ಷಿಣಕ್ಕೆ: ಟಿ.ಕೆ. ಗೀತಾ ರವರ ಜಮೀನು.

ಈ ಎರಡು ಐಟಂಗಳು ಒಂದೇ ಸರ್ವೆ ನಂಬರ್‌ನಲ್ಲಿ ಇರುವುದರಿಂದ ಒಂದೇ ಚೆಕ್ಕುಬಂದಿಯನ್ನು ಹೊಂದಿರುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/– ಶಿರಸ್ತೇದಾರರು
ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಯಳಂದೂರು, ಚಾಮರಾಜನಗರ ಜಿಲ್ಲೆ
ಸಹಿ/– ಶ್ರೀ ಅಶೋಕ್, ವಕೀಲರು
#42, ಭೂಪತಿ ನಂಜುಂಡಪ್ಪ ಕಾಂಪ್ಲೆಕ್ಸ್, ಸೂರ್ಯ ಬೇಕರಿ ಸರ್ಕಲ್, ಹೆಬ್ಬಾಳ್, ಮೈಸೂರು–570 016. Mob: 9845326719

ಗೌರವಾನ್ವಿತ ನೇ ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಸಿ ಮಿಸ್ ಸಂಖ್ಯೆ 104/2026

ಅರ್ಜಿದಾರರುಗಳು :1. ಶ್ರೀಮತಿ ರತ್ನಮ್ಮ ಕೋಂ ಲೇಟ್ ತಿಬ್ಬಯ್ಯ ಸುಮಾರು 46 ವರ್ಷ 2. ಶ್ರೀ ಟಿ.ರಮೇಶ ಬಿನ್ ಲೇಟ್ ತಿಬ್ಬಯ್ಯ ಸುಮಾರು 26 ವರ್ಷ
ಇಬ್ಬರ ವಾಸ:–ಮನೆ ನಂ. 1745, ಸಿ–ಬ್ಲಾಕ್, ಗೊರೂರು ರಸ್ತೆ, ಮುನಿಸ್ವಾಮಿ ನಗರ. ಮೈಸೂರು 570008

ವಿರುದ್ಧ

ಎದುರುದಾರರು: ನೋಂದಣಾಧಿಕಾರಿ ಜನನ ಮತ್ತು ಮರಣ ವಿಭಾಗ, ಪಟ್ಟಣ ಪಂಚಾಯಿತಿ, ಶ್ರೀರಾಂಪುರ ಮೈಸೂರು.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರುಗಳಾದ 1ನೇ ಅರ್ಜಿದಾರರ ಗಂಡ ಮತ್ತು 2ನೇ ಅರ್ಜಿದಾರರ ತಂದೆಯಾದ ಲೇಟ್ ತಿಬ್ಬಯ್ಯ ಬಿನ್ ಲೇಟ್ ಮೂಗಯ್ಯ ರವರು ದಿನಾಂಕ: 07–05–2019 ರಂದು ಮನೆ ನಂ.1745, ಸಿ–ಬ್ಲಾಕ್, ಮುನಿಸ್ವಾಮಿನಗರ, ಗೋರೂರು ರಸ್ತೆ, ಮೈಸೂರು ಇಲ್ಲಿರುವ ತಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಲೇಟ್ ತಿಬ್ಬಯ್ಯ ಬಿನ್ ಲೇಟ್ ಮೂಗಯ್ಯ ರವರ ಮರಣ ಪ್ರಮಾಣ ಪತ್ರವನ್ನು ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಅರ್ಜಿದಾರರುಗಳು ಈ ಅರ್ಜಿಯನ್ನು ಸಲ್ಲಿಸುತ್ತಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಏನಾದರೂ ತಂಟೆ ತಕರಾರುಗಳು ಇದ್ದಲ್ಲಿ ದಿನಾಂಕ: 07–05–26ರ ಬೆಳಿಗ್ಗೆ 11:00 ಗಂಟೆ ಸಮಯಕ್ಕೆ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರುಗಳನ್ನು ನಿಮ್ಮ ವಕೀಲರ ಮೂಲಕ ಸಲ್ಲಿಸತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಮಾನ್ಯ ನ್ಯಾಯಾಲಯವು ಏಕಾಪಕ್ಷೀಯವಾಗಿ ನಿರ್ಣಯವನ್ನು ಕೈಗೊಳ್ಳುತ್ತದೆ. ಎಂದು ತಿಳಿಯತಕ್ಕದ್ದು ಎಂದು ಸಾರ್ವಜನಿಕ ಪ್ರಕಟಣೆಯ ಮೂಲಕ ತಿಳಿಸಲಾಗಿದೆ,

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರಾವಾನ್ವಿತ ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು
ಅರ್ಜಿದಾರರುಗಳ ಪರ ವಕೀಲರು
ಕೆ.ಎನ್.ಜಗದೀಶ್, ಬಿ.ಕಾಂ, ಎಲ್.ಎಲ್.ಬಿ
ನಂ.37/1, 12ನೇ ಅಡ್ಡರಸ್ತೆ, ನವಿಲು ರಸ್ತೆ, ಎ ಅಂಡ್ ಬಿ ಬ್ಲಾಕ್, ಕುವೆಂಪುನಗರ, ಮೈಸೂರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:02/2026–27
ದಿನಾಂಕ :01.04.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗದಡಿಯಲ್ಲಿನ ನಂ.2 ವಿಶೇಷ ಉಪ ವಿಭಾಗ, ಮೈಸೂರು ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ-4059–80–051–0–60 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ 422–ಎಸ್.ಸಿ.ಪಿ ಪರಿಶಿಷ್ಟ ಜಾತಿ ಉಪ–ಯೋಜನೆ ಅಡಿಯಲ್ಲಿ ಅನುಮೋದನೆಯಾದ 3 ಸಂಖ್ಯೆಯ ಕಾಮಗಾರಿಗಳು ಹಾಗೂ ಲೆಕ್ಕ ಶೀರ್ಷಿಕೆ-4059–80–051–0–60 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ 423– ಗಿರಿಜನ ಉಪ–ಯೋಜನೆ ಅಡಿಯಲ್ಲಿ ಅನುಮೋದನೆಯಾದ 3 ಸಂಖ್ಯೆಯ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿರುವ **ಅರ್ಹ** ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ **(viz https://kppp.karnataka.gov.in/)** ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳಿಗೆ **ದಿ:01.04.2026 ರಿಂದ 17.04.2026, ರ ಸಂಜೆ 17:00ರ** ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಕನಿಷ್ಟ ಟೆಂಡರ್‌ಗಿಟ್ಟ ಮೊತ್ತ **ರೂ.131.37 ಲಕ್ಷಗಳು** ಮತ್ತು ಗರಿಷ್ಟ ಟೆಂಡರ್‌ಗಿಟ್ಟ ಮೊತ್ತ **ರೂ. 805.46 ಲಕ್ಷಗಳು** ಹಾಗೂ ಕನಿಷ್ಟ ಇ.ಎಂ.ಡಿ **ರೂ.2.00 ಲಕ್ಷಗಳು** ಗರಿಷ್ಟ ಇ.ಎಂ.ಡಿ **ರೂ.12.08 ಲಕ್ಷಗಳಾಗಿರುತ್ತದೆ.** ಸದರಿ ಕಾಮಗಾರಿಗಳಿಗೆ ಪೂರ್ವಭಾವಿ ಸಭೆಯನ್ನು **ದಿನಾಂಕ:08.04.2026 ರಂದು** ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ **ಪೂರ್ವಾಹ್ನ 11.00 ಕ್ಕೆ** ನಿಗಧಿಪಡಿಸಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS/005/KSMCA/023/2025-26

ನಗರಸಭಾ ಕಾರ್ಯಾಲಯ, ಹುಣಸೂರು

ಸಂ:ಹುನಕಾ:/ಆಶ್ರಯ/ಪಿ.ಆರ್/01/2025–26 ದಿನಾಂಕ: 08/04/2026

ಸಾರ್ವಜನಿಕ ಪ್ರಕಟಣೆ

ಹುಣಸೂರು ಪಟ್ಟಣದಲ್ಲಿ ಈ ಹಿಂದೆ ಪುರಸಭೆಯಿಂದ 870 ಫಲಾನುಭವಿಗಳನ್ನು ಆಯ್ಕೆಮಾಡಿ ಹಕ್ಕು ಪತ್ರ ವಿತರಿಸಿರುವ ಫಲಾನುಭವಿಗಳಿಂದ ಅವಶ್ಯ ದಾಖಲಾತಿಗಳನ್ನು ಹಕ್ಕು ಪತ್ರದೊಂದಿಗೆ ಕಛೇರಿಗೆ ಅರ್ಜಿ ಸಲ್ಲಿಸಲು ದಿನಾಂಕ 06–04–2026 ರಂದು ನಡೆದ ನಗರ ಆಶ್ರಯ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಈ ಹಿಂದೆ ಹುಣಸೂರು ಪುರಸಭೆಯಿಂದ ಹಕ್ಕು ಪತ್ರ ಪಡೆದಿರುವ ಫಲಾನುಭವಿಗಳು ದಿನಾಂಕ 09–04–2026 ರಿಂದ 08–05–2026 ರ ಒಳಗಾಗಿ ಹಕ್ಕು ಪತ್ರ ಹಾಗೂ ಈ ಕೆಳಕಂಡ ದಾಖಲಾತಿಗಳನ್ನು ಹುಣಸೂರು ನಗರಸಭೆಗೆ ಸಲ್ಲಿಸಲು ಸೂಚಿಸಲಾಗಿದೆ.

- ಹಕ್ಕುಪತ್ರ ಜೆರಾಕ್ಸ್ ಪ್ರತಿ
- ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ
- ಪಡಿತರ ಚೀಟಿ ಜೆರಾಕ್ಸ್ ಪ್ರತಿ
- ನೋಟರಿ ಅಫಿಡವಿಟ್
- ಫಲಾನುಭವಿಯವರ ಭಾವಚಿತ್ರ (ಪಾಸ್‌ಪೋರ್ಟ್ ಸೈಜ್)

ಸಹಿ/– ಕಾರ್ಯದರ್ಶಿ/ಪೌರಾಯುಕ್ತರು, ನಗರ ಆಶ್ರಯ ಸಮಿತಿ. ಹುಣಸೂರು
ಸಹಿ/– ಅಧ್ಯಕ್ಷರು ಹಾಗೂ ಶಾಸಕರು, ನಗರ ಆಶ್ರಯ ಸಮಿತಿ. ಹುಣಸೂರು

सीएसबी - केन्द्रीय रेशम उत्पादन अनुसंधान एवं प्रशिक्षण संस्थान
CSB - Central Sericultural Research & Training Institute

[केन्द्रीय रेशम बोर्ड - वस्त्र मंत्रालय - भारत सरकार] मानंदवाडी रोड, श्रीरामपुरा, मैसूर - 570 008
[Central Silk Board - Min. of Textiles – Govt. of India] Manandavadi Road, Srirampura Mysore – 570 008

संख्या/ सीएसबी/आरटीआई/मल पैथो./2026-27/ दि:Date: 08/04/2026

WALK-IN-INTERVIEW FOR THE POST OF JUNIOR RESEARCH FELLOW

A Walk-in-Interview will be held on 24.04.2026 at CSB-Central Sericultural Research and Training Institute, Srirampura, Mysuru – 570 008 as shown below:

A' 01 (One) "Next-Gen Biologics: Harnessing Microbial Metabolites for Increased Growth, Yield and Protection in Mulberry" Project Code: PRP01055SIC for a period Up to Nov. 2025 to Oct. 2028 or completion of project whichever is earlier under CSB Terms and Conditions

Qualifications for Junior Research Fellow (JRF):
i. M.Sc in Plant Pathology/ Microbiology/ Plant Sciences/ Biotechnology

Preference will be given to the candidates having experience in microbial culturing techniques and identification; PCR techniques; disease and pest screening techniques

Walk - in- Interview time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.csrtimys.res.in, https://csb.gov.in/ for details.

Director
CSR &TI, Mysuru

ನಕ್ಕರೆ ಅದೇ ಸ್ವರ್ಗ

ಮಹಿಳೆ : ಏನ್ ಪುರೋಹಿತರೇ, ನನ್ನ ಗಂಡ ಈ ಪಾಟಿ ಕುಡಿದು ಸದಾ ಜಗಳ ಆಡ್ತಿರ್ತಾನೆ. ನೀವು ಜಾತಕ ಸರಿಯಾಗಿ ನೋಡಲಿಲ್ಲವಾ?
ಪುರೋಹಿತ : ಜಾತಕ ನೋಡಿ ಅವರಿಗೆ ಕುಜ ದೋಷ ಇದೆ ಅಂತ ಹೇಳಿದ್ನಲ್ಲ.
ಮಹಿಳೆ : ಕುಜ ದೋಷ ಅಂದ್ರೆ...
ಪುರೋಹಿತ : ಕುಡಿದು ಜಗಳ ಆಡೋ ದೋಷ!

ಮೈಸೂರು ಮಿತ್ರ

ಗುರುವಾರ, ಏಪ್ರಿಲ್ 9, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಗುರಿ ಇಟ್ಟುಕೊಂಡು ಸಾಗುವವರು ಸಾಧಕರಾಗುತ್ತಾರೆ. ಕೇವಲ ಆಸೆಗಳನ್ನು ಇಟ್ಟುಕೊಂಡವರು ಸಾಮಾನ್ಯರಾಗಿ ಉಳಿಯುತ್ತಾರೆ.
–ವಾಷಿಂಗ್ಟನ್ ಇರ್ವಿಂಗ್, ಅಮೆರಿಕದ ಕಥೆಗಾರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಮಗ ಉಂಡಷ್ಟೂ ಒಳ್ಳೇದು, ಮಳೆ ಮಳೆ ಬಂದಷ್ಟೂ ಒಳ್ಳೇದು.

ನಿಮ್ಮ ಪತ್ರಗಳು

ಸಾರ್ವಜನಿಕ ಕಾಲುದಾರಿಯಲ್ಲಿ ಅಪಾಯಕಾರಿ ರೀತಿ ಸಿಲಿಂಡರ್ ಬಳಕೆ!

ಮಾನ್ಯರೇ,



ಮೈಸೂರಿನ ಸರಸ್ವತಿಪುರಂ 3ನೇ ಮೇನ್ ರಸ್ತೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೋಟೆಲೊಂದು ಸಿಲಿಂಡರ್ ಬಳಸುತ್ತಿರುವ ರೀತಿ ಅತ್ಯಂತ ಅಪಾಯಕಾರಿ.

ಈ ಹೋಟೆಲ್‌ನವರು ಸಾರ್ವಜನಿಕ ಕಾಲುದಾರಿಯಲ್ಲಿ ಅಕ್ರಮವಾಗಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳನ್ನು ಇಟ್ಟು ಬಳಕೆ ಮಾಡುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ಹಾಗೂ ಸಂಪೂರ್ಣವಾಗಿ ಆಕ್ಷೇಪಾರ್ಹ ನಡೆ. ಇಂತಹ ಉರಿಯುವ ವಸ್ತುಗಳನ್ನು ಸಾರ್ವಜನಿಕ ಸ್ಥಳದಲ್ಲಿ, ಅದೂ ನಿರ್ಲಕ್ಷ್ಯವಾಗಿ ಬಳಸುವುದು ಬೆಂಕಿ ಅವಘಡ, ಸ್ಫೋಟ, ಜೀವಹಾನಿ ಹಾಗೂ ಆಸ್ತಿ ನಷ್ಟಕ್ಕೆ ಕಾರಣವಾಗುವ ಗಂಭೀರ ಪರಿಸ್ಥಿತಿ ಇದೆ.

ಇದರ ಜೊತೆಗೆ, ಈ ಹೋಟೆಲ್ ಸಂಪೂರ್ಣವಾಗಿ ಕಾಲುದಾರಿಯನ್ನು ಅಕ್ರಮವಾಗಿ ಆಕ್ರಮಿಸಿಕೊಂಡು, ಸಾರ್ವಜನಿಕರಿಗೆ ನಡೆದು ಹೋಗಲು ಅಡಚಣೆ ಉಂಟು ಮಾಡಿದ್ದು, ಅದನ್ನು ದ್ವಿಚಕ್ರ ವಾಹನಗಳ ಪಾರ್ಕಿಂಗ್ ಸ್ಥಳವಾಗಿ ಬಳಸುತ್ತಿದೆ. ಇದು ಸಾರ್ವಜನಿಕರಿಗೆ ತೀವ್ರ ಅಸೌಕರ್ಯ ಉಂಟುಮಾಡುವುದಲ್ಲದೆ, ನಾಗರಿಕ ನಿಯಮಗಳನ್ನು ಸಂಪೂರ್ಣವಾಗಿ ಲೆಕ್ಕಿಸದ ವರ್ತನೆಯನ್ನು ತೋರಿಸುತ್ತದೆ.

ಇಷ್ಟು ಗಂಭೀರ ವಿಷಯಗಳಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂಬುದು ಸ್ಥಳೀಯ ನಿವಾಸಿಗಳು ಮತ್ತು ಸಾರ್ವಜನಿಕರ ಸುರಕ್ಷತೆ ಬಗ್ಗೆ ಆತಂಕವನ್ನು ಉಂಟುಮಾಡುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಯಾವುದೇ ಅನಾಹುತ ಸಂಭವಿಸುವ ಮೊದಲು ತುರ್ತು ಕ್ರಮ ತೆಗೆದುಕೊಳ್ಳಬೇಕು.

ಸರಸ್ವತಿಪುರಂ ಮುಖ್ಯ ಅಗ್ನಿಶಾಮಕ ಕೇಂದ್ರ ಈ ಹೋಟೆಲ್‌ಗೆ ಕೆಲವು ಅಡಿ ದೂರದಲ್ಲೇ ಇದ್ದರೂ ಇಂತಹ ಘಟನೆ ನಡೆಯುತ್ತಿರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನು ತೋರಿಸುತ್ತದೆ. –ಜಿ.ಪಿ. ಚಂದ್ರಶೇಖರ್, ಸರಸ್ವತಿಪುರಂ.

ಪೋಸ್ಟ್ ಆಫೀಸ್‌ಗಳು ಜನ ಸ್ನೇಹಿ ಆಗಬೇಕು

ಮಾನ್ಯರೆ,

ಅಂಚೆ ಕಚೇರಿಯಲ್ಲಿ ಸಾಮಾನ್ಯ ಜನರು 5 ವರ್ಷಗಳ ಅವಧಿಗೆ ಸಣ್ಣ ಉಳಿತಾಯ ಪ್ರತಿನಿಧಿಗಳ ಮೂಲಕ ಆರ್‌ಡಿ (ರೆಕರಿಂಗ್ ಡಿಪಾಸಿಟ್), ಮಾಡಿರುತ್ತಾರೆ. ಅವಧಿ ಮುಗಿದ ಮೇಲೆ ಮೆಚ್ಯುರಿಟಿ ಹಣವನ್ನು ಹಿಂದಕ್ಕೆ ಪಡೆಯಲು ಆರ್‌ಡಿ ಮಾಡಿದ ವ್ಯಕ್ತಿಯೇ ತಾನು ಆರ್‌ಡಿ ಮಾಡಿರುವ ಅಂಚೆ ಕಚೇರಿಗೆ ಖುದ್ದು ಭೇಟಿ ನೀಡಿ ಸಹಿ ಮಾಡಿ ಹಣ ವಾಪಸ್ ಪಡೆಯಬೇಕೆಂಬ ಕಟ್ಟುನಿಟ್ಟಿನ ಸೂಚನೆ ಇದೆ. ಕೆಲವು ಸಂದರ್ಭಗಳಲ್ಲಿ ತುಂಬು ಗರ್ಭಿಣಿಯರು, ಬಾಣಂತಿಯರು, ವಯಸ್ಸಾದ ಹಿರಿಯ ನಾಗರಿಕರು, ಚಿಕಿತ್ಸೆ ಪಡೆಯುತ್ತಿರುವ ರೋಗಿಗಳು ಅಂಚೆ ಕಚೇರಿಗೆ ಹೋಗಲು ಸಾಧ್ಯವೇ ಇಲ್ಲ. ಇಂತಹವರು ಸಹ ಅಂಚೆ ಕಚೇರಿಗೆ ಬಂದು ಹಣ ಪಡೆಯಬೇಕೆಂದರೆ ಹೇಗೆ? ಇಂತಹ ಆದೇಶ ಮಾಡಿರುವ ಅಂಚೆ ಕಚೇರಿಯ ಹಿರಿಯ ಅಧಿಕಾರಿಗಳಿಗೆ ಕನಿಷ್ಠ ಪಕ್ಷ ತಿಳುವಳಿಕೆಯಾದರೂ ಬೇಡವೇ?

ಇದಕ್ಕೆ ತಾಜಾ ಉದಾಹರಣೆ ಎಂದರೆ, ನನ್ನ ಮಗಳು ಮೈಸೂರಿನ ಸರಸ್ವತಿಪುರಂ ಅಂಚೆ ಕಚೇರಿಯಲ್ಲಿ ಕಳೆದ ಐದು ವರ್ಷಗಳ ಹಿಂದೆ ಆರ್‌ಡಿ ಮಾಡಿದ್ದು, ಅದು ಕಳೆದ ತಿಂಗಳು ಮೆಚ್ಯುರಿಟಿ ಆಗಿದೆ. ಈಗ ಆಕೆ ಬಾಣಂತಿ ಇರುವುದರಿಂದ ಪೋಸ್ಟ್ ಆಫೀಸ್‌ಗೆ ಬರಲು ಸಾಧ್ಯವಿಲ್ಲ. ಮೆಚ್ಯುರಿಟಿ ಅಮೌಂಟ್ ಅನ್ನು ಆಕೆಯ ಎಸ್‌ಬಿ ಖಾತೆಗೆ ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದರೂ ಅಲ್ಲಿನ ಅಧಿಕಾರಿಗಳು ಕೇಳಲಿಲ್ಲ. ಕಡೆಗೆ ಆಕೆಯೇ ಪೋಸ್ಟ್ ಆಫೀಸ್‌ಗೆ ಹೋಗಿ ಹಣ ಡ್ರಾ ಮಾಡುವ ಅನಿವಾರ್ಯತೆ ಉಂಟಾಯಿತು. ಇದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ. ಪೋಸ್ಟ್ ಆಫೀಸ್‌ಗಳು ಜನ ಸ್ನೇಹಿ ಆಗಬೇಕೇ ಹೊರತು ಜನರಿಗೆ ತೊಂದರೆ ಕೊಡಬಾರದು. ಇದರಿಂದಾಗಿಯೇ ಜನಸಾಮಾನ್ಯರು ಅಂಚೆ ಕಚೇರಿಯ ಉಳಿತಾಯ ಯೋಜನೆಗಳಿಂದ ದೂರ ಉಳಿಯುತ್ತಿದ್ದಾರೆ. ಅಂಚೆ ಕಚೇರಿಯ ಸಿಬ್ಬಂದಿಗೆ ಸಾರ್ವಜನಿಕರು ಹಣ ಹೂಡಿಕೆ ಮಾಡುವಾಗ ಇರುವ ಆಸಕ್ತಿ ಹಣ ವಾಪಸ್ ಕೊಡುವಾಗ ಇರುವುದಿಲ್ಲ. ನಮ್ಮ ದೇಶದ ಅಂಚೆ ಕಚೇರಿಗಳು ಇನ್ನೂ ಓಬಿರಾಯನ ಕಾಲದ ಕಾನೂನುಗಳನ್ನೇ ಪಾಲಿಸುತ್ತಿವೆ. ಕೇಂದ್ರ ಹಣಕಾಸು ಸಚಿವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಸ್ಮಾರಕ ನಿರ್ಮಾಣ ಸ್ವಾಗತಾರ್ಹ

ಮಾನ್ಯರೆ,

2025ರ ಐಪಿಎಲ್ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 18 ವರ್ಷಗಳ ನಂತರ ಐಪಿಎಲ್ ಇತಿಹಾಸದಲ್ಲೇ ಮೊದಲ ಬಾರಿಗೆ ಜಯಶೀಲರಾಗಿ ಟ್ರೋಫಿಯನ್ನು ಗೆಲ್ಲುವ ಮುಖಾಂತರ ಸಾಧನೆ ಮಾಡಿದೆ. ಐಪಿಎಲ್ ಆವೃತ್ತಿಯಲ್ಲಿ ನಾನಾ ರಾಜ್ಯಗಳ ಹೆಸರಿನಲ್ಲಿ ವಿವಿಧ ತಂಡಗಳು ಸೆಣಸಾಡುತ್ತವೆ. ಇಂತಹ ಎಲ್ಲಾ ತಂಡಗಳನ್ನು ಹಿಂದಿಕ್ಕಿ ಆರ್‌ಸಿಬಿ ತಂಡವು 2025ರಲ್ಲಿ ಅಹಮದಾಬಾದ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಗೆದ್ದು ಟ್ರೋಫಿಯನ್ನು ತನ್ನದಾಗಿಸಿಕೊಂಡಿತ್ತು.

ರಾಜ್ಯವನ್ನು ಪ್ರತಿನಿಧಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗೆಲುವಿನ ಸಂಭ್ರಮಾಚರಣೆಯನ್ನು ಬೆಂಗಳೂರಿನಲ್ಲೇ ಫ್ಯಾನ್ಸ್ ಜೊತೆ ಮಾಡಬೇಕೆಂದು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬಂದಿತ್ತು ಈ ಗೆಲುವಿನ ಸಂಭ್ರಮಾಚರಣೆಯನ್ನು ನೋಡಲು ಹಾಗೂ ತಮ್ಮ ನೆಚ್ಚಿನ ಕ್ರಿಕೆಟ್ ಆಟಗಾರರನ್ನು ಕಣ್ತುಂಬಿಕೊಳ್ಳವ ಸಲುವಾಗಿ ಅಪಾರ ಸಂಖ್ಯೆಯಲ್ಲಿ ಜನರು ಕ್ರೀಡಾಂಗಣಕ್ಕೆ ಒಮ್ಮೆಲೆ ನುಗ್ಗಿದ ಪರಿಣಾಮ, ಎಷ್ಟೋ ಜನ ಕಾಲ್ತುಳಿತಕ್ಕೆ ಒಳಗಾದರೂ, ಅದು ಎಷ್ಟರ ಮಟ್ಟಿಗೆ ಎಂದರೆ 11 ಜನ ಈ ಕಾಲ್ತುಳಿತಕ್ಕೆ ಬಲಿಯಾಗುವ ಮಟ್ಟಿಗೆ. ಆದ್ದರಿಂದ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಒಟ್ಟುಗೂಡಿ 2026ರ ಐಪಿಎಲ್ ಆವೃತ್ತಿಯಲ್ಲಿ ಹಿಂದೆ ಆದ ಘಟನೆ ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಿ, ಕಾಲ್ತುಳಿತಕ್ಕೆ ಬಲಿಯಾದವರ ಸವಿ ನೆನಪಿಗಾಗಿ ಸ್ಮಾರಕ ನಿರ್ಮಾಣವನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಾಡಿರುವುದು ಸ್ವಾಗತಾರ್ಹ.

–ಸಾಯಿ ಸಂದೇಶ್ ಬಿ.ಎಸ್., ಮೈಸೂರು



ನಿವೇದಿತ ಎಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.
niveditha.manthana26@gmail.com

ಮಂಥನ

ಮೈಸೂರಿನ ಸಾಹಿತ್ಯ ಮಣಿ ಮುಕುಟಗಳು



ವಿಜಯಾ ದಬ್ಬೆ



ಡಾ. ಪದ್ಮಾ ಶೇಖರ್



ಚ. ಸರ್ವಮಂಗಳಾ



ಡಾ.ನಾಗರತ್ನಮ್ಮ



ಡಾ.ಪ್ರೀತಿ ಶುಭಚಂದ್ರ



ಡಾ.ಲೋಲಾಕ್ಷಿ



ಡಾ.ಶಶಿಕಲಾ



ಡಾ.ಶೈಲಜಾ



ಡಾ.ಕವಿತಾ ರೈ



ಡಾ.ಜ್ಯೋತಿ ಶಂಕರ್



ಡಾ.ಗೀತಾ ನಾವೆಲ್



ಡಾ.ಹೆಚ್.ಎಂ.ಕಲಾಶ್ರೀ



ಡಾ.ಲತಾ ಮೈಸೂರು



ಡಾ.ಮೀನಾ ಮೈಸೂರು



ಡಾ.ಗೀತಾ ಸೀತಾರಾಂ



ಡಾ.ಧರಣಿದೇವಿ

ಮೈಸೂರಿನ ಲೇಖಕಿಯರ ಬಗ್ಗೆ ಕಳೆದ ಲೇಖನದಲ್ಲಿ ಬರೆದಾಗಲೇ ನಾನು ಹೇಳಿದ್ದೆ, ಮತ್ತೂ ಅನೇಕ ಲೇಖನಗಳಿಗೆ ಸಾಮಗ್ರಿ ಒದಗಿಸುವಷ್ಟು ಲೇಖಕಿಯರು ಇದ್ದಾರೆ ಎಂದು. ಕಳೆದ ಬಾರಿ ಬೇರೆ ಬೇರೆ ಕ್ಷೇತ್ರಗಳಲ್ಲಿದ್ದು ಬರವಣಿಗೆ ಹವ್ಯಾಸದಲ್ಲಿ ತೊಡಗಿರುವವರ ಬಗ್ಗೆ ತಿಳಿಸಿದ್ದೆ.

ಇಂದು ಬೇರೆ ಬೇರೆ ವೃತ್ತಿಗಳ ಜೊತೆ, ಮೈಸೂರು ವಿಶ್ವವಿದ್ಯಾನಿಲಯದ ಭಾಗವಾಗಿದ್ದುಕೊಂಡು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದವರ ಕಿರು ಪರಿಚಯವನ್ನು ನಾನಿಲ್ಲಿ ಮಾಡಲಿದ್ದೇನೆ.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮೈಸೂರು ನೀಡಿರುವ ಕೊಡುಗೆ ಅನನ್ಯವಾದುದು. ಕನ್ನಡ ಸಾಹಿತ್ಯದ ಬೆಳವಣಿಗೆಗೆ, ಅದರ ಇತಿಹಾಸ ನಿರ್ಮಾಣಕ್ಕೆ, ಸಂಶೋಧನೆಗೆ ಮೈಸೂರು ಕಾರ್ಯ ಕ್ಷೇತ್ರವಾಗಿತ್ತು. ಅದರಲ್ಲೂ ಕನ್ನಡ ಅಧ್ಯಯನ ಸಂಸ್ಥೆ ಸಾಹಿತ್ಯಕ ಚಟುವಟಿಕೆಗಳಿಗೆ ತವರಾಗಿತ್ತು ಎನ್ನುವುದು ಸರ್ವವೇದ್ಯ.

ಹೀಗೆ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡುತ್ತಾ, ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿದ್ದುಕೊಂಡು, ಕನ್ನಡ ಸಾಹಿತ್ಯಕ್ಕೂ ಅನುಪಮ ಸೇವೆ ಸಲ್ಲಿಸಿದವರ ಬಗ್ಗೆ ತಿಳಿದುಕೊಳ್ಳುವುದೇ ಆನಂದಕರ ವಿಷಯ.

ಸಮತಾ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿ, ಅದರ ಮೂಲಕ, ಲೇಖಕಿಯರನ್ನು ಗಂಭೀರ ಅಧ್ಯಯನ ಸಂಶೋಧನೆಗಳಿಗೆ ಹಚ್ಚಿದವರು **ಡಾ.ವಿಜಯಾ ದಬ್ಬೆ**. ಕನ್ನಡ ಪ್ರಾಧ್ಯಾಪಕರಾಗಿದ್ದ ಸೌಮ್ಯ ವದನದ ವಿಜಯಾ ದಬ್ಬೆಯವರ ಪ್ರಖರ ವೈಚಾರಿಕತೆ ಅವರಿಗೊಂದು ಶಿಷ್ಯ ಪರಂಪರೆಯನ್ನೇ ಸೃಷ್ಟಿಸಿತು. ಕನ್ನಡದ ಮೊಟ್ಟ ಮೊದಲ ಸ್ತ್ರೀವಾದಿ ಲೇಖಕಿ ಎಂದು ಹೆಸರಾದ ವಿಜಯಾ ದಬ್ಬೆ ಅವರು ಕವನ, ಪ್ರವಾಸ ಕಥನ, ವಿಮರ್ಶೆ, ಅನುವಾದಗಳ ಪ್ರಕಾರಗಳಲ್ಲಿ ಉತ್ಕೃಷ್ಟ ಕೃತಿಗಳನ್ನು ನೀಡಿದ್ದಾರೆ. ಬಹಳ ಬೇಗನೇ ಇಹಲೋಕ ತ್ಯಜಿಸಿದ ವಿಜಯಾ ದಬ್ಬೆ ಅವರ ಇಲ್ಲದಿರುವಿಕೆ ಸೃಷ್ಟಿಸಿರುವ ಶೂನ್ಯ ಇನ್ನೂ ಕಾಡುತ್ತಿದೆ.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ **ಡಾ.ಪದ್ಮಾ ಶೇಖರ್** ನಮ್ಮ ನಡುವೆ ಇರುವ ಅಪ್ರತಿಮ ಸಾಧಕಿ. ತಮ್ಮ 40 ಸುದೀರ್ಘ ವರ್ಷಗಳ ಕಾಲ ಶೈಕ್ಷಣಿಕ ಕ್ಷೇತ್ರದ ಹಲವಾರು ವಿಭಾಗಗಳಲ್ಲಿ ಕೆಲಸ ಮಾಡಿರುವ ಡಾ.ಪದ್ಮಾ ಶೇಖರ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗದ ಅಧ್ಯಕ್ಷರಾಗಿದ್ದವರು. ವಿವಿಯ ಮಹಿಳಾ ಅಧ್ಯಯನ ಕೇಂದ್ರ ಮತ್ತು ಜೈನಾಲಜಿ ವಿಭಾಗದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವೆಲ್ಲ ಜವಾಬ್ದಾರಿಗಳಿಗೂ ಗರಿಯಿಟ್ಟಂತೆ, ಬೆಂಗಳೂರಿನ ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಪ್ರಥಮ ಮಹಿಳಾ ಕುಲಪತಿಗಳಾಗಿ ಸೇವೆ ಸಲ್ಲಿದ್ದಾರೆ. ಇಂದು ಸಂಸ್ಕೃತ ವಿವಿಗೆ ಡಾ.ಅಹಲ್ಯಾ ಸಾರಥ್ಯ ವಹಿಸಿದ್ದಾರೆಂದರೆ, ಮಹಿಳೆ ಉನ್ನತ ಸ್ಥಾನದಲ್ಲಿ ಕೂರಬಲ್ಲಳೆಂದು ಸಾಬೀತು ಮಾಡಿ, ಅದೊಂದು ನೂತನ ಸಂಪ್ರದಾಯಕ್ಕೆ ನಾಂದಿ ಹಾಕಿದವರು ಡಾ.ಪದ್ಮಾ ಶೇಖರ್!

ತಮ್ಮ ಈ ಎಲ್ಲ ಕಾರ್ಯ ಬಾಹುಳ್ಯದ ನಡುವೆಯೇ ಅಧ್ಯಯನವನ್ನು ಬಿಡದ ಡಾ.ಪದ್ಮಾ ಅವರು, ಕವಿತಾ ರಚನೆ, ಜೀವನ ಚರಿತ್ರೆ, ವಿಮರ್ಶೆ, ಸಂಶೋಧನೆ ಮತ್ತು ಹತ್ತು ಹಲವು ಪ್ರಮುಖ ಗ್ರಂಥಗಳ ಸಂಪಾದನೆಯಲ್ಲಿ ತೊಡಗಿಸಿಕೊಂಡವರು. 20ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಇವರ ಹಲವು ಕೃತಿಗಳು ಪ್ರಶಸ್ತಿಗೆ ಭಾಜನವಾಗಿವೆ. ನಿವೃತ್ತ ಜೀವನವನ್ನು ಸಾಹಿತ್ಯದ ಓದು, ಬರಹ ಹಾಗು ಸಾಹಿತ್ಯ ಸಂಘಟನೆಗಳಿಗೆ ತೊಡಗಿಸಿಕೊಂಡಿರುವ ಡಾ.ಪದ್ಮಾ ಶೇಖರ್ ಎಲ್ಲರಿಗೂ ಸ್ಫೂರ್ತಿ.

ಚ.ಸರ್ವಮಂಗಳ ನಮ್ಮ ನಡುವಿರುವ ಮತ್ತೊಬ್ಬ ಸಾಧಕಿ. ತಮ್ಮ ಅಮ್ಮನ ಗುಡ್ಡ ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. 9 ಭಾರತೀಯ ಭಾಷೆಗಳಿಗೆ ಅನುವಾದಗೊಂಡಿರುವ ಈ ಸಂಕಲನ ಇಂದಿಗೂ ಪ್ರಸಿದ್ಧ. ಅನೇಕ ಪುಸ್ತಕಗಳ ಸಂಪಾದನೆಯನ್ನೂ ಮಾಡಿರುವ ಚ.ಸರ್ವಮಂಗಳ ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದವರು. ಇದಲ್ಲದೆ, ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಮಾಧ್ಯಮ ಮುಕ್ತ ವೇದಿಕೆ ಸಂಚಾಲಕರಾಗಿದ್ದು, ಭಾರತ ಚೀನಾ ಮೈತ್ರಿ ಸಂಘದ ಅಧ್ಯಕ್ಷೆಯಾಗಿ ಕೆಲಸ ಮಾಡಿದ್ದಾರೆ. ಮಹಿಳೆಯ ಮೇಲಿನ ದೌರ್ಜನ್ಯವನ್ನು ಖಂಡಿಸುತ್ತಾ ಹಲವು ಹೋರಾಟಗಳಲ್ಲಿ ಭಾಗಿಯಾಗಿರುವ ಸರ್ವ ಮಂಗಳಾ ಅವರ ಬರಹಗಳಲ್ಲೂ ಅದೇ ಗಟ್ಟಿಯನ್ನು ಕಾಣಬಹುದು. ಉತ್ತಮ ವಾಗ್ಮಿಯೂ ಆಗಿರುವ ಚ.ಸರ್ವಮಂಗಳಾ ಇಂದಿಗೂ ಸಕ್ರಿಯವಾಗಿ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಏಪ್ರಿಲ್ 6 ಚ.ಸರ್ವ ಮಂಗಳಾ ಅವರ ಹುಟ್ಟಿದ ದಿನ!



ಪ್ರೀತಿ ನಾಗರಾಜ್

ಡಾ.ಟಿ.ಎನ್.ನಾಗರತ್ನಮ್ಮ ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಚಿನ್ನದ ಪದಕದೊಂದಿಗೆ ಎಂಎ ಪದವಿ ಪಡೆದು ಅಲ್ಲಿಯೇ ಸಂಶೋಧನಾ ಸಹಾಯಕರಾಗಿ, ಬೋಧನೆ, ಮಾರ್ಗದರ್ಶನ, ಪ್ರಕಟಣೆ ಹಾಗೂ ಮೇಲ್ವಿಚಾರಕರಾಗಿ ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿವಿ ಇಂದ ಕನ್ನಡದಲ್ಲಿ ಪಿ ಎಚ್ಡಿ ಪಡೆದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಇವರು ತಮ್ಮ 'ಶ್ರೀ ವಾದಿರಾಜರ ಕೃತಿಗಳು' ಪುಸ್ತಕಕ್ಕಾಗಿ ಕರ್ನಾಟಕ ರಾಜ್ಯ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿಯಿಂದ ಪುರಸ್ಕೃತರಾಗಿರುವ ಇವರು ಸ್ವತಃ ಹಲವಾರು ಕೀರ್ತನೆಗಳನ್ನು ರಚಿಸಿ, 30ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿದ್ದಾರೆ. 2003ರಲ್ಲಿ ನಿವೃತ್ತರಾದ ಇವರು ಹರಿದಾಸ ಸಾಹಿತ್ಯದ ಕುರಿತ ತಮ್ಮ ಸಮಗ್ರ ಸಂಶೋಧನಾ ಕಾರ್ಯಕ್ಕೆ ಕನಕಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರು ಪ್ರಸ್ತುತ ಕನಕದಾಸರ 'ಮೋಹನ ತರಂಗಿಣಿ'ಯ ಅನುವಾದದಲ್ಲಿ ನಿರತರಾಗಿದ್ದಾರೆ.

ಕನ್ನಡ ಅಧ್ಯಯನ ಸಂಸ್ಥೆಯ ಇತಿಹಾಸದಲ್ಲಿ ಮೊದಲ ಮಹಿಳಾ ನಿರ್ದೇಶಕಿ ಎನಿಸಿದ **ಡಾ.ಪ್ರೀತಿ ಶುಭಚಂದ್ರ** ವಿಮರ್ಶಕಿ, ಲೇಖಕಿ ಹಾಗೂ ಮಹಿಳಾವಾದಿಯಾಗಿ ಹೆಸರು ಮಾಡಿದವರು. ಸ್ತ್ರೀ ಸಮಾನತೆ, ಸ್ತ್ರೀಪರ ಜೀವನಪ್ರೀತಿಗಳನ್ನು ಪ್ರತಿಪಾದಿಸುವ ಅವರ ಪ್ರಕಾರ, ಮಹಿಳಾವಾದವು ಪಥ್ಯವಾದರೆ ಮನೋಭಾವಗಳ ಬದಲಾವಣೆ ಸಾಧ್ಯ. 10ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಡಾ.ಪ್ರೀತಿ ಶುಭಚಂದ್ರ ಅವರಿಗೆ ಸಿದ್ಧಯ್ಯ ಪುರಾಣಿಕ ಕಾವ್ಯಾನಂದ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ಸಂದಿವೆ.

ಪ್ರೊಫೆಸರ್ **ಎಸ್.ಡಿ.ಶಶಿಕಲಾ** ಅವರು ಅಧ್ಯಯನ ಸಂಸ್ಥೆಯ ಮತ್ತೊಂದು ಗರಿ. ಆಧುನಿಕ ಪ್ರಾಚೀನ ಸಾಹಿತ್ಯಗಳ ವಿಸ್ತೃತ ಸಂಶೋಧನೆಯಲ್ಲಿ ತೊಡಗಿಸಿಕೊಂಡಿರುವ ಇವರ ವಿಮರ್ಶಾ ಲೇಖನಗಳು ಹೊಸ ಹೊಳಹನ್ನು ನೀಡುವಂತಹವು. ರನ್ನನ ಗದಾಯುದ್ಧದ ಮೇಲಿನ ಇವರ ಬರಹಗಳು ಬಹು ಗಂಭೀರವಾದುವು. ತಮ್ಮ 'ನಗೀನವಿಲು' ಬ್ಲಾಗ್‌ನಲ್ಲಿ ಅನೇಕ ಮೌಲಿಕ ಲೇಖನಗಳನ್ನು ಓದಬಹುದು.

ಡಾ.ಎನ್.ಕೆ.ಲೋಲಾಕ್ಷಿ ಅವರು ಪ್ರಸ್ತುತ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿಯೇ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಹಿತ್ಯ ರಚನೆ ಮತ್ತು ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಲೋಲಾಕ್ಷಿಯವರನ್ನು ದಸರೆ ಕವಿಗೋಷ್ಠಿಗಳ ಯಶಸ್ವಿ ಆಯೋಜನೆಯಲ್ಲಿ ತೊಡಗಿಕೊಂಡಿರುವುದನ್ನು ನಾವೆಲ್ಲರೂ ನೋಡಿದ್ದೇವೆ. 10ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಇವರ ಹಲವಾರು ಮೌಲಿಕ ಲೇಖನಗಳು ಪ್ರಕಟವಾಗಿವೆ. ಕಣವಿ ಕಾವ್ಯ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದಿರುವ ಲೋಲಾಕ್ಷಿ ಅವರ ಸಾಹಿತ್ಯಸೇವೆ ಅವಿರತವಾಗಿ ಸಾಗಿದೆ.

ಡಾ.ಕವಿತಾ ರೈ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಲ್ಲಿ ಸಹಪ್ರಾಧ್ಯಾಪಕಿಯಾಗಿದ್ದಾರೆ. ಕವನ, ನಾಟಕ ಮತ್ತು ವಿಮರ್ಶೆಗಳಲ್ಲಿ ತೊಡಗಿಸಿಕೊಂಡಿರುವ ಕವಿತಾ ರೈ ಗಟ್ಟಿ ದನಿಯ ಸೂಕ್ಷ್ಮ ಮನಸಿನ ಲೇಖಕಿ. ಕಾವ್ಯ ಮೀಮಾಂಸೆಯಲ್ಲಿ ಪರಿಣಿತಿ ಹೊಂದಿರುವ ಇವರ ರಚನೆಗಳಲ್ಲಿ ಮಾನವತಾವಾದ, ಸ್ತ್ರೀಯರ ಹಕ್ಕುಗಳು, ಸಾಮರ್ಥ್ಯ, ಗುರಿಗಳನ್ನು ಒರೆಹಚ್ಚುವ ದೃಷ್ಟಿಕೋನವಿರುತ್ತದೆ. ಕನ್ನಡ ಸಾಹಿತ್ಯ ಜಗತ್ತಿನ ಹೊಸ ಭರವಸೆ ಡಾ.ಕವಿತಾ ರೈ.

ಕರ್ನಾಟಕ ಮುಕ್ತ ವಿವಿಯಲ್ಲಿಯೇ ಸಹಪ್ರಾಧ್ಯಾಪಕರಾಗಿರುವ **ಡಾ.ಜ್ಯೋತಿ ಶಂಕರ್**, ಬರಹಗಾರರಾಗಿರುವ ಜೊತೆಗೆ, ಹಳೆಗನ್ನಡ ಸಾಹಿತ್ಯವನ್ನು ತಮ್ಮ ವ್ಯಾಖ್ಯೆ, ಭಾಷಣ, ಅಂಕಣಗಳ ಮೂಲಕ ಜೀವಂತವಾಗಿ ಇಡುವ ಸೃಜನಶೀಲ ಪ್ರಯತ್ನವನ್ನು ಮಾಡುತ್ತಿದ್ದಾರೆ. ಸಾಮಾಜಿಕ ಕಳಕಳಿ, ಸಾಂಸ್ಕೃತಿಕ ಪರಂಪರೆ, ರಾಮಾಯಣ ಮಹಾಭಾರತ ಮತ್ತು ಪಂಪ ರನ್ನ ಲಕ್ಷ್ಮೀಶ ಕುಮಾರವ್ಯಾಸರ ಕುರಿತ ತಮ್ಮ ಭಾಷಣ ಲೇಖನಗಳ ಮೂಲಕ ಸಾಹಿತ್ಯವನ್ನು ಜನಸಾಮಾನ್ಯರಿಗೆ ತಲುಪಿಸುತ್ತಿರುವ ಡಾ ಜ್ಯೋತಿ ಶಂಕರ್ ಅವರ ಕಾರ್ಯ ಶ್ಲಾಘನೀಯ.

ನಿವೃತ್ತ ಕನ್ನಡ ಪ್ರಾಧ್ಯಾಪಕಿ **ಡಾ.ಗೀತಾ ನಾವೆಲ್**, ಕವಯತ್ರಿ ಹೌದಾದರೂ, ಪ್ರಾಚೀನ ಸಾಹಿತ್ಯದ ಬಗ್ಗೆ ಅವರಿಗೆ ವಿಶೇಷ ಪ್ರೀತಿ. ನಿವೃತ್ತಿಯ ನಂತರದ ಸಮಯವನ್ನೆಲ್ಲಾ ಅವರು ಪ್ರಾಚೀನ ಸಾಹಿತ್ಯದ ಅನುವಾದ ಅಧ್ಯಯನಕ್ಕೆ ಮೀಸಲಿಟ್ಟಿದ್ದಾರೆ.

ಡಾ.ಎಚ್.ಟಿ.ಶೈಲಜ ಶರಣ ಸಾಹಿತ್ಯದ ಕುರಿತು ಅಪರಿಮಿತ ಕೆಲಸವನ್ನು ಮಾಡಿ ಹಲವಾರು ಪ್ರಬುದ್ಧ ಪ್ರಬಂಧಗಳನ್ನು ರಚಿಸಿದ್ದಾರೆ.

ಡಾ.ಲತಾ ಮೈಸೂರು, ಕವಯತ್ರಿ, ಲೇಖಕಿ ಮತ್ತು ಸಂಶೋಧಕಿ. ಮೈಸೂರು ಮಹಾರಾಣಿ ಕಾಲೇಜಿನ ಕನ್ನಡ ಸಹಪ್ರಾಧ್ಯಾಪಕರಾಗಿರುವ ಇವರು ವಚನಗಳ ಕುರಿತು ಗಂಭೀರ ಓದಿಗೆ ತಮ್ಮನ್ನು ತಾವು ತೆರೆದುಕೊಂಡಿರುವ ಇವರ ಬರಹಗಳು ಆಗಾಗ್ಗೆ ಪ್ರಕಟವಾಗುತ್ತಲೇ ಇರುತ್ತವೆ. ಅತ್ಯುತ್ತಮ ಲಲಿತ ಪ್ರಬಂಧಗಳನ್ನು ರಚಿಸುತ್ತಿದ್ದ ಡಾ.ನಿರ್ಮಲಾ ರಾಮದಾಸ್ ನನಗೂ ಪ್ರಾಧ್ಯಾಪಕರಾಗಿದ್ದರು ಎಂಬುದು ನನಗೆ ಹೆಮ್ಮೆಯ ಸಂಗತಿ. ಸಮತಾ ಅಧ್ಯಯನ ವೇದಿಕೆಯಲ್ಲಿ ತೊಡಗಿಕೊಂಡಿರುವ **ಡಾ.ಎಚ್.ಎಂ.ಕಲಾಶ್ರೀ** ಅವರ ಸಂಶೋಧನಾ ಲೇಖನಗಳು ಉತ್ತಮ ಆಕರ.

ಇವರೆಲ್ಲಾ ವಿಶ್ವವಿದ್ಯಾನಿಲಯದ ಸಾಹಿತ್ಯಕ ಕಿರೀಟಕ್ಕೆ ಹೆಮ್ಮೆಯ ಗರಿಗಳಾಗಿದ್ದರೆ, ಬೇರೆ ಕ್ಷೇತ್ರಗಳಿಗೆ ಸೇರಿದ್ದಾಗ್ಯೂ ಮತ್ತಷ್ಟು ಲೇಖಕಿಯರು ಮೈಸೂರಿನ ಗರಿಮೆ ಹೆಚ್ಚಿಸುತ್ತಿದ್ದಾರೆ. **ಮೀನಾ ಮೈಸೂರು**, ಲೇಖಕಿ, ವಿಮರ್ಶಕಿ, ಕವಯತ್ರಿ, ನಾಟಕಕಾರ್ತಿಯಾಗಿ ಹೆಸರು ಮಾಡಿದವರು. ಇಷ್ಟೇ ಅಲ್ಲದೇ, 'ಅಪರಾಜಿತೆ' ಎಂಬ ಹೆಸರಿನ ತಮ್ಮದೇ ಪ್ರಕಾಶನವನ್ನು ಸ್ಥಾಪಿಸಿ ಪುಸ್ತಕ ಪ್ರಕಟಣೆಯ ಏಳು ಬೀಳುಗಳಿಗೂ ತಮ್ಮನ್ನು ತೆರೆದುಕೊಂಡು ಸವಾಲುಗಳನ್ನು ಎದುರಿಸಿದವರು. ಇವರ ಬರಹ ಪ್ರಕಟವಾಗದ ಪತ್ರಿಕೆಗಳೇ ಇಲ್ಲ. ಚಂದನ ವಾಹಿನಿಯಲ್ಲಿಯೂ ವಾರ್ತಾ ವಿಭಾಗದ ಅಧಿಕಾರಿಯಾಗಿ ಕೆಲಸ ಮಾಡಿರುವ ಮೀನಾ ಮೈಸೂರು, 'ಯೋಜನಾ' ಪತ್ರಿಕೆಯ ಸಂಪಾದಕಿಯಾಗಿದ್ದರು. ಮೈಸೂರಿನ ಹೆಮ್ಮೆಯ ಚಿಂತಕಿಯರಲ್ಲಿ ಒಬ್ಬರು.

ಡಾ.ಧರಣೀದೇವಿ ಮಾಲಗತ್ತಿ ಅವರು ಐಪಿಎಸ್ ಅಧಿಕಾರಿ. ಭಾವನೆಗಳಿಗೆ ಜಾಗವಿಲ್ಲ ಎಂದು ನಾವೆಲ್ಲರೂ ಎಂದುಕೊಳ್ಳುವ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುವ ಧರಣೀದೇವಿ ಅವರ ಸಾಹಿತ್ಯ ಪ್ರೀತಿ ಮತ್ತು ಕೃಷಿ ಬೆರಗು ಹುಟ್ಟಿಸುವಂತದ್ದು. ಅಂಕಣ ಕಾರ್ತಿ, ಕವಯತ್ರಿ, ಸ್ತ್ರೀವಾದಿ, ವಿಮರ್ಶಕಿ, ಸಂಶೋಧಕಿ, ಸಂಪಾದಕಿ, ಅನುವಾದಕಿಯಾಗಿ ಮಹತ್ವದ ಕೃತಿಗಳನ್ನು ನಮಗೆ ನೀಡಿದ್ದಾರೆ. ಅಷ್ಟೇ ಅಲ್ಲದೆ, ಇವರ ಮಹಾಕಾವ್ಯ, 'ಇಳಾಭಾರತಂ' ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಹೊಳಹಿನ ಕೃತಿ.

ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ ಪ್ರಶಸ್ತಿಯ ಜೊತೆಗೆ ಹತ್ತು ಹಲವು ಪ್ರಶಸ್ತಿಗಳಿಂದ ಪುರಸ್ಕೃತರಾಗಿರುವ ಡಾ.ಧರಣೀದೇವಿ ಅವರ ಸಾಹಿತ್ಯ ಪ್ರೀತಿ ಆದರ್ಶಪ್ರಾಯವಾದದ್ದು.

ಡಾ.ಗೀತಾ ಸೀತಾರಾಮ್ ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಉಪನಿರ್ದೇಶಕರು. ಕಾದಂಬರಿ, ನಾಟಕ, ಶಿಶುಸಾಹಿತ್ಯ ಪ್ರಕಾರಗಳಲ್ಲಿ ಹಲವು ಕೃತಿಗಳನ್ನು ರಚಿಸಿರುವ ಇವರು ವಾಗ್ಗೇಯಕಾರರೂ ಹೌದು. ಎರಡು ಹೊಸ ರಾಗಗಳನ್ನು ನೀಡಿರುವ ಇವರು ಆಕಾಶವಾಣಿಯ ಕಲಾವಿದರು. 'ತ್ಯಾಗರಾಜರ ಕೃತಿ'ಗಳ ಕನ್ನಡಾನುವಾದದ ಅಪರೂಪದ ಕೃತಿ ಹೊರತಂದಿರುವ ಗೀತಾ ಸೀತಾರಾಮ್ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿಯೊಂದಿಗೆ ಇನ್ನೂ ಹಲವು ಪ್ರಶಸ್ತಿಗಳು ಲಭಿಸಿವೆ.

ಮೈಸೂರಿನ ಮತ್ತೊಬ್ಬ ಹೆಮ್ಮೆಯ ಲೇಖಕಿ ಎಂದರೆ **ಪ್ರೀತಿ ನಾಗರಾಜ್**. ಮೂಲತಃ ಪತ್ರಕರ್ತೆಯಾಗಿರುವ ಪ್ರೀತಿ ನಾಗರಾಜ್, ಕನ್ನಡ ಹಾಗೂ ಇಂಗ್ಲಿಷ್ ಎರಡೂ ಭಾಷೆಯಲ್ಲಿ ಬರೆಯುತ್ತಾರೆ. ಇಂಗ್ಲಿಷ್‌ನಿಂದ ಸಾಕಷ್ಟು ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಬಿ.ಜಯಶ್ರೀ ಅವರ ಆತ್ಮಕಥೆ, 'ಕಣ್ಣಾ ಮುಚ್ಚೇ ಕಾಡೇ ಗೂಡೇ' ಕೃತಿಗೆ ಇವರದೇ ನಿರೂಪಣೆ. ಕರ್ನಾಟಕ ಸಾಹಿತ್ಯ ಅಕ್ಯಾಡೆಮಿ ಬಹುಮಾನ ಈ ಕೃತಿಗೆ ಲಭಿಸಿದೆ. ಪ್ರಚಲಿತ ವಿದ್ಯಮಾನಗಳಿಗೆ ಸ್ಪಂದಿಸುತ್ತಾ ಲೇಖನಗಳನ್ನು ರಚಿಸುವ ಇವರ 'ಮಿರ್ಚಿ ಮಂಡಕ್ಕಿ' ಅಂಕಣ ಬಹು ಜನಪ್ರಿಯ. ವಿಮರ್ಶಕಿಯೂ ಆಗಿರುವ ಇವರು ಉತ್ತಮ ವಾಗ್ಮಿ. ನಿರಂತರ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಇವರು ರಂಗಭೂಮಿಗೂ ಸೇರಿದವರು.

ಇವರ ಜೊತೆ ಅನೇಕ ಸೃಜನಶೀಲ ಕವಿ ಮನಸುಗಳು ಮೈಸೂರನ್ನು ಸಮೃದ್ಧಗೊಳಿಸಿವೆ.

ಡಾ.ಟಿ.ಎಸ್.ಶ್ರೀವಳ್ಳಿ, ಡಾ.ತುಳಸೀ ರಾಮಚಂದ್ರ ಡಾ.ಎನ್.ಕುಮುದಾ, ಡಾ.ಎನ್.ಸಂಧ್ಯಾ ಕೇಶವ್, ಎನ್.ಆರ್.ರೂಪಶ್ರೀ, ಲೀಲಾ ಮಣ್ಣಾಲ, ಇಂದಿರಾ ಪಾಟೀಲ್, ಮುಳಿಯ ಸರಸ್ವತಿ, ಟಿ.ಎಸ್. ಲಲಿತಾ, ವಿ.ವಿಜಯಕುಮಾರಿ, ಡಾ.ಎಚ್.ವಿ. ರಮಾ, ಭಾರತಿ ಎಚ್.ಎನ್. ಹೀಗೆ ಹೆಸರುಗಳ ಪಟ್ಟಿ ಸಾಗುತ್ತಾ ಹೋಗುತ್ತದೆ. ಇದು ಮುಗಿಯದ ಪಟ್ಟಿ ಎಂದೇ ಹೇಳಬಹುದು. ಸಾಹಿತ್ಯ ಲೋಕ ಪ್ರತಿ ಕ್ಷಣಕ್ಕೂ ಹೊಸತೊಂದು ಕವಿ ಹೃದಯವನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿರುತ್ತದೆ.

ಮೈಸೂರು ವಿಜ್ಞಾನ ಲೇಖಕರನ್ನೂ ನೀಡಿದೆ. ಅವರ ಸಾಧನೆಗಳನ್ನು ಹೇಳಲು ಮತ್ತೊಂದು ಲೇಖನವೇ ಸಿದ್ಧವಾಗಬೇಕು. ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಮೈಸೂರನ್ನು ಸಾಹಿತ್ಯಕವಾಗಿ ಸಮೃದ್ಧಗೊಳಿಸಿದ ಇವರೆಲ್ಲರನ್ನೂ ನೆನೆಯುವುದು ಅವರ ಸಾಹಿತ್ಯ ಸೇವಾ ಸಮರ್ಪಣೆಗೊಂದು ಕಿರು ಗೌರವ.

ಹುಟ್ಟುಹಬ್ಬದ ಶುಭಾಶಯ...



ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಪುನೀತ್ ಎಂ.ಎಸ್. ಹಾಗೂ ಬಿಜೆಪಿ ಮುಖಂಡ ಪ್ರಮೋದ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮೈಸೂರು ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಭಾರೀ ಹಾರ ಹಾಕುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಬಿಜೆಪಿ ಕಾರ್ಯಕರ್ತರು ಶುಭ ಕೋರಿದರು.

2025ನೇ ಸಾಲಿನ ಪುಸ್ತಕ ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

ಮೈಸೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು 2025ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಬಹುಮಾನಕ್ಕಾಗಿ ಆಹ್ವಾನಿಸಿದೆ.

ಲೇಖಕರು/ ಪ್ರಕಾಶಕರು/ ಸಾಹಿತ್ಯಾಸಕ್ತ ಸಾರ್ವಜನಿಕರು ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560002. ಈ ವಿಳಾಸಕ್ಕೆ ರಿಜಿಸ್ಟರ್ಡ್ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾಗಿ 2026ರ ಜೂನ್ 30 ರೊಳಗೆ ತಲುಪುವಂತೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗಾಗಿ www. sahithyaacademy. karnataka. gov.in ಸಂಪರ್ಕಿಸುವುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃಗಾಲಯದ ಹುಲಿ 'ಪೃಥ್ವಿ' ಸಾವು

ಮೈಸೂರು,ಏ.8(ಪಿಎಂ)– ಶ್ರೀ ಚಾಮರಾಜೇಂದ್ರ ಮೃಗಾಲಯದ ಗಂಡು ಹುಲಿ ಪೃಥ್ವಿ ಸಾವನ್ನಪ್ಪಿದೆ. 13 ವರ್ಷದ ಈ ಹುಲಿ ಹಲವು ವರ್ಷಗಳಿಂದ ಜನ್ಮಜಾತ ಪ್ಯಾರೆಸಿಸ್ ಅನಾರೋಗ್ಯ ದಿಂದ ಬಳಲುತ್ತಿತ್ತು.

ಹಾಗಾಗಿ ಕೂರ್ಗಳ್ಳಿಯಲ್ಲಿರುವ ಮೃಗಾಲಯದ ಚಾಮುಂಡಿ ವನ್ಯಜೀವಿ ಸಂರಕ್ಷಣೆ, ರಕ್ಷಣೆ ಹಾಗೂ ಪುನರ್ವಸತಿ ಕೇಂದ್ರದಲ್ಲಿ ಇರಿಸಿ ನಿರಂತರ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಬೆಳಗ್ಗೆ ಮೃತಪಟ್ಟಿದೆ.

ಪೃಥ್ವಿ ಆರೋಗ್ಯವಾಗಿದ್ದ ಸಂದರ್ಭದಲ್ಲಿ ಮೃಗಾಲಯದ ಪ್ರಮುಖ ಆಕರ್ಷಣೆಯಲ್ಲಿ ಸ್ಥಾನಗಳಿಸಿತ್ತು. ಏ.6ರಂದು ಇದರ ಅನಾರೋಗ್ಯ ತೀವ್ರಗೊಂಡಿತ್ತು. ಪರಿಣಾಮ ಆಹಾರ ಸೇವನೆ ತ್ಯಜಿಸಿತ್ತು. ಮೃಗಾಲಯದ ಪಶುವೈದ್ಯರು ಚಿಕಿತ್ಸೆ ನೀಡಿದರೂ ಫಲಕಾರಿಯಾಗದೇ ಮೃತಪಟ್ಟಿದೆ. ಇದರ ಸಾವಿಗೆ ಮೃಗಾಲಯವು ವಿಷಾದ ವ್ಯಕ್ತಪಡಿಸಿದೆ.

ಈ ವರ್ಷ ಮೃಗಾಲಯದಲ್ಲಿ ಸಾವನ್ನಪ್ಪಿರುವ ಎರಡನೇ ಹುಲಿ ಇದಾಗಿದೆ. ಇದೇ ಜನವರಿಯಲ್ಲಿ 3 ವರ್ಷ 9 ತಿಂಗಳು ಪ್ರಾಯದ ಹೆಣ್ಣು ಹುಲಿ ಪ್ರೀತಿ ಸಹ ಸಾವನ್ನಪ್ಪಿತ್ತು. ಮಿದುಳಿನ ಪೊರೆಗಳ ಉರಿಯೂತದ ಚಿಕಿತ್ಸೆಗೆ ಸ್ಪಂದಿಸದೇ ಪ್ರೀತಿ ಸಾವನ್ನಪ್ಪಿತ್ತು.



ಸಾವನ್ನಪ್ಪಿದ ಪೃಥ್ವಿ ಹುಲಿ

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಕಾರ್ಯನಿರ್ವಾಹಕ ನಿರ್ದೇಶಕಿ ಅನುಷಾ, ಪೃಥ್ವಿ ಮೃಗಾಲಯದಲ್ಲಿ ಜನ್ಮತಾಳಿದ ಹುಲಿ. ಅದಕ್ಕೆ ಜನನ ಸಂಬಂಧಿತ ಆರೋಗ್ಯ ಇತ್ತು. ಹಾಗಾಗಿ ಹಲವು ವರ್ಷಗಳಿಂದ ಕೂರ್ಗಳ್ಳಿ ಪುನರ್ವಸತಿ ಕೇಂದ್ರದಲ್ಲಿ ಇರಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು ಆದರೆ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಸಾವನ್ನಪ್ಪಿದೆ ಎಂದು ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜೆಎಸ್‌ಎಸ್ ಸಂಗೀತ ಸಭಾದಿಂದ ಏ.12, ಸಂಗೀತ ತ್ರಿಮೂರ್ತಿಗಳ ಸಂಸ್ಮರಣೆ





ಮೈಸೂರು,ಏ.8–ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನಿಂದ ಸಂಗೀತ ತ್ರಿಮೂರ್ತಿಗಳ ಸಂಸ್ಮರಣೆಯನ್ನು ಏ.12ರಂದು ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ದಿವ್ಯಾಶೀರ್ವಾದದೊಂದಿಗೆ ಮೈಸೂರು ಸರಸ್ವತಿಪುರಂ, ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಶ್ರೀ ಶ್ಯಾಮಾ ಶಾಸ್ತ್ರಿಗಳು, ಶ್ರೀ ತ್ಯಾಗರಾಜರು ಮತ್ತು ಶ್ರೀ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳ ಗಾಯನವನ್ನು ಸುರಭಿ ಗಾನಕಲಾ ಮಂದಿರದ ಕಲಾವಿದರು ಪ್ರಸ್ತುತಿಪಡಿಸಲಿದ್ದಾರೆ. ಇದರ ಪರಿಕಲ್ಪನೆ ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರದು. ಡಾ. ಸುಕನ್ಯಾ ಪ್ರಭಾಕರ್ ಅವರ ತಾಯಿಯೇ ಅವರ ಮೊದಲ ಗುರು. ಡಾ.ಗೌರಿಕುಪ್ಪುಸ್ವಾಮಿ, ಪ್ರೊ.ವಿ. ರಾಮರತ್ನಂ, ವಿ.ನಾಗರತ್ನ ಸದಾಶಿವ ಇವರೆಲ್ಲರ ಮಾರ್ಗದರ್ಶನದಲ್ಲೇ ಅವರು ಬೆಳೆದರು. '2001ರಲ್ಲಿ ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಶ್ರೀ ಜಯಚಾಮರಾಜೇಂದ್ರ ಒಡೆಯರ ಕೊಡುಗೆ' ಎಂಬ ಪ್ರೌಢ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಆಕಾಶವಾಣಿ ಮತ್ತು ದೂರದರ್ಶನ ಎ ಟಾಪ್ ಗ್ರೇಡ್ ಕಲಾವಿದರು. ಮದ್ರಾಸ್ ಮ್ಯೂಸಿಕ್ ಅಕಾಡೆಮಿಯಿಂದ ಎರಡು ಬಾರಿ ಸನ್ಮಾನ, 2005ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಮೈಸೂರಿನಲ್ಲಿ ಸುರಭಿ ಗಾನಕಲಾ ಮಂದಿರ ಸಂಸ್ಥೆಯನ್ನು ಸಂಸ್ಥಾಪಿಸಿ ಹಲವಾರು ಉನ್ನತ ಮಟ್ಟದ ಕಲಾವಿದೆಯರನ್ನು ಸಂಗೀತ ಕ್ಷೇತ್ರಕ್ಕೆ ನೀಡಿದ್ದಾರೆ.

ವಯೋಲಿನ್ ಸಹಕಾರ ನೀಡಲಿರುವ ವಿದುಷಿ ಎಸ್.ಎ.ದಿವ್ಯಶ್ರೀ ಅವರು ಮೈಸೂರು ಎಂ.ಮಂಜುನಾಥ್ ಅವರ ಶಿಷ್ಯೆ. ಕರ್ನಾಟಕ ಸಂಗೀತ ಗಾಯನ ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ ಹೆಗ್ಗಳಿಕೆ ಇವರದಾಗಿದೆ. ನಾಡಿನ ಹಲವಾರು ಹಿರಿಯ ಸಂಗೀತ ವಿದ್ವಾಂಸರ ಕಛೇರಿಗಳಿಗೆ ವಯೋಲಿನ್ ಸಹಕಾರ ನೀಡಿ ರುತ್ತಾರೆ. ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಪ್ರಸಾರ ಸಹಾಯಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೃದಂಗ ಸಹಕಾರ ನೀಡಲಿರುವ ವಿದ್ವಾನ್ ಬಿ.ಎಸ್.ಶುಭಾಂಗ್ ಅವರು ಮೂಲ ಶಿಕ್ಷಣವನ್ನು ವಿದ್ವಾನ್ ಹೆಚ್.ಎಲ್. ಶಿವಶಂಕರ್ ಅವರ ಬಳಿ ನಂತರ ವಿದ್ವಾನ್ ಜಿ.ಎಸ್. ರಾಮಾನುಜಮ್ ಅವರ ಬಳಿ ಹಾಗೂ ವಿದ್ವಾಂಸರಾದ ಕಲ್ಲೈಮಾಮಣಿ ಅವರ ಬಳಿ ಅಭ್ಯಾಸ ಮಾಡಿದ್ದಾರೆ.

ಹೈದರಾಲಿ ರಸ್ತೆಬದಿ, ಡಿವೈಡರ್‌ನಲ್ಲಿ 122 ಗಿಡ ಬೆಳೆಸಲು ನಿರ್ಧಾರ




ಮೈಸೂರು, ಏ.8(ಎಂಕೆ)– ಹೈದರಾಲಿ ರಸ್ತೆ ಅಭಿವೃದ್ಧಿ ಹೆಸರಿನಲ್ಲಿ 40ಕ್ಕೂ ಅಧಿಕ ಮರಗಳನ್ನು ಹನನ ಮಾಡಿ, ಪರಿಸರ ಪ್ರೇಮಿಗಳ ಕೆಂಗಣ್ಣಿಗೆ ಗುರಿಯಾಗಿದ್ದ ಮೈಸೂರು ನಗರಪಾಲಿಕೆ, ಈ ಜಾಗದಲ್ಲಿ ಈಗ 122 ಗಿಡಗಳನ್ನು ಬೆಳೆಸಲು ಮುಂದಾಗಿದೆ...!

ರಾತ್ರೋರಾತ್ರಿ 50 ವರ್ಷದ 40ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿತ್ತು. ಇದರಿಂದ ಕೆರಳಿದ ಮೈಸೂರಿನ ಪರಿಸರ ಪ್ರೇಮಿಗಳು, ವಿವಿಧ ಪರಿಸರ ಸಂಘಟನೆಗಳು ಸರಣಿ ಪ್ರತಿಭಟನೆ ನಡೆಸಿ, ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. ಜನಾಕ್ರೋಶದಿಂದ ಎಚ್ಚೆತ್ತ ಪಾಲಿಕೆ, ಮರಗಳನ್ನು ಕಡಿದ ಸ್ಥಳದಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವುದಾಗಿ ನೀಡಿದ ಭರವಸೆಯಂತೆ ರಸ್ತೆಯ ಎರಡು ಬದಿ ಹಾಗೂ ರಸ್ತೆ ಮಧ್ಯದ ಡಿವೈಡರ್ ನಡುವೆಯೂ 'ತಬೆಬಿಯಾ ರೋಸಿಯಾ (ಗುಲಾಬಿ ಪೌಯಿ)' ಗಿಡಗಳನ್ನು ನೆಡಲಾಗಿದೆ. ಈಗಾಗಲೇ 6ರಿಂದ 7 ಅಡಿ ಎತ್ತರ ಇರುವ ಗಿಡಗಳು ಮುಂದಿನ ಮೂರು ವರ್ಷಗಳಲ್ಲಿ ಎತ್ತರವಾಗಿ ಬೆಳೆದು ಹೂಗಳನ್ನು ಬಿಡುವ ಮೂಲಕ ಹೈದರಾಲಿ ರಸ್ತೆಯ ಅಂದವನ್ನು ಇವು ಮತ್ತಷ್ಟು ಹೆಚ್ಚಿಸಲಿದ್ದು, ಪಾದಚಾರಿಗಳು ಮತ್ತು ಪ್ರಾಣಿಗಳಿಂದ ಹಾನಿಯಾಗದಂತೆ ಮೈಸೂರಿನ ಪರಿಸರ ಪ್ರೇಮಿಸಂಸ್ಥೆ ರಘುಲಾಲ್ ಅಂಡ್ ಕಂಪನಿಯಿಂದ ಟ್ರಿ ಗಾರ್ಡ್‌ಗಳನ್ನು ಅಳವಡಿಸಲಾಗಿದೆ ಎಂದು ಪಾಲಿಕೆ ತೋಟಗಾರಿಕೆ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿ.ಕೆ.ಮೋಹನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದೀರ್ಘಕಾಲ ಉಳಿಯುವುದು ಅನುಮಾನ...!

ಹೈದರಾಲಿ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಹೊಸದಾಗಿ ಗಿಡಗಳ ನೆಡಲಾಗಿದೆ. ಈ ಗಿಡಗಳ ಕಾಂಡದ ಸುತ್ತಲೂ ಕನಿಷ್ಠ 1 ಚದರ ಮೀಟರ್ (ಸುಮಾರು ಮೂರು ಅಡಿ)ನಷ್ಟು ಮಣ್ಣಿನ ಜಾಗವನ್ನು ಬಿಡಬೇಕಿತ್ತು. ಆದರೆ ಗಿಡದ ಸುತ್ತಲೂ ಕಾಂಕ್ರೀಟ್ ಟೈಲ್ಸ್‌ಗಳನ್ನು ಹಾಕಲಾಗಿದೆ. ಇದರಿಂದ ಗಿಡಗಳ ಬೆಳವಣಿಗೆಯಲ್ಲಿ ಕುಂಠಿತವಾಗುವುದರ ಜೊತೆಗೆ ದೀರ್ಘಕಾಲದವರೆಗೆ ಮರಗಳು ಉಳಿಯುವುದು ಕಷ್ಟ. **– ಪರಿಸರ ಪ್ರೇಮಿಗಳು**

ರಸ್ತೆ ಅಂದಕ್ಕೆ ಆದ್ಯತೆ ನೀಡಿ ಗಿಡಗಳ ಆಯ್ಕೆ

ಬೇಸಿಗೆಯಾಗಿರುವುದರಿಂದ ಪಾಲಿಕೆಯಿಂದಲೇ ಪ್ರತಿನಿತ್ಯ ನೀರು ಒದಗಿಸಲಾಗುವುದು. ಇದಕ್ಕಾಗಿಯೇ ಪ್ರತ್ಯೇಕ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ. ಹಾಗೆಯೇ ರಸ್ತೆ ಡಿವೈಡರ್‌ನಲ್ಲಿ ವಿದ್ಯುತ್ ಲೈನ್ ಕಾಮಗಾರಿ ಮುಗಿದ ಬಳಿಕ 'ಬೋಗನ್ ವಿಲ್ಲಾ (Bougainvillea)' ಗಿಡಗಳನ್ನು ನೆಟ್ಟು ರಸ್ತೆ ಸೌಂದರ್ಯ ಹೆಚ್ಚಿಸಲಾಗುವುದು ಎಂದು ಮಾಹಿತಿ ನೀಡಿದರು.

ಹೈದರಾಲಿ ರಸ್ತೆಯಲ್ಲಿ 15 ಅಡಿ(5 ಮೀಟರ್) ಅಂತರಕ್ಕೆ ಗಿಡಗಳನ್ನು ನೆಟ್ಟಿದ್ದು, ಹಾಗಾಗಿ ಬೆಳವಣಿಗೆಯಲ್ಲಿ ಕುಂಠಿತವಾಗುವುದಿಲ್ಲ. ಅಲ್ಲದೆ 'ತಬೆಬಿಯಾ ರೋಸಿಯಾ' ಗಿಡವು ಸುಮಾರು 20 ಅಡಿ ಎತ್ತರ ಬೆಳೆಯಲಿದ್ದು, ಆಳವಾಗಿ ಬೇರು ಬಿಡಲಿದೆ. ಇದರಿಂದ ನೂರಾರು ವರ್ಷಗಳ ಕಾಲ ಈ ಮರಗಳು ಬಾಳಲಿವೆ ಎಂದರು.

ಮೈಸೂರಲ್ಲೊಂದು ಪಿಂಕ್ ರಸ್ತೆ ಮುಂದಿನ ವರ್ಷಗಳಲ್ಲಿ ಹೈದರಾಲಿ ರಸ್ತೆಯಲ್ಲಿ ಪಿಂಕ್ ರಸ್ತೆ ಸೃಷ್ಟಿಯಾಗಲಿದೆ. ಎಸ್‌ಪಿ ಕಚೇರಿ ವೃತ್ತದಿಂದ ನೆಕ್ಸಸ್ ಮಾಲ್‌ವರೆಗೆ ಇಡೀ ರಸ್ತೆ ಬೇಸಿಗೆ ಸಂದರ್ಭದಲ್ಲಿ ಪಿಂಕ್‌ಮಯವಾಗಲಿದೆ. ರಸ್ತೆಯ ಡಿವೈಡರ್‌ನಲ್ಲಿ 'ಬೋಗನ್ ವಿಲಾ' ಗಿಡಗಳ ಹೂಗಳು, 'ತಬೆಬಿಯಾ ರೋಸಿಯಾ' ಮರಗಳ ಪಿಂಕ್ ಬಣ್ಣದ ಹೂಗಳು ಕಣ್ಮನ ಸೆಳೆಯಲಿವೆ ಎಂದರು.

ಮೈಸೂರು ನಗರ ಯುವ ಸಮಿತಿಯಿಂದ ಬಸವ ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನ



ಮೈಸೂರಿನ ಅನಾಥಾಲಯ ವಿದ್ಯಾರ್ಥಿನಿಲಯದಲ್ಲಿ ಬಸವ ಜಯಂತಿ–2026ರ ಅಂಗವಾಗಿ ವಿಶೇಷ ಆಹ್ವಾನ ಕಾರ್ಯಕ್ರಮ ನಡೆಯಿತು.

ಮೈಸೂರು, ಏ. 8– ಮೈಸೂರು ನಗರ ಯುವ ಸಮಿತಿ ವತಿಯಿಂದ ರಾಮಾನುಜ ರಸ್ತೆಯಲ್ಲಿರುವ ಅನಾಥಾಲಯ ವಿದ್ಯಾರ್ಥಿನಿಲಯದಲ್ಲಿ ಬಸವ ಜಯಂತಿ–2026ರ ಅಂಗವಾಗಿ ವಿಶೇಷ ಆಹ್ವಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವು ಸಮಾಜಮುಖಿ ಚಿಂತನೆ ಮತ್ತು ಬಸವ ತತ್ವಗಳ ಪ್ರಸಾರದ ಉದ್ದೇಶದಿಂದ ಅರ್ಥಪೂರ್ಣವಾಗಿ ನಡೆಯಿತು.

ಕಾರ್ಯಕ್ರಮ ಯುವ ಸಮಿತಿ ಅಧ್ಯಕ್ಷ ಮಲ್ಲೇಶ್ ನೇತೃತ್ವದಲ್ಲಿ ನೆರವೇರಿತು. ಈ ವೇಳೆ ಸಮಾಜದ ಮುಖಂಡರಾದ ಮಾದೇಶ್, ಉಪಾಧ್ಯಕ್ಷ ಶಿವಶಂಕರ್, ಪ್ರಧಾನ ಕಾರ್ಯದರ್ಶಿಗಳಾದ ಆಕಾಶ್ ಮೂರ್ತಿ, ದೀಕ್ಷಿತ್, ರುದ್ರೇಶ್ ಹಾಗೂ ನಂದನ್ ಸೇರಿದಂತೆ ಮತ್ತಿತರರಿದ್ದರು.

ಕಾರ್ಯಕ್ರಮದಲ್ಲಿ ಸುಮಾರು 200ರಿಂದ 250 ಜನ ಅನಾಥ ವಿದ್ಯಾರ್ಥಿಗಳಿಗೆ ಬಸವ ಜಯಂತಿ–2026ರ ಆಹ್ವಾನ ಪತ್ರಿಕೆಯನ್ನು ವಿತರಿಸಲಾಯಿತು. ವಿದ್ಯಾರ್ಥಿಗಳಲ್ಲಿ ಬಸವಣ್ಣನವರ ಆದರ್ಶಗಳು, ಸಮಾನತೆ, ಸೇವಾ ಮನೋಭಾವ ಮತ್ತು ನೈತಿಕ ಮೌಲ್ಯಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಸಮಿತಿ ಅಧ್ಯಕ್ಷ ಮಲ್ಲೇಶ್ ಮಾತನಾಡಿ, ಬಸವ ಜಯಂತಿ ಕೇವಲ ಹಬ್ಬವಲ್ಲ. ಅದು ಸಮಾಜದಲ್ಲಿ ಸಮಾನತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಚಳುವಳಿ ಎಂದು ತಿಳಿಸಿದರು. ಯುವ ಸಮಿತಿ ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಎಲ್ಲರ ಸಹಕಾರ ಅಗತ್ಯವೆಂದು ಅವರು ಮನವಿ ಮಾಡಿದರು.

ಚಾಂಪಿಯನ್ ಪಟ್ಟ



ಹೆಬ್ಯಾ ಗ್ರಾಮದಲ್ಲಿ ನಡೆದ ಹೆಬ್ಯಾ ಪ್ರೀಮಿಯರ್ ಲೀಗ್–3ರಲ್ಲಿ ರಾಯಲ್ ಕಿಂಗ್ಸ್, ಬ್ರೈಟ್ ಬ್ಲಾಸ್ಟರ್ಸ್ ವಿರುದ್ಧ 15ರನ್‌ಗಳ ಗೆಲುವು ದಾಖಲಿಸುವ ಮೂಲಕ ಚಾಂಪಿಯನ್ ಪಟ್ಟ ಅಲಂಕರಿಸಿತು. ಮಾಜಿ ಸಂಸದ ಧ್ರುವನಾರಾಯಣ್ ಸ್ಮರಣಾರ್ಥ ನಡೆದ ಪಂದ್ಯಾವಳಿಯಲ್ಲಿ ಹೆಚ್.ಎಸ್.ಶಶಾಂಕ್ ನೇತೃತ್ವದ ತಂಡ ಅಜೇಯರಾಗಿ ಗೆದ್ದು ಬೀಗಿತು. ಗೆದ್ದ ತಂಡಕ್ಕೆ ಗ್ರಾ.ಪಂ ಮಾಜಿ ಉಪಾಧ್ಯಕ್ಷ ರಾಜಣ್ಣ ಟ್ರೋಫಿ ಪ್ರದಾನ ಮಾಡಿದರು. ಗ್ರಾಮದ ಯಜಮಾನರಾದ ರಾಮಯ್ಯ, ಕಾಂಗ್ರೆಸ್ ಯುವ ಮುಖಂಡ ರಮೇಶ್, ಬಸವಣ್ಣ ನಿಜಗುಣ, ರಾಜಶೇಖರ, ಬಸವಣ್ಣ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆಗೆ ಖಂಡನೆ



ಹೇಮಾ ನಂದೀಶ್

ಮೈಸೂರು, ಏ. 8–ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಇತ್ತೀಚೆಗೆ ಚುನಾವಣಾ ಭಾಷಣವೊಂದರಲ್ಲಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅನ್ನು ವಿಷಪೂರಿತ ಹಾವಿಗೆ ಹೋಲಿಸಿ ಅದನ್ನು ಸಾಯಿಸುವುದು ಪ್ರತಿಯೋರ್ವರ ಧರ್ಮವಾಗಿದೆ ಎಂದು ಹೇಳಿರುವುದನ್ನು ಬಿಜೆಪಿ ಮುಖಂಡರಾದ ಡಾ. ಹೇಮಾ ನಂದೀಶ್ ಖಂಡಿಸಿದ್ದಾರೆ.

ರಾಜಕಾರಣವನ್ನೇ ತನ್ನ ಕಸುಬಾಗಿಸಿಕೊಂಡಿರುವ ಹಿರಿಯ ಕಾಂಗ್ರೆಸಿಗ ಖರ್ಗೆ ಅವರು ನಕಲಿಗಾಂಧಿಗಳ ಕುಟುಂಬವನ್ನು ಮೆಚ್ಚಿಸುವುದಕ್ಕಾಗಿ ಅಲ್ಪಸಂಖ್ಯಾತರೇ ಸೇರಿರುವ ಸಮಾವೇಶವನ್ನುದ್ದೇಶಿಸಿ ಮಾತನಾಡಿ, ಮುಸಲ್ಮಾನರು ನಮಾಜ್ ಮಾಡುವಾಗ ಅಲ್ಲಿ ಹಾವೊಂದು ಪ್ರತ್ಯಕ್ಷವಾದರೆ, ನಮಾಜನ್ನು ನಿಲ್ಲಿಸಿ ಹಾವನ್ನು ಕೊಲ್ಲಬೇಕೆಂದು ಕುರಾನ್ ಹೇಳಿದೆ. ಅದೇ ರೀತಿ ಈ ಬಿಜೆಪಿ ಮತ್ತು ಆರ್‌ಎಸ್‌ಎಸ್ ಕೂಡ ಈ ಹಾವಿನ ರೀತಿಯಲ್ಲಿದ್ದು, ಅದನ್ನು ಸಾಯಿ ಸುವುದು ನಮ್ಮ ಆದ್ಯ ಕರ್ತವ್ಯ ವಾಗಬೇಕು ಎಂದು ಪ್ರಚೋದನಕಾರಿ ಭಾಷಣ ಮಾಡುವ ಮೂಲಕ ಖರ್ಗೆಯವರ ಮೆದುಳಿನ ಮಾನಸಿಕತೆ ಎಂತಹ ದ್ವೇಷಪೂರಿತವಾಗಿದೆ ಎಂಬುದನ್ನು ದೇಶದ ಜನತೆ ಅರ್ಥ ಮಾಡಿಕೊಳ್ಳಬೇಕಾಗಿದೆ. ಖರ್ಗೆಯವರ ಈ ಪ್ರಚೋದನಾಕಾರಿ ಭಾಷಣ ಈಗಾಗಲೇ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ವೈರಲ್ ಆಗಿದ್ದು, ಖರ್ಗೆಯವರ ಈ ಹೇಳಿಕೆ ಭಾರತದ ಜಾತ್ಯಾತೀತ ನಿಲುವಿಗೆ ಮತ್ತು ಸಂವಿಧಾನ ವಿರೋಧವು ಆಗಿದೆ. ಪ್ರಚೋದನಾಕಾರಿ ಹೇಳಿಕೆಯ ಹಿನ್ನಲೆಯಲ್ಲಿ ಅವರ ವಿರುದ್ಧ ಸುಮೊಟೋ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಲಯನ್ಸ್ ಅಂತರ ರಾಷ್ಟ್ರೀಯ ಸಂಸ್ಥೆಯ ಎರಡನೇ ಉಪ ರಾಜ್ಯಪಾಲರಾಗಿ ಲಯನ್ ಸಿದ್ದೇಗೌಡ ಆಯ್ಕೆ



ಲಯನ್ಸ್ ಅಂತರರಾಷ್ಟ್ರೀಯ ಸಂಸ್ಥೆಯ ಜಿಲ್ಲಾ 317ಜಿ ವ್ಯಾಪ್ತಿಯಲ್ಲಿ ನಡೆದ ಇತ್ತೀಚಿನ ಜಿಲ್ಲಾ ಚುನಾವಣೆಯಲ್ಲಿ ಎಂ.ಸಿದ್ದೇಗೌಡ ಅವರು ಎರಡನೇ ಉಪರಾಜ್ಯಪಾಲರಾಗಿ 2026–27ನೇ ಸಾಲಿಗೆ ಆಯ್ಕೆಯಾದರು.

ಮೈಸೂರು, ಏ. 8– ಲಯನ್ಸ್ ಅಂತರ ರಾಷ್ಟ್ರೀಯ ಸಂಸ್ಥೆಯ ಜಿಲ್ಲಾ 317ಜಿ ವ್ಯಾಪ್ತಿಯಲ್ಲಿ ನಡೆದ ಇತ್ತೀಚಿನ ಜಿಲ್ಲಾ ಚುನಾವಣೆಯಲ್ಲಿ ಸೇವಾ ಮನೋಭಾವ, ಸಂಘಟನಾ ಕೌಶಲ್ಯ ಮತ್ತು ದೀರ್ಘ ಕಾಲದ ಅನುಭವದಿಂದ ಪ್ರಸಿದ್ಧರಾಗಿರುವ ಎಂ.ಸಿದ್ದೇಗೌಡ ಅವರು ಎರಡನೇ ಉಪರಾಜ್ಯಪಾಲರಾಗಿ 2026–27 ನೇ ಸಾಲಿಗೆ ಆಯ್ಕೆಯಾಗಿದ್ದಾರೆ. ಈ ಸಾಧನೆ ಮೂಲಕ ಅವರು ಲಯನ್ಸ್ ಸಂಸ್ಥೆಯ ಜಿಲ್ಲಾ ಮಟ್ಟದ ಅತ್ಯಂತ ಪ್ರಮುಖ ನಾಯಕತ್ವ ಹುದ್ದೆಯನ್ನು ಅಲಂಕರಿಸಿ, ಹೊಸ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಎಂ.ಸಿದ್ದೇಗೌಡ ಅವರು ಹಲವು ವರ್ಷಗಳಿಂದ ಲಯನ್ಸ್ ಸಂಸ್ಥೆಯೊಂದಿಗೆ ನಿಕಟ ಸಂಪರ್ಕ ಹೊಂದಿ, ವಿವಿಧ ಹುದ್ದೆಗಳಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕ್ಲಬ್ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ ಅನುಭವ ಅವರಿಗೆ ಇದೆ. ವಿಶೇಷವಾಗಿ ಬಡಜನರಿಗೆ ವೈದ್ಯಕೀಯ ನೆರವು, ವಿದ್ಯಾರ್ಥಿಗಳಿಗೆ ಶಿಕ್ಷಣ ಸಹಾಯ, ಪರಿಸರ ಸಂರಕ್ಷಣೆ, ರಕ್ತದಾನ ಶಿಬಿರಗಳು ಮತ್ತು ಸಮಾಜಮುಖಿ ಚಟುವಟಿಕೆಗಳಲ್ಲಿ ಅವರು ತೊಡಗಿಸಿಕೊಂಡು ಗಮನಾರ್ಹ ಸಾಧನೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಲಯನ್ಸ್ ಸಂಸ್ಥೆಯ ನಾಯಕರಾದ ಮಾಜಿ ಜಿಲ್ಲಾ ರಾಜ್ಯಪಾಲರಾದ ಡಾ.ಜಿ.ಎ.ರಮೇಶ್, ಲಯನ್ ಎಮ್.ಎನ್.ಜೈಪ್ರಕಾಶ್, ಜಿಲ್ಲಾ ಸಂಪುಟ ಕಾರ್ಯದರ್ಶಿ ಟಿ.ಹೆಚ್ ವೆಂಕಟೇಶ್, ನಂದೀಶ್ ,ಕಾರ್ಯಪ್ಪ, ಜಯಕುಮಾರ್, ಸಿ.ಆರ್.ದಿನೇಶ್ ಇತರರು ಎಂ.ಸಿದ್ದೇಗೌಡ ಅವರನ್ನೂ ಅಭಿನಂದಿಸಿ, ಅವರ ಮುಂದಿನ ಸೇವಾ ಅವಧಿ ಯಶಸ್ವಿಯಾಗಲೆಂದು ಹಾರೈಸಿದ್ದಾರೆ. ಅವರ ನೇತೃತ್ವದಲ್ಲಿ ಲಯನ್ಸ್ ಸಂಸ್ಥೆಯ ಸೇವಾ ಚಟುವಟಿಕೆಗಳು ಮತ್ತಷ್ಟು ವಿಸ್ತಾರವಾಗಿ ಸಮಾಜದ ವಿವಿಧ ವರ್ಗಗಳಿಗೆ ಪ್ರಯೋಜನವಾಗಲಿ ಎಂಬ ಆಶಯ ವ್ಯಕ್ತಪಡಿಸಿದರು.

ಏ.15ರಿಂದ ಉಚಿತ ನಾಟಕ ತರಬೇತಿ ಕಾರ್ಯಾಗಾರ

ಮೈಸೂರು: ಹರಿ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸೃಜನಾತ್ಮಕತೆಯನ್ನು ಉತ್ತೇಜಿಸಲು ಮತ್ತು ಅವರ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ ಉದ್ದೇಶದಿಂದ ಉಚಿತ ನಾಟಕ ತರಬೇತಿ ಕಾರ್ಯಾಗಾರವನ್ನು ಏ.15ರಿಂದ 15 ದಿನಗಳ ಕಾಲ ಆಯೋಜಿಸಲಾಗಿದೆ. ಈ ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಕಲಾತ್ಮಕ ಅಭಿವ್ಯಕ್ತಿ, ಆತ್ಮವಿಶ್ವಾಸ ಮತ್ತು ತಂಡಭಾವ ಬೆಳೆಸುವ ಮಹತ್ವದ ವೇದಿಕೆಯಾಗಲಿದೆ.

ಕಾರ್ಯಾಗಾರವನ್ನು ಅನುಭವಜ್ಞ ನಾಟಕ ತರಬೇತುದಾರರ ಮಾರ್ಗದರ್ಶನದಲ್ಲಿ ನಡೆಸಲಾಗುವುದು. ಮೊದಲ ದಿನದಲ್ಲಿ ನಾಟಕದ ಮೂಲಭೂತ ಅಂಶಗಳು, ವೇದಿಕೆ ವರ್ತನೆ, ಸಂಭಾಷಣೆ ಉಚ್ಚಾರಣೆ ಮತ್ತು ದೇಹಭಾಷೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲಾಗುವುದು. ವಿವಿಧ ಆಟಗಳ ಮತ್ತು ಚಟುವಟಿಕೆಗಳ ಮೂಲಕ ವಿದ್ಯಾರ್ಥಿಗಳಲ್ಲಿ ಆಸಕ್ತಿ ಮೂಡಿಸಲಾಗುವುದು. ಮುಂದಿನ ದಿನಗಳಲ್ಲಿ ಸಂಭಾಷಣೆ ಅಭ್ಯಾಸ, ಪಾತ್ರಾಭಿನಯ, ಭಾವಾಭಿನಯ, ಮತ್ತು ಧ್ವನಿಯ ನಿಯಂತ್ರಣದ ತರಬೇತಿಗಳನ್ನು ನೀಡಲಾಗುವುದು. ವಿದ್ಯಾರ್ಥಿಗಳು ಗುಂಪುಗಳಾಗಿ ವಿಭಜನೆಗೊಂಡು ಸಣ್ಣ ನಾಟಕಗಳನ್ನು ಸಿದ್ಧಪಡಿಸುವಂತ ಚಟುವಟಿಕೆಗಳು ನಡೆಯಲಿವೆ.

ಕಾರ್ಯಾಗಾರದ ಕೊನೆಯ ದಿನದಲ್ಲಿ ವಿದ್ಯಾರ್ಥಿಗಳು ತಮ್ಮ ಕಲಿತ ಕೌಶಲ್ಯಗಳನ್ನು ಪ್ರದರ್ಶಿಸುವ ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗುವುದು. ಆಸಕ್ತ ವಿದ್ಯಾರ್ಥಿಗಳು(ತರಗತಿ 6ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಾತ್ರ) ಏ.12ರ ಒಳಗಾಗಿ ಹೆಸರನ್ನು ನೊಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9483805156 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅಭಿನಂದನೆ...



2025ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಪಡೆದ ಮೈಸೂರಿನ ವಿಜಯನಗರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಸುರೇಶ್ ಕುಮಾರ್ ಅವರನ್ನು ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಯುವ ಮುಖಂಡ ನಿತಿನ್ ಪುಟ್ಟಸ್ವಾಮಿ, ಕೆ.ವಿ.ಸತೀಶ್, ಕಮಲಮ್ಮ ಅಭಿನಂದಿಸಿದರು.

ರೋಸ್ಟರ್ ಬಿಂದುವಿನಲ್ಲಿ ಪೌರಕಾರ್ಮಿಕ ವರ್ಗಕ್ಕೆ ಮೊದಲ ಅವಕಾಶ ನೀಡಬೇಕಿತ್ತು

● ರಾಜ್ಯ ಮಾಹಿತಿ ಆಯೋಗದ ಆಯುಕ್ತ ಡಾ.ಹರೀಶ್‌ಕುಮಾರ್ ಪ್ರತಿಪಾದನೆ ● ರೋಸ್ಟರ್ ಪದ್ಧತಿ ಜಾರಿಗೆ ದಲಿತ ಚಳವಳಿ ಮೂಲ ಕಾರಣ

ಮೈಸೂರು, ಏ.8(ಎಸ್‌ಪಿಎನ್)– ಹೊಲೆಯ–ಮಾದಿಗ ಸಮುದಾಯಗಳು ಒಳ ಮೀಸಲಾತಿ ವಿಚಾರವಾಗಿ ಮಾನವೀಯ ನೆಲೆಗಟ್ಟಿನಲ್ಲಿ ಪ್ರವರ್ಗ 'ಎ' ಕಲಂನಲ್ಲಿ ಪೌರಕಾರ್ಮಿಕರನ್ನು ಸೇರಿಸಿ ರೋಸ್ಟರ್ ಬಿಂದುವಿನಲ್ಲಿ ಮೊದಲ ಸ್ಥಾನ ಕೊಟ್ಟಿದ್ದರೆ ಒಳ ಮೀಸಲಾತಿ ಹೋರಾಟಕ್ಕೆ ನೈಜ ಅರ್ಥ ಬರುತ್ತಿತ್ತು ಎಂದು ಕರ್ನಾಟಕ ರಾಜ್ಯ ಮಾಹಿತಿ ಹಕ್ಕುಗಳ ಆಯೋಗದ ಆಯುಕ್ತ ಡಾ.ಹರೀಶ್ ಕುಮಾರ್ ಪ್ರತಿಪಾದಿಸಿದರು.

ಮೈಸೂರು ರಾಮಕೃಷ್ಣನಗರ ರಮಾಗೋವಿಂದ ರಂಗಮಂದಿರದಲ್ಲಿ ಪ್ರಗತಿ ಪರ ಒಕ್ಕೂಟದ ವತಿಯಿಂದ ಏರ್ಪಡಿಸಿದ್ದ 'ಒಳ ಮೀಸಲಾತಿ ಬಿಕ್ಕಟ್ಟು ಮತ್ತು ಪರಿಹಾರಗಳು' ವಿಷಯ ಕುರಿತು 'ಒಂದಾಗೋಣ ಕೈಜೋಡಿಸಿ' ಶೀರ್ಷಿಕೆಯಡಿ ಪರಸ್ಪರ ಮಾತುಕತೆಗೆ ಏಕತಾರಿ ವಾದನ ನುಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಒಳ ಮೀಸಲಾತಿ ಹೋರಾಟದಲ್ಲಿ ದಲಿತರಲ್ಲೇ ಒಂದು ಸಮುದಾಯ ಎಲ್ಲಾ ಉದ್ಯೋಗಗಳನ್ನು ಪಡೆದುಕೊಂಡಿದೆ ಎಂಬ ಅಪವಾದವಿದೆ. ಆದರೆ, ಪೌರಕಾರ್ಮಿಕರು ಮಲ ಹೊರುವ ಸರ್ಕಾರಿ ಹುದ್ದೆಯಿಂದ ಅಭಿವೃದ್ಧಿ ಹೊಂದಿದ್ದಾರೆ ಎಂದು ಮಾನದಂಡ ನಿರ್ಧರಿಸಲಾಗದು. ಪರಿಶಿಷ್ಟ ಜಾತಿ ಎಂಬುದು ಜಾತಿಯ ಸೂಚಕವಲ್ಲ, ಅದು ಎಲ್ಲಾ ಪಂಗಡಗಳನ್ನು ಒಟ್ಟಿಗೆ ಸೇರಿಸುವ ಒಂದು ಪಟ್ಟಿ ಅಷ್ಟೇ. ಹಾಗಾಗಿ ಹೊಲೆಯ–ಮಾದಿಗರಿಗಿಂತ ಸಾಮಾಜಿಕವಾಗಿ ನಿಕೃಷ್ಟವಾಗಿ ಬದುಕುತ್ತಿರುವ ಪೌರಕಾರ್ಮಿಕರಿಗೆ ಪ್ರವರ್ಗ–'ಎ' ಕಲಂ ಸೇರಿಸಿ ರೋಸ್ಟರ್ ಬಿಂದುವಿನಲ್ಲಿ ಮೊದಲ ಆದ್ಯತೆ ನೀಡುವ ಕುರಿತು ಚಿಂತಿಸಬೇಕು ಎಂದು ಆಗ್ರಹಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ದಲಿತ ಸಮುದಾಯ ಶಿಕ್ಷಣದಿಂದ ವಂಚಿತರಾದ ಹಿನ್ನೆಲೆಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದರೂ ಸರ್ಕಾರಿ ಹುದ್ದೆಗಳಿಗೆ ಸೇರಲು ಅಭ್ಯರ್ಥಿಗಳಿರಲಿಲ್ಲ. ಈ ಸನ್ನಿವೇಶ 1975ರವರೆಗೂ ಮುಂದುವರೆಯಿತು. ಮುಂದೆ ದಲಿತ ಸಮುದಾಯಕ್ಕೆ ಸಂವಿಧಾನದಲ್ಲಿ ಮೀಸಲಾತಿ ಒದಗಿಸುವ ತೀರ್ಮಾನದ ಹಿನ್ನಲೆಯಲ್ಲಿ ಒಬ್ಬೊಬ್ಬರಾಗಿ ಶಿಕ್ಷಣ ಪಡೆಯಲು ಮುಂದಾದರು. ನಂತರ 1975ರಲ್ಲಿ ಸ್ನಾತಕೋತ್ತರ ಪದವಿ ಪಡೆದವರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಯಿತು. ಆಗ ದಲಿತ ಸಮುದಾಯ ಒಟ್ಟಾಗಿ ಸೇರಿ ಚಳವಳಿ ರೂಪಿಸಿದ ಹಿನ್ನಲೆಯಲ್ಲಿ ರೋಸ್ಟರ್ ಪದ್ಧತಿ ಜಾರಿಗೆ ತರಲಾಯಿತು ಎಂದು ರೋಸ್ಟರ್ ಬಿಂದು ಅಳವಡಿಕೆ ಕುರಿತು ಎಳೆಎಳೆಯಾಗಿ ಮಾಹಿತಿ ನೀಡಿದರು.

ದಲಿತ ಸಮುದಾಯದ ಸಮಗ್ರ ದೃಷ್ಟಿಕೋನದಿಂದ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಒಳ ಮೀಸಲಾತಿ ಅನ್ವಯಿಸಬೇಕಿತ್ತು. ಆದರೆ, ರಾಜಕೀಯ ವಿಷಯವಾಗಿ ಚರ್ಚೆಯಾಗಿರುವುದು ದುರಂತವೇ ಸರಿ. ಒಳ ಮೀಸಲಾತಿ ವಿಚಾರ ರಾಜಕೀಯ ಲಾಭ–ನಷ್ಟದ ವಿಚಾರವಾಗಿ ಚರ್ಚೆಯಾಗುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ. ಆದರೆ, ಆರ್ಥಿಕವಾಗಿ ಹಿಂದುಳಿದವರಿಗೆ (ಇಡಬ್ಲ್ಯುಎಸ್‌ಗೆ) ಶೇ.10 ರಷ್ಟು ಮೀಸಲಾತಿ ಒದಗಿಸುವಾಗ ಯಾರೊಬ್ಬರು ಈ ಕುರಿತು ಬಹಿರಂಗವಾಗಿ ಮಾತನಾಡಲಿಲ್ಲ. ಈಗ ಒಳ ಮೀಸಲಾತಿ ವಿಚಾರ ಬೇಕಾಬಿಟ್ಟಿಯಾಗಿ ಮಾತನಾಡುತ್ತಿರುವುದು ಬೇಸರದ ಸಂಗತಿ ಎಂದರು.

ದೇಶದಲ್ಲೇ ದಲಿತ ಹಕ್ಕುಗಳ ಕುರಿತು ಖಾತರಿಗೊಳಿಸುವ ಕಾನೂನು ರಕ್ಷಣೆಗೆ ಪರಿಶಿಷ್ಟ ಜಾತಿ ಜನಪ್ರತಿನಿಧಿಗಳು, ಸಂಸದರು, ಒಕ್ಕೊರಲಿನಿಂದ ಸಂಸತ್‌ನಲ್ಲಿ ಧ್ವನಿಗೂಡಿಸಬೇಕಿತ್ತು. ಸರ್ವಪಕ್ಷ ಸಭೆ ಕರೆದು ಒಳ ಮೀಸಲಾತಿ ವಿಚಾರವನ್ನು ಸಂವಿಧಾನದ ಪರಿಚ್ಛೇದ 9ಕ್ಕೆ ಸೇರಿಸುವ ಕುರಿತು ಸಂಸತ್ತಿನಲ್ಲಿ ಹಕ್ಕೊತ್ತಾಯ ಮಾಡಬೇಕಿತ್ತು. ಆ ಕೆಲಸಕ್ಕೆ ಯಾವೊಬ್ಬ ರಾಜಕಾರಣಿಯೂ ಧೈರ್ಯ ತೋರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪ್ರಸ್ತುತ ದಲಿತ ಜನಪ್ರತಿನಿಧಿಗಳು ಇಚ್ಛಾಶಕ್ತಿಯ ಕೊರತೆಯಿಂದಾಗಿ ಸಮುದಾಯದ ಹಕ್ಕುಗಳು ಮೊಟಕುಗೊಳ್ಳುತ್ತಿವೆ. ಸಾಂವಿಧಾನಿಕ ಹಕ್ಕುಗಳನ್ನು ಎದೆಗಾರಿಕೆಯಿಂದ ನೇರವಾಗಿ ಕೇಳುವ ಪ್ರವೃತ್ತಿ ದಸಂಸಗೆ ಮಾತ್ರ ಇದೆ. ಈ ಪ್ರವೃತ್ತಿಯನ್ನು ದಲಿತ ಜನಪ್ರತಿನಿಧಿಗಳಿಗೆ ಕಲಿಸಬೇಕಿದೆ. ಮೀಸಲಾತಿ ಹೊರತುಪಡಿಸಿ, ಬೇರೆ ಯೋಜನೆಗಳು ದಲಿತರನ್ನು ಮೇಲೆತ್ತುವ ಕೆಲಸ ಮಾಡಿಲ್ಲ ಎಂದು ತಿಳಿಸಿದರು.

ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ವರದಿಯನ್ನು ಯಥಾವತ್ತಾಗಿ ಅನುಷ್ಠಾನಗೊಳ್ಳುವುದಿಲ್ಲ. ರಾಜಕೀಯ ಮತ್ತು ಸಮುದಾಯದ ಒತ್ತಡಕ್ಕೆ ಮಣಿದು ಅನುಷ್ಠಾನಗೊಳಿಸಲಾಗುತ್ತಿದೆ. ಶೇ.17ರಷ್ಟು ಮೀಸಲಾತಿ ಹೆಚ್ಚಳಕ್ಕೆ ಸುಪ್ರೀಂಕೋರ್ಟ್ ಅನುಮತಿ ನೀಡಿದರೂ ಬೇರೆ ಸಮುದಾಯಗಳ ನೇಮಕಾತಿ ಆಗುವ ವೇಳೆ ಆಗುತ್ತಿರುವ ತೊಂದರೆಗಳನ್ನು ಬೊಟ್ಟು ಮಾಡುತ್ತಿದ್ದಾರೆ. ಅಂತೆಯೇ ದೇಶದ ಉಳಿದ ರಾಜ್ಯಗಳಲ್ಲಿ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಕಡಿಮೆ ಜಾತಿಗಳಿವೆ. ಆದರೆ ಕರ್ನಾಟಕದಲ್ಲಿ 101 ಜಾತಿಗಳಿವೆ ಎಂದು ತಿಳಿಸಿದರು. ಹಿರಿಯ ಸಾಹಿತಿ ದು.ಸರಸ್ವತಿ ಅಧ್ಯಕ್ಷತೆ ವಹಿಸಿದ್ದರು. ಚಿಂತಕ ಚಂದ್ರಶೇಖರ ಹುಣಸೆ, ವೇದಿಕೆಯಲ್ಲಿದ್ದರು. ಪ್ರಗತಿಪರ ಚಿಂತಕ ಧನಂಜಯ ಎಲಿಯೂರು ನಿರೂಪಿಸಿದರು. ಈ ಸಂಧರ್ಭ ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್, ದಲಿತ ಮುಖಂಡ ಹರಿಹರ ಆನಂದ ಸ್ವಾಮಿ, ಶಂಭುಲಿಂಗಸ್ವಾಮಿ, ಸವಿತಾ ಪ.ಮಲ್ಲೇಶ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಜವರಪ್ಪ, ಉಗ್ರ ನರಸಿಂಹೇಗೌಡ, ದಲಿತ ಸಂಘರ್ಷ ಸಮಿತಿಯ ಬೆಟ್ಟಯ್ಯ ಕೋಟೆ, ನೆಲೆ ಹಿನ್ನೆಲೆ ಗೋಪಾಲ್, ಗೊಳೂರು ನಾರಾಯಣ ಸ್ವಾಮಿ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಸೇರಿದಂತೆ ಇತರೆ ಮುಖಂಡರು ಉಪಸ್ಥಿತರಿದ್ದರು.




'ಒಳ ಮೀಸಲಾತಿ ಬಿಕ್ಕಟ್ಟು ಮತ್ತು ಪರಿಹಾರಗಳು' ವಿಷಯ ಕುರಿತು 'ಒಂದಾಗೋಣ ಕೈಜೋಡಿಸಿ' ಶೀರ್ಷಿಕೆಯಡಿ ಪರಸ್ಪರ ಮಾತುಕತೆ ಕಾರ್ಯಕ್ರಮವನ್ನು ಏಕತಾರಿ ವಾದನ ನುಡಿಸುವ ಮೂಲಕ ಉದ್ಘಾಟಿಸಲಾಯಿತು.

ದಲಿತ ಪ್ರಾತಿನಿಧ್ಯದ ಪ್ರಶ್ನೆಗಳು ಸ್ವಾತಂತ್ರ್ಯ ಪೂರ್ವದಿಂದಲೂ ಇವೆ. ಸಮುದಾಯದಲ್ಲಿ ಭಿನ್ನಾಭಿಪ್ರಾಯಗಳನ್ನು ಸೌಹಾರ್ದ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಮೀಸಲಾತಿ ಪ್ರಮಾಣ ಹೆಚ್ಚಳವಾಗದಿರುವುದರಿಂದ ಹೆಚ್ಚು ಸಮಸ್ಯೆಗಳು ಉದ್ಭವಿಸುತ್ತಿವೆ. ಇಂದಿನ ಜನಸಂಖ್ಯೆಗೆ ಅನುಗುಣವಾಗಿ ಶೇ.56ರಷ್ಟಿರುವ ಮೀಸಲಾತಿ ಪ್ರಮಾಣವನ್ನು ಶೇ.65ಕ್ಕೆ ಹೆಚ್ಚಳ ಮಾಡುವಂತೆ ಹೋರಾಟಗಳು ನಡೆಯಬೇಕು. ಅಲ್ಲದೆ, ಒಳ ಮೀಸಲಾತಿ ಹೋರಾಟ ಸಂದರ್ಭದಲ್ಲಿ ಮುಖಂಡರು ಜಸ್ಟೀಸ್ ನಾಗಮೋಹನದಾಸ ಅವರನ್ನು ಕೆಟ್ಟ ಪದಗಳಿಂದ ನಿಂದಿಸುತ್ತಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ. ಜನಗಣತಿ ದತ್ತಾಂಶ ಆಧರಿಸಿ ಯಾವ ಯಾವ ಜಾತಿಗೆ ಎಷ್ಟು ಮೀಸಲಾತಿ ಪ್ರಮಾಣ ಹೆಚ್ಚಳವಾಗುತ್ತದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಈ ಜಗಳ ಹೀಗೆ ಮುಂದುವರೆದರೆ ಭಾರತವನ್ನು ಒಡೆಯುವಂತಹ ಸನ್ನಿವೇಶ ಉದ್ಭವವಾಗುತ್ತದೆ. **–ಇಂದಿರಾ ಕೃಷ್ಣಪ್ಪ, ಸಾಮಾಜಿಕ ಹೋರಾಟಗಾರ್ತಿ**

ದಲಿತ ಸಮುದಾಯದ ಹಕ್ಕುಗಳ ರಕ್ಷಣೆಗೆ ಕಾಳಜಿ ವಹಿಸಿದ್ದು, ದಲಿತ ಚಳವಳಿ. ಇದರ ಎರಡು ಕಣ್ಣುಗಳಾಗಿದ್ದ ಹೊಲೆಯ–ಮಾದಿಗ ಸಮುದಾಯಗಳು ಒಳ ಮೀಸಲಾತಿ ವಿಚಾರದಲ್ಲಿ ಕಳ್ಳು– ಬಳ್ಳಿ ಸಂಬಂಧವನ್ನೇ ಕಳೆದುಕೊಳ್ಳುತ್ತಿವೆ. ಈ ಸಂಬಂಧ ಕಾಪಾಡಿಕೊಳ್ಳಬೇಕು. ಇಲ್ಲವಾದರೆ, ಮುಂದಿನ ದಿನಗಳಲ್ಲಿ ನಾವು ಅಪರಾಧಿಗಳ ಸ್ಥಾನದಲ್ಲಿ ನಿಲ್ಲಬೇಕಾದೀತು. ಈ ವಿಚಾರಕ್ಕೆ ಎರಡು ಸಮುದಾಯಗಳ ಮನಸ್ಸು ಘಾಸಿಗೊಂಡರೆ ನಾವು ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. **– ಡಾ.ಮ.ಪು.ಪೂರ್ಣಾನಂದ.**

ಮೈಸೂರು ಮಿತ್ರ

ಮಹಿಳೆಯರ ಸಬಲೀಕರಣಕ್ಕೆ ಸರ್ಕಾರ ಬದ್ಧ



ಮಂಡ್ಯ, ಏ.8–ನಮ್ಮ ಸರ್ಕಾರ ಮಹಿಳೆಯರ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿದೆ. ಗ್ಯಾರಂಟಿ ಯೋಜನೆಗಳ ಮೂಲಕ 1 ಲಕ್ಷದ 30 ಸಾವಿರ ಕೋಟಿಗೂ ಹೆಚ್ಚು ಹಣವನ್ನು ವಿವಿಧ ಯೋಜನೆಗಳ ರೂಪದಲ್ಲಿ ನಾಡಿನ ಜನರಿಗೆ ನೀಡಲಾಗಿದೆ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಂಡ್ಯ ಇವರ ಸಹಭಾಗಿತ್ವದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಭವನದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಷ್ಟದ ಪರಿಸ್ಥಿತಿ ಎಲ್ಲರಿಗೂ ಇರುತ್ತದೆ ಆದರೆ ಅದನ್ನು ಮನಸಲ್ಲಿ ಇಟ್ಟುಕೊಳ್ಳದೆ ಸರ್ಕಾರದಿಂದ ಸಿಗುವ ಸೌಲಭ್ಯದಿಂದಲೇ ಮುಂದೆ ಬರುವ ಪ್ರಯತ್ನ ಮಾಡಬೇಕು. ಸ್ವಾತಂತ್ರ್ಯ ಪೂರ್ವದಿಂದಲೂ ಭಾರತದಲ್ಲಿ ಮಹಿಳೆಯರಿಗೆ ವಿಶೇಷ ಪ್ರಾತಿನಿಧ್ಯ ಇದೆ, ಸರ್ಕಾರ ಮಹಿಳೆಯರ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ವಾಕ್ಯದಡಿ ಮಹಿಳೆಯರ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ ಎಂದರು.

ಶಿಕ್ಷಕರ ನೇಮಕಾತಿಯಲ್ಲಿ ಶೇ.50ರಷ್ಟು ಮೀಸಲಾತಿ ಜಿಲ್ಲಾ ಪಂಚಾಯತ್ ಹಾಗೂ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮೀಸಲಾತಿ ನೀಡಲಾಗಿದೆ. ಇಷ್ಟಾದರೂ ಮಹಿಳೆಯರು ಸಮಾಜದಲ್ಲಿ ಮುಂದೆ ಬಂದಿದ್ದಾರೆ ಎಂದು ಹೆಣ್ಣು ಮಕ್ಕಳು ತಮ್ಮನ್ನು ತಾವೇ ಅವಲೋಕಿಸಿಕೊಳ್ಳಬೇಕು ಎಂದು ಹೇಳಿದರು.

ಮುಂದಿನ ದಿನಗಳಲ್ಲಿ ಅಸೆಂಬ್ಲಿ ಚುನಾವಣೆಯಲ್ಲಿ ಮಹಿಳೆಯರಿಗೆ ಮೀಸಲಾತಿ ದೊರೆಯುವ ಕಾಲ ದೂರ ಇಲ್ಲ, ಜಿಲ್ಲೆಯ ಅಭಿವೃದ್ಧಿ ಸಿ.ಇ.ಓ ನಂದಿನಿ ಹಾಗೂ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಜಿಲ್ಲೆಯಲ್ಲಿ ಉತ್ತಮ ಆಡಳಿತ ನಡೆಸಿಕೊಂಡು ಹೋಗುತ್ತಿದ್ದಾರೆ, ಐ.ಎ.ಎಸ್ ಪರೀಕ್ಷೆಯಲ್ಲಿ ಸಿ.ಇ.ಓ ನಂದಿನಿ ಅವರು ದೇಶಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ ಅವರನ್ನು ಮಹಿಳೆಯರು ಆದರ್ಶವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು.

ದೇಶದ ಅಭಿವೃದ್ಧಿಗೆ ಮತ್ತು ಆರ್ಥಿಕ ಸಬಲೀಕರಣ ಆಗಬೇಕಾದರೆ ಮಹಿಳೆಯರು ಶೈಕ್ಷಣಿಕವಾಗಿ ಮುಂದೆ ಬರಬೇಕು. ಮಹಿಳೆಯರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಉತ್ತಮ ಸಮಾಜ ನಿರ್ಮಾಣಕ್ಕೆ ಮಹಿಳೆಯರ ಪ್ರಾತಿನಿಧ್ಯ ಅತಿ ಮುಖ್ಯ ಎಂದು ಹೇಳಿದರು.


ಮುಂದಿನ ದಿನಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಎನ್.ಆರ್.ಎಂ.ಎಲ್. ಯೋಜನೆಯಡಿ ಸೌಲಭ್ಯ ಪಡೆದು ಮಹಿಳೆಯರು ತಯಾರಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ಮಾರುಕಟ್ಟೆಯನ್ನು ತೆರೆಯಲಾಗುವುದು, ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಬರಲಿದೆ ಎಲ್ಲರೂ ಜವಾಬ್ದಾರಿಯಿಂದ ಅರ್ಹ ವ್ಯಕ್ತಿಯನ್ನು ಆರಿಸಿ ಎಂದು ಹೇಳಿದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಮಹಿಳೆಯರು ಅಭಿವೃದ್ಧಿ ಹೊಂದಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬ ಪರಿಕಲ್ಪನೆ ಮಹಾತ್ಮ ಗಾಂಧೀಜಿ ಅವರದ್ದು. ಮಹಿಳೆಯರ ಅಭಿವೃದ್ಧಿಗೆ ಸಣ್ಣ ಕೈಗಾರಿಕೆಗಳ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್ ಅವರು ಜಿಲ್ಲೆಗೆ ಗಾರ್ಮೆಂಟ್ಸ್ (ಸಣ್ಣ ಕೈಗಾರಿಕೆ)ತರಲು ಸಿದ್ಧರಾಗಿದ್ದಾರೆ ಅವರಿಗೆ ಬಸರಾಳಿನಲ್ಲಿ 100 ಎಕರೆ ಜಾಗವನ್ನು ಈಗಾಗಲೇ ಗುರುತಿಸಲಾಗಿದೆ ಶೀಘ್ರದಲ್ಲಿಯೆ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಕೈಮಗ್ಗ ಹಾಗೂ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ ರಘುನಂದನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಆಶಾ, ಜಿಲ್ಲಾ ಪಂಚಾಯತಿ ಉಪಕಾರ್ಯದರ್ಶಿಗಳಾದ ಡಾ.ಶಿವಲಿಂಗಯ್ಯ, ಲಕ್ಷ್ಮಿ ಉಪಸ್ಥಿತರಿದ್ದರು.

ಮೇಲುಕೋಟೆಯಲ್ಲಿ ಚಿರತೆಗಳ ಕಾಟ

ಊರಿಗೆ ನುಗ್ಗಿ ಸಾಕು ಪ್ರಾಣಿಗಳ ಮೇಲೆ ದಾಳಿ, ಬಂಡೆ ಮೇಲೆ ನಿತ್ಯವೂ ಕಾಣಿಸಿಕೊಳ್ಳುತ್ತಿರುವ ಚಿರತೆ



ಮೇಲುಕೋಟೆಯ ಮನೆಯೊಂದರ ಹಿಂಭಾಗ ಹಸುವಿನ ಮೇಲೆ ದಾಳಿ ನಡೆಸುತ್ತಿರುವ ಚಿರತೆ

ಮೇಲುಕೋಟೆ: ಮೇಲುಕೋಟೆಯ ಜನ ವಸತಿ ಪ್ರದೇಶಗಳಿಗೆ ಚಿರತೆಗಳು ನುಗ್ಗಿ ಆಡು, ಕೋಳಿ, ದನಗಳನ್ನು ಹೊತ್ತೊಯ್ಯುತ್ತಿರುವ ಘಟನೆಗಳು ನಡೆಯುತ್ತಿದ್ದು ಬಂಡೆಗಳ ಮೇಲೆ ಕಾಣಿಸಿಕೊಳ್ಳುವ ಮೂಲಕ ಸಾರ್ವಜನಿಕರು ಭಯಭೀತರಾಗಿದ್ದಾರೆ

ಎರಡು ದಿನ ಹಿಂದೆ ಬೇಕರಿ ರಾಜು ಎಂಬುವರ ಮನೆಯ ಹಿಂಭಾಗ ಆಪೆ ಆಟೋ ಪಕ್ಕ ಇದ್ದ ಚೆಲುವನಾರಾಯಣ ಸ್ವಾಮಿ ದೇವಾಲಯಕ್ಕೆ ಬಿಟ್ಟಿದ್ದ ಗೂಳಿಯನ್ನು ಚಿರತೆ ಕಚ್ಚಿ ಹಿಡಿದಿರುವ ದೃಶ್ಯ ಮೊಬೈಲ್ ಕ್ಯಾಮರಾದಲ್ಲಿ ಸೆರೆಯಾಗಿದೆ. ರಾತ್ರಿ 10 ಗಂಟೆ ಸಮಯದಲ್ಲಿ ಚಿರತೆ ಈ ದಾಳಿ ನಡೆಸಿದ್ದು ದನ ಒದ್ದಾಡುತ್ತಿರುವ ದೃಶ್ಯವನ್ನು ದೇವಾಲಯದ ಸಿಬ್ಬಂದಿ ಶ್ರೀಪಾದ ಸೆರೆಹಿಡಿದಿದ್ದಾರೆ. ಚಿರತೆಯಿಂದ ಬಸವನನ್ನು ಬಿಡಿಸಲು ನೀರು ಎರಚಿ ಪ್ರಯತ್ನಿಸಿದರೂ ಸಾಧ್ಯವಾಗದೆ ಕತ್ತುಕಚ್ಚಿ ರಕ್ತಹೀರಿದ ಚಿರತೆ ದನದ ಕಳೆಬರವನ್ನು ಹೊತ್ತೊಯ್ದು ತಿಂದು ಹಾಕಿದೆ. ಮೇಲುಕೋಟೆಯ ಸುತ್ತಮುತ್ತ ನಾಲ್ಕೈದು ಚಿರತೆಗಳು ಬೀಡುಬಿಟ್ಟಿದ್ದು ನಾಗರೀಕರಿಗೆ ಆಗಾಗ್ಗೆ ದರ್ಶನ ಕೊಡುತ್ತಿವೆ.

ಮೇಲುಕೋಟೆಯ ಸುತ್ತಮುತ್ತ ಚಿರತೆಗಳ ಕಾಟ ಹೆಚ್ಚಾಗಿದ್ದು ಅರಣ್ಯ ಇಲಾಖೆ ಹೆಚ್ಚಿನ ಅನಾಹುತ ಸಂಭವಿಸುವ ಮುನ್ನ ಜಾಗೃತಿವಹಿಸಿ ಚಿರತೆಗಳನ್ನು ಹಿಡಿಯಲು ಕ್ರಮವಹಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಡಿಂಕಾ ಶೆಟ್ಟಿಹಳ್ಳಿಯಲ್ಲಿ ಶಾಲಾ ದಾಖಲಾತಿ ಆಂದೋಲನ



ಪಾಂಡವಪುರ ತಾಲೂಕಿನ ಡಿಂಕಾಶೆಟ್ಟಿಹಳ್ಳಿ ಗ್ರಾಮದ ಸರಕಾರಿ ಶಾಲೆಯಲ್ಲಿ ವಿಶೇಷ ದಾಖಲಾತಿ ಆಂದೋಲನ ಜಾಥ ನಡೆಸಲಾಯಿತು.

ಪಾಂಡವಪುರ,ಏ.8– ಸರಕಾರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುವ ಉದ್ದೇಶದಿಂದ ತಾಲೂಕಿನ ಡಿಂಕಾಶೆಟ್ಟಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎಚ್.ಸಿ. ಚನ್ನಕೇಶು ಅವರು ಶಿಕ್ಷಕರು, ಮಕ್ಕಳು ಹಾಗೂ ಗ್ರಾಮಸ್ಥರ ಜತೆಗೂಡಿ ಗ್ರಾಮದಲ್ಲಿ ಜಾಥ ನಡೆಸುವ ಮೂಲಕ ವಿಶೇಷ ಶಾಲಾ ದಾಖಲಾತಿ ಆಂದೋಲನ ನಡೆಸಿದರು.

ಶಾಲಾ ಆವರಣದಿಂದ ಹೊರಟ ಜಾಗೃತಿ ಜಾಥವು ಗ್ರಾಮದ ಪ್ರತಿಬೀದಿ ಮನೆಗಳಿಗೆ ತೆರಳಿ ಸರಕಾರಿ ಶಾಲೆಯಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ದೊರೆಯುವ ಸೌಲಭ್ಯಗಳ ಕುರಿತ ಕರಪತ್ರಗಳನ್ನು ಹಂಚುವ ಮೂಲಕ ಅರಿವು ಮೂಡಿಸುವ ಕೆಲಸ ಮಾಡಿದರು. ವಿಶೇಷ ಜಾಥ ಆಂದೋಲನಕ್ಕೆ ಕ್ಷೇತ್ರ ಶಿಕ್ಷಣಾಕಾರಿ ಧರ್ಮಶೆಟ್ಟಿ ಅವರು ಚಾಲನೆ ನೀಡಿ ಬಳಿಕ ಮಾತನಾಡಿ, 5 ವರ್ಷ 10 ತಿಂಗಳ ತುಂಬಿದ ಹಾಗೂ 6–14 ವರ್ಷದ ಮಕ್ಕಳು ಶಾಲೆಯಿಂದ ಹೊರಗೆ ಉಳಿಯಬಾರದು ಹಾಗೂ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳ ಮಾಡುವ ಉದ್ದೇಶದಿಂದ ಡಿಂಕಾಶೆಟ್ಟಿ ಗ್ರಾಮದ ಸರಕಾರಿ ಶಾಲೆಯ ಮುಖ್ಯಶಿಕ್ಷಕರು ದಾಖಲಾತಿ ಆಂದೋಲನ ನಡೆಸುತ್ತಿದ್ದಾರೆ. ಸರಕಾರದಿಂದ ಮಕ್ಕಳಿಗೆ ಸಾಕಷ್ಟು ಸೌಲಭ್ಯಗಳು ದೊರೆಯುತ್ತಿದ್ದು ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು, ಪೋಷಕರು ಲಕ್ಷಾಂತರ ರೂ. ನೀಡಿ ಖಾಸಗಿ ಶಾಲೆಗೆ ದಾಖಲಿಸುವ ಬದಲು ಸರಕಾರಿ ಶಾಲೆಗೆ ದಾಖಲಿಸಿ ಎಂದರು.

ಮುಖ್ಯಶಿಕ್ಷಕ ಎಚ್.ಸಿ.ಚನ್ನಕೇಶು ಮಾತ ನಾಡಿದರು. ಇದೇ ವೇಳೆ ಗ್ರಾಮದ ಮುಖಂಡ ರಾಜೇಗೌಡ ಎಂಬುವರು ಶಾಲೆಯ 25 ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ನೀಡಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಸಂಪನ್ಮೂಲ ಅಧಿಕಾರಿ ಪ್ರಕಾಶ್, ಶಿಕ್ಷಣ ಸಂಯೋಜಕ ರಮೇಶ್, ಸಹ ಶಿಕ್ಷಕಿ ಸವಿತ, ಎಸ್‌ಡಿಎಂಸಿ ಅಧ್ಯಕ್ಷ ಮಹದೇವಪ್ಪ, ಸದಸ್ಯರು ಹಾಗೂ ಪೋಷಕರು ಸೇರಿದಂತೆ ಹಲವರು ಇದ್ದರು.

ಶ್ರೀರಂಗಪಟ್ಟಣ ಅಭಿವೃದ್ಧಿಗೆ 300 ಕೋಟಿ ಅನುದಾನ

ರಸ್ತೆಗಳು, ನಾಲೆಗಳ ಅಭಿವೃದ್ಧಿಗೆ ಚಾಲನೆ ನೀಡಿದ ಶಾಸಕ



ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಶೆಟ್ಟಹಳ್ಳಿ ಬಳಿ 5 ಕೋಟಿ ರೂ. ವೆಚ್ಚದ ರಾಮಾಚಾರಿ ಪಿಕಪ್ ನಾಲೆಯ ಅಭಿವೃದ್ಧಿ ಕಾಮಗಾರಿಗೆ ಶಾಸಕ ರಮೇಶ ಬಂಡಿಸಿದ್ದೇಗೌಡ ಭೂಮಿ ಪೂಜೆ ನೆರವೇರಿಸಿದರು

ಶ್ರೀರಂಗಪಟ್ಟಣ: ಕ್ಷೇತ್ರದಲ್ಲಿ ನಾಲೆಗಳು ಮತ್ತು ವಿತರಣಾ ನಾಲೆಗಳ ಅಭಿವೃದ್ಧಿ, ರಸ್ತೆ ಮತ್ತು ಕೆರೆಗಳ ಪುನರುಜ್ಜೀವನ ಕಾಮಗಾರಿಗಳಿಗೆ ಸರ್ಕಾರ 300 ಕೋಟಿಗೂ ಹೆಚ್ಚು ಅನುದಾನ ನೀಡಿದೆ ಎಂದು ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ತಾಲೂಕಿನ ಕೆ.ಶೆಟ್ಟಹಳ್ಳಿ ಬಳಿ 5 ಕೋಟಿ ರೂ.ವೆಚ್ಚದಲ್ಲಿ ರಾಮಾಚಾರಿ ಪಿಕಪ್ ನಾಲೆ ಅಭಿವೃದ್ಧಿ ಕಾಮಗಾರಿಗೆ ಸೇರಿದಂತೆ ವಿವಿಧೆಡೆ 22 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕೆ.ಶೆಟ್ಟಹಳ್ಳಿ ಬಳಿ ರಾಮಾಚಾರಿ ಪಿಕಪ್ ನಾಲೆಯನ್ನು 5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಮಾಡಲಾಗುತ್ತಿದೆ. ತಾಲ್ಲೂಕಿನ ಅಲ್ಲಾಪಟ್ಟಣ, ಟಿ.ಎಂ. ಹೊಸೂರು, ನೀಲನಕೊಪ್ಪಲು ಮತ್ತು ಗೌಡಹಳ್ಳಿ ಗ್ರಾಮಗಳ ವ್ಯಾಪ್ತಿಯ ವಿತರಣಾ ನಾಲೆ 10 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಯಾಗುತ್ತಿದೆ. ಗೆಂಡೆಹೊಸಹಳ್ಳಿ ಕೆರೆಯ ತೂಬು ನಾಲೆ ಮತ್ತು ದಮ್ಮನಕಟ್ಟೆ ರಸ್ತೆ ಸೇರಿ ಒಟ್ಟು 5 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಕಾವೇರಿ ನದಿಯಿಂದ ಅರಕೆರೆ ಹೋಬಳಿಯ ಗಾಮನಹಳ್ಳಿ, ನೇರಲಕೆರೆ, ಮಾರಸಿಂಗನಹಳ್ಳಿ ಇತರ ಕೆರೆಗಳಿಗೆ ನೀರು ತುಂಬಿಸುವ 60 ಕೋಟಿ ರೂ. ವೆಚ್ಚದ ಯೋಜನೆ ಪ್ರಗತಿಯಲ್ಲಿದೆ. ಸಿಡಿಎಸ್ ಮತ್ತು ವಿರಿಜಾ ನಾಲೆಗಳು ಮತ್ತು ಅವುಗಳ ವಿತರಣಾ ನಾಲೆಗಳ ಅಭಿವೃದ್ಧಿಗೆ ಸರ್ಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ 60 ಕೋಟಿ ರೂ. ನೀಡಿದೆ. ನಾಲೆ, ರಸ್ತೆ, ಚರಂಡಿ, ಸೇತುವೆ ಸೇರಿದಂತೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ನೀರಾವರಿ ಇಲಾಖೆ ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ತಾಲೂಕಿನ ಕೆ.ಶೆಟ್ಟಹಳ್ಳಿ ಬಳಿ ಮುಖಂಡರಾದ ಎಸ್.ಎಲ್.ಲಿಂಗರಾಜು, ಶ್ರೀಕಂಠಯ್ಯ, ಗಂಗಾಧರ್, ಬಿ.ಚಂದ್ರಶೇಖರ್, ಮಹಾಲಿಂಗು, ಡೈರಿ ಸ್ವಾಮಣ್ಣ, ಅಪ್ಪಾಜಿ, ರಾಜಣ್ಣ, ಶಂಕರಪ್ಪ, ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶೋಭಾರಾಣಿ, ನೀರಾವರಿ ಇಲಾಖೆ ಎಇಇ ಶಿವಪ್ರಸಾದ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಸಮಿತಿ ಅಧ್ಯಕ್ಷ ಎಂ.ಎಲ್. ದಿನೇಶ್, ಟಿಎಪಿಎಂಎಸ್ ನಿರ್ದೇಶಕ ಎಂ. ನಂದೀಶ್, ಪುರಸಭೆ ಮುಖ್ಯಾಧಿಕಾರಿ ಎಂ. ರಾಜಣ್ಣ, ಮಾಜಿ ಸದಸ್ಯ ಎಸ್. ನಂದೀಶ್, ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ರಜನೀಕಾಂತ್, ಉಪಾಧ್ಯಕ್ಷ ರವಿಕುಮಾರ್, ಕಾರ್ಯದರ್ಶಿ ಅಭಿಷೇಕ್, ಜೋತಿಷಿ ಭಾನು ಪ್ರಕಾಶ್ ಶರ್ಮಾ ಹಾಗೂ ಗಂಜಾಂನಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಎಲ್.ನಾಗರಾಜು, ಬಾಲಸುಬ್ರಹ್ಮಣ್ಯ, ಮಂಜು, ಕೃಷ್ಣಪ್ಪ, ಸಲೀಂ, ನಾರಾಯಣಪ್ಪ ಇದ್ದರು.

ಇಂದು, ಏ.12 ರಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಏ.8–ಪುರ ಫೀಡರ್ ಮಾರ್ಗದಲ್ಲಿ ಲಿಂಕ್‌ಲೈನ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಏ.10 ರಂದು ಮತ್ತು 12 ರಂದು ಬೆಳಗ್ಗೆ 9ಗಂಟೆಯಿಂದ ಸಂಜೆ 6 ಗಂಟೆಯವರಗೆ ಟಿ ಮಲ್ಲಿಗೇರೆ, ತಗ್ಗಹಳ್ಳಿ, ಹಳುವಾಡಿ, ಪುರ, ಮರಸಿಂಗನಹಳ್ಳಿ, ತಿಮ್ಮನಹೊಸುರು, ಲೋಕಸರ, ಲೋಕಸರ ಫಾರಂ ಮತ್ತು ಕಮ್ಮನಾಯಕನಹಳ್ಳಿ ಹಾಗೂ ಈ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್‌ನಲ್ಲಿ ವ್ಯತ್ಯಯ ಉಂಟಾಗಲಿದೆ.

ಮದ್ದೂರು ನಗರಸಭೆಗೆ ಗೆಜ್ಜಲಗೆರೆ ಗ್ರಾಪಂ ಸೇರ್ಪಡೆ ವಿರೋಧಿಸಿ ಧರಣಿ

ಹೋರಾಟಕ್ಕೆ ಬೊಮ್ಮಾಯಿ, ಅಶ್ವತ್ಥ್ ನಾರಾಯಣ ಸಾಥ್



ಅನಿರ್ದಿಷ್ಟಾವಧಿ ಧರಣಿಯಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು.

ಮದ್ದೂರು: ತಾಲೂಕಿನ ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವುದನ್ನು ವಿರೋಧಿಸಿ ಸ್ಥಳೀಯ ನಿವಾಸಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ್ ಭೇಟಿ ನೀಡಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾ.ಪಂ. ಕಚೇರಿ ಬಳಿ ಕಳೆದ 107 ದಿನಗಳಿಂದಲೂ ನಗರಸಭೆಗೆ ಗ್ರಾಮವನ್ನು ಸೇರ್ಪಡೆಗೊಳಿಸಿರುವ ಕ್ರಮ ಖಂಡಿಸಿ ಸ್ಥಳೀಯ ಸಾರ್ವಜನಿಕರು ಕೈಗೊಂಡಿರುವ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರಿಂದ ಅಗತ್ಯ ಮಾಹಿತಿ ಸಂಗ್ರಹಿಸುವ ಜತೆಗೆ ಪ್ರತಿಭಟನೆಗೆ ತಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದರು.

ಬಳಿಕ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜಬೊಮ್ಮಾಯಿ, ಯಾವುದೇ ಗ್ರಾಮವನ್ನು ಪುರಸಭೆಗಾಗಲಿ ಅಥವಾ ನಗರಸಭೆಯಾಗಲಿ ಸೇರ್ಪಡೆಗೊಳಿಸುವುದಕ್ಕೂ ಮುನ್ನ ಅನೇಕ ಕಾನೂನಾತ್ಮಕ ಹಾಗೂ ಸ್ಥಳಿಯ ಮಾರ್ಗಸೂಚಿಗಳನ್ನು ಪಾಲಿಸಬೇಕಾಗುತ್ತದೆ ಆದರೆ, ಸ್ಥಳಿಯ ಗ್ರಾಪಂಯ ಸದಸ್ಯರ ಹಾಗೂ ಗ್ರಾಮಸ್ಥರ ಒಪ್ಪಿಗೆ ಪಡೆಯದೆ ಸೇರ್ಪಡೆಗೊಳಿಸಿರುವ ತೀರ್ಮಾನ ಸರಿ ಸರಿಯಲ್ಲ ಎಂದ ಅವರು, ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸುವ ಕ್ರಮ ಕಾನೂನು ಬಾಹಿರ ಎಂದರು.

ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿರುವ ಸಂಬಂಧ ತಾವು ಸಹ ಮುಖ್ಯಮಂತ್ರಿಗೆ ಪತ್ರ ವ್ಯವಹಾರ ನಡೆಸಿ ಮತ್ತು ಸ್ಥಳೀಯ ಶಾಸಕರೊಟ್ಟಿಗೆ ಚರ್ಚಿಸಿ ಕ್ರಮ ವಹಿಸುವ ಭರವಸೆ ನೀಡಿದರಲ್ಲದೆ ಈ ಯೋಜನೆಯಿಂದ ಹಿಂದೆ ಸರಿದರೆ ಅಭಿನಂದನೆ ಸಲ್ಲಿಸುವುದಾಗಿ ತಪ್ಪಿದಲ್ಲಿ ಕಾನೂನಾತ್ಮಕ ಹೋರಾಟ ಕೈಗೊಳ್ಳಲಾಗುವುದು ಎಂದರು.

ಕಳೆದ ಹಲವು ದಿನಗಳಿಂದ ನಡೆಸುತ್ತಿರುವ ಜನಶಕ್ತಿಗೆ ಗೆಲುವು ಸಿಗುವ ವಿಶ್ವಾಸ ವ್ಯಕ್ತಪಡಿಸಿದರಲ್ಲದೆ ಮುಂದಿನ ದಿನಗಳಲ್ಲಿ ಸ್ಥಳೀಯ ಸರ್ಕಾರ ಪುನರ್ಸ್ಥಾಪನೆಯಾಗಲಿದ್ದು ತಮ್ಮ ಪ್ರತಿಭಟನೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ಹೇಳಿದರು.

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್‌ರಾಯಣ್ ಮಾತನಾಡಿ, ಕೂಡಲೇ ಪ್ರತಿಭಟನಾಕಾರರ ಬೇಡಿಕೆಗಳನ್ನು ಈಡೇರಿಸುವ ಮೂಲಕ ಜನರ ಪ್ರೀತಿ ವಿಶ್ವಾಸವನ್ನು ಗಳಿಸುವಂತೆ ತಪ್ಪಿದಲ್ಲಿ ಪ್ರತಿಭಟನಾಕಾರರೇ ಸರ್ಕಾರವನ್ನು ಸರ್ವನಾಶ ಮಾಡುತ್ತಾರೆಂದು ಎಚ್ಚರಿಕೆ ನೀಡಿದರು.

ರೈತ ನಾಯಕಿ ಸುನಂದಜಯರಾಮು, ಬಿ.ಜೆ.ಪಿ ಮಾಜಿ ಜಿಲ್ಲಾಧ್ಯಕ್ಷ ಸಿ.ಪಿ. ಉಮೇಶ್, ತಾಪಂ ಮಾಜಿ ಅಧ್ಯಕ್ಷ ಸಿ.ಪಿ.ಯೋಗೇಶ್, ಮುಖಂಡರಾದ ವೀರಪ್ಪ, ಶಂಕರ್, ಲಿಂಗಪ್ಪಾಜಿ, ಮೋಹನ್ ಕುಮಾರ್, ಯೋಗೇಶ್, ಅಶ್ವಥಮ್ಮ, ಗೌರಮ್ಮ ಇತರರಿದ್ದರು.

ಘನತ್ಯಾಜ್ಯ ವಿಲೇವಾರಿ ಘಟಕದಿಂದ ವ್ಯಾಪಿಸಿದ ಬೆಂಕಿ, ಮರಗಳು ಭಸ್ಮ



ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಬೆಂಕಿಹೊತ್ತಿಕೊಂಡು ಸಮೀಪದಲ್ಲಿರುವ ರೈತರ ಜಮೀನಿಗೆ ವ್ಯಾಪಿಸಿ ಮರಗಳು ಸುಟ್ಟುಹೋಗಿರುವುದು.

ಭಾರತೀನಗರ,ಏ.8– ಭಾರತೀನಗರ ಗ್ರಾ.ಪಂನಿಂದ ನಿರ್ಮಿಸಿರುವ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ಬೆಂಕಿ ಬಿದ್ದ ಪರಿಣಾಮ ಪಕ್ಕದಲ್ಲಿರುವ ರೈತರ ಜಮೀನಿನ ಮರಗಳಿಗೂ ಬೆಂಕಿ ವ್ಯಾಪಿಸಿ ಮರಗಳು ಸುಟ್ಟುಹೋಗಿರುವ ಘಟನೆ ಸಮೀಪದ ಅಣ್ಣೂರು ಗ್ರಾಮದ ಹೊರವಲಯದ ಹೊಂಬೇಗೌಡನದೊಡ್ಡಿ ಗಡಿ ಭಾಗದಲ್ಲಿ ಸಂಭವಿಸಿದೆ.

ಈ ಘನತ್ಯಾಜ್ಯಕ್ಕೆ ಕಳೆದ 15 ದಿನಗಳ ಹಿಂದೆಯೂ ಬೆಂಕಿ ತಗುಲಿದ್ದು, ಭಾರತೀನಗರ ಗ್ರಾ.ಪಂನವರು ಅಗ್ನಿಶಾಮಕ ದಳವನ್ನು ಕರೆಸಿ ಬೆಂಕಿಯನ್ನು ನಂದಿಸಿದ್ದರು. ತದನಂತರ ಈ ಹಿಂದೆ ಬೆಂಕಿ ಹತ್ತಿದ್ದ ಸ್ಥಳದಲ್ಲಿಯೇ ಹೊಸದಾಗಿ ಘನತ್ಯಾಜ್ಯವನ್ನು ವಿಲೇವಾರಿ ಮಾಡಿದ್ದರು. ಬೂದಿಮುಚ್ಚಿದ ಕೆಂಡದಂತಿದ್ದ ಬೆಂಕಿಯೂ ಬೇಸಿಗೆಯ ಸುಡು ಬಿಸಿಲಿ ನಿಂದ ಹೊಸದಾಗಿ ವಿಲೇವಾರಿ ಮಾಡಲಾಗಿದ್ದ ಘಟಕ ತ್ಯಾಜ್ಯಕ್ಕೆ ಹತ್ತಿ ಕೊಂಡು ಬೆಂಕಿಯ ಕೆನ್ನಾಲಿಗೆ ಇಡೀ ಘನ ತ್ಯಾಜ್ಯಘಟಕಕ್ಕೆ ಹರಡಿತು. ಬಯಲು ಪ್ರದೇಶವಾದ್ದರಿಂದ ಗಾಳಿ ಬೀಸಿದ್ದು, ಬೆಂಕಿಯೂ ಸಮೀಪದಲ್ಲಿದ್ದ ನೀಲಗಿರಿ ತೋಪಿಗೆ ವ್ಯಾಪಿಸಿತು.

ಹೀಗೇಯೇ ಅಕ್ಕಪಕ್ಕದ ಜಮೀನುಗಳಿಗೆಲ್ಲಾ ಬೆಂಕಿ ವ್ಯಾಪಿಸಿ ಸುಮಾರು 15 ಎಕರೆ ಪ್ರದೇಶದಲ್ಲಿರುವ ಮರಗಿಡಗಳು ಬೆಂಕಿಯ ಶಾಖದಿಂದ ಸುಟ್ಟುಹೋಗಿವೆ.

ಮಣಿಗೆರೆ ರೈತರ ಕೆಲವು ಜಮೀನು, ಅಣ್ಣೂರು ಗ್ರಾಮದ ಬಿ.ಸಿದ್ದೇಗೌಡ(ಹೊಂಡಾ), ಎ.ಎಸ್.ರಾಮಕೃಷ್ಣ, ಸಂಪತ್‌ಕುಮಾರ್, ಆನಂದ ಎಂಬುವವರ ಜಮೀನಿನಲ್ಲಿದ್ದ ನೀಲಗಿರಿ ಹಾಗೂ ತೆಂಗಿನ ಮರಗಳು ಸುಟ್ಟುಹೋಗಿವೆ. ಈ ಹಿಂದೆ ಬೆಂಕಿ ಹತ್ತಿದ್ದ ಸ್ಥಳಕ್ಕೆ ಮತ್ತೆ ಘನ ತ್ಯಾಜ್ಯವನ್ನು ಹಾಕಿ ಬೆಂಕಿ ಹೊತ್ತಿಕೊಳ್ಳುವಂತೆ ಮಾಡಿರುವ ಗ್ರಾ.ಪಂನವರು ಪರಿಹಾರ ನೀಡಬೇಕು. ಇಲ್ಲದಿದ್ದರೆ ಪಂಚಾಯಿತಿ ಮುಂದೆ ಉಗ್ರ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಇಂದಿನಿಂದ ಸಿಡಿಹಬ್ಬ

ಏ.11ರಂದು ಶ್ರೀ ಲಕ್ಷ್ಮಿದೇವಿ ಅಮ್ಮನ ಬ್ರಹ್ಮ ರಥೋತ್ಸವ

ಕೆ.ಆರ್.ಪೇಟೆ,ಏ.8– ತಾಲೂಕಿನ ಕಸಬಾ ಹೋಬಳಿಯ ಅಗ್ರಹಾರಬಾಚಹಳ್ಳಿ ಗ್ರಾಮದೇವತೆ ಶ್ರೀ ಲಕ್ಷ್ಮಿದೇವಿ (ಬಾಚಳ್ಳಮ್ಮ) ಅಮ್ಮನವರ ಸಿಡಿ ಹಬ್ಬವು ಏ.9ರಿಂದ ಏ.13ರವರೆಗೆ ನಡೆಯಲಿದೆ. ಪ್ರಮುಖವಾಗಿ ಏ.11ರಂದು ಶನಿವಾರ ದೇವಿಯ ಬ್ರಹ್ಮ ರಥೋತ್ಸವವು ನಡೆಯಲಿದೆ.

ಏ.9ರಂದು ರಾತ್ರಿಯಿಡೀ ರಂಗ ಕುಣಿತ, ಏ.10ರಂದು ಬೆಳಗ್ಗೆ ಹೂವಿನ ರಥೋತ್ಸವ, ಸಂಜೆ ಸಿಡಿ, ಬಾಯಿ ಬೀಗ, ಕೊಂಡೋತ್ಸವ, ಎಡೆ– ಮಡೆ ಉತ್ಸವ, ಸಿಡಿಮದ್ದು ಪ್ರದರ್ಶನ, ಕಳಸ ಪ್ರದಾನ ಕಾರ್ಯಕ್ರಮಗಳು ನಡೆಯಲಿವೆ. ಏ.11ರಂದು ಮಧ್ಯಾಹ್ನ 3 ಗಂಟೆಗೆ ಶ್ರೀ ಲಕ್ಷ್ಮಿದೇವಿ ಅಮ್ಮನವರ ಮಹಾ ರಥೋತ್ಸವ ನಡೆಯಲಿದೆ. ರಥೋತ್ಸವಕ್ಕೆ ಆಗಮಿಸುವ ಎಲ್ಲಾ ಭಕ್ತಾಧಿಗಳಿಗೆ ಅನ್ನಪ್ರಸಾದ ವ್ಯವಸ್ಥೆಯನ್ನು ಗ್ರಾಮದ ಸರ್ಕಾರಿ ನೌಕರರ ಸಂಘದ ವತಿಯಿಂದ ಆಯೋಜಿಸಲಾಗಿದೆ.

ಏ.12ರಂದು ಓಕಲಿಯಾಟ, ಜಾತ್ರಾ ಮಹೋತ್ಸವ, ಕೋಲಾಟ, ಹಣ್ಣು–ಕಾಯಿ ಪೂಜಾ ಕಾರ್ಯಕ್ರಮ ನಡೆಯಲಿವೆ. ಏ.13ರಂದು ಸೋಮದೇವರ ಕುಣಿತ ಹಾಗೂ ಸೋಮದೇವರ ಪೂಜಾ ಕಾರ್ಯಕ್ರಮವು ಆಯ್ದ ಮನೆಗಳಲ್ಲಿ ರಾತ್ರಿಯಿಡೀ ನಡೆಯಲಿದೆ.

ಹೆತ್ತಗೋನಹಳ್ಳಿ ಗ್ರಾಮದೇವತೆ ಶ್ರೀ ಮಾಯಮ್ಮ ಮಹಾರಥೋತ್ಸವ



ಹೆತ್ತಗೋನಹಳ್ಳಿಯ ಶ್ರೀ ಮಾಯಮ್ಮ ಮಹಾರಥೋತ್ಸವವು ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ಪೇಟೆ: ತಾಲೂಕಿನ ಸಂತೇಬಾಚಳ್ಳಿ ಹೋಬಳಿಯ ಹೆತ್ತಗೋನಹಳ್ಳಿ ಗ್ರಾಮ ದೇವತೆ ಶ್ರೀ ಮಾಯಮ್ಮ ಮಹಾ ರಥೋತ್ಸವವು ಇಂದು ವಿಜೃಂಭಣೆಯಿಂದ ನಡೆಯಿತು.

ಶಾಸಕ ಎಚ್.ಟಿ.ಮಂಜು ಹಾಗೂ ಹೆತ್ತಗೋನಹಳ್ಳಿ ಗ್ರಾಮದ ಯಜಮಾನರುಗಳು ರಥಕ್ಕೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ನಾಡಿನ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಸಂಖ್ಯೆಯ ಭಕ್ತಾದಿಗಳು ಶ್ರೀ ಮಾಯಮ್ಮನಿಗೆ ಉಘೇ.. ಉಘೇ.. ಗ್ರಾಮ ದೇವತೆ ಹೆತ್ತಗೋನಳ್ಳಮ್ಮನಿಗೆ ಉಘೇ..ಉಘೇ.. ಎಂಬ ಘೋಷಣೆಗಳನ್ನು ಕೂಗುತ್ತಾ ರಥಕ್ಕೆ ಹಣ್ಣು ಜವನ ಸಮರ್ಪಿಸಿ ರಥವನ್ನು ಎಳೆಯುವ ಮೂಲಕ ತಮ್ಮ ಭಕ್ತಿ ಭಾವ ಪ್ರದರ್ಶನ ಮಾಡಿದರು.


ರಥೋತ್ಸವದಲ್ಲಿ ಭಾಗವಹಿಸಿ ಮಾಯಮ್ಮ ದೇವಿಯ ದರ್ಶನ ಪಡೆದು ಶಾಸಕ ಹೆಚ್.ಟಿ.ಮಂಜು ಪೂಜೆ ಸಲ್ಲಿಸಿದರು.

ರಥೋತ್ಸವದಲ್ಲಿ ಹೆತ್ತಗೋನಹಳ್ಳಿ, ಬಿಲ್ಲೇನಹಳ್ಳಿ, ಶ್ಯಾರಹಳ್ಳಿ, ಗೊರವಿ, ಅಗ್ರಹಾರ ಬಾಚಹಳ್ಳಿ ಸೇರಿದಂತೆ ನಾಡಿನ ವಿವಿಧ ಭಾಗಗಳಿಂದ ಸಾವಿರಾರು ಭಕ್ತಾಧಿಗಳೂ ರಥೋತ್ಸವದಲ್ಲಿ ಭಾಗವಹಿಸಿದ್ದರು.

ರಥೋತ್ಸವದ ಅಂಗವಾಗಿ ಸಿಡಿ, ಬಾಯಿ ಬೀಗ, ಎಡೆ–ಮಡೆ ಉತ್ಸವ, ಓಕಳಿಯಾಟ, ಸೋಮನ ಕುಣಿತ, ಅನ್ನದಾನ ಕಾರ್ಯಕ್ರಮ ಸೇರಿದಂತೆ ಹಲವು ಕಾರ್ಯಕ್ರಮಗಳು ಮೂರು ದಿನಗಳ ಕಾಲ ಸಡಗರ ಸಂಭ್ರಮದಿಂದ ನಡೆದವು.

ಶ್ರೀಕಾಲಭೈರವೇಶ್ವರ ಮಠದಿಂದ ಸಾಮಾಜಿಕ ಕಾರ್ಯ

ಚಿಕ್ಕರಸಿನಕೆರೆ ಶ್ರೀಕಾಲಭೈರವೇಶ್ವರ ಟ್ರಸ್ಟ್‌ನಿಂದ ಹಿರಿಯ ದಂಪತಿಗಳಿಗೆ ಸನ್ಮಾನ



ಭಾರತೀನಗರ ಸಮೀಪದ ಚಿಕ್ಕರಸಿನಕೆರೆ ಕಾಲಭೈರವೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಂ.ಉದಯ್ ಹಿರಿಯ ದಂಪತಿಗಳನ್ನು ಅಭಿನಂದಿಸಿದರು.

ಭಾರತೀನಗರ.ಏ.8–ಸಾಮಾಜಿಕ ಕಾರ್ಯದಲ್ಲಿ ಶ್ರೀ ಕಾಲಭೈರವೇಶ್ವರ ಮಹಾ ಸಂಸ್ಥಾನ ಮಠ ಮುಂದಾಗಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆ ಶ್ರೀಕಾಲಭೈರವೇಶ್ವರ ಸಮುದಾಯ ಭವನದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಹಾಗೂ ಶ್ರೀಕಾಲಭೈರವೇಶ್ವರಸ್ವಾಮಿ ಬಸವಪ್ಪನ ಪುಣ್ಯಕ್ಷೇತ್ರ ಇವುಗಳ ಸಹಯೋಗದಲ್ಲಿ ಹಿರಿಯ ದಂಪತಿಗಳಿಗೆ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

50 ವರ್ಷ ತುಂಬಿದಂತಹ ದಂಪತಿಗಳಿಗೆ ಸನ್ಮಾನ ಮಾಡುವಂತಹ ಪುಣ್ಯದ ಕೆಲಸವನ್ನು ಶ್ರೀಕಾಲಭೈರವೇಶ್ವರ ಟ್ರಸ್ಟ್ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು. ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಲಕ್ಷಾಂತರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ಮಾಡುವುದರಲ್ಲಿ ಯಶಸ್ವಿಯಾಗಿದೆ ಎಂದು ಶ್ಲಾಘಿಸಿದರು.

ಆರೋಗ್ಯ, ಶಿಕ್ಷಣ, ಆಹಾರ ಇವುಗಳು ಮನುಷ್ಯನಿಗೆ ಅಗತ್ಯವಾಗಿ ಬೇಕಾಗಿರುವುದು. ಇವುಗಳನ್ನು ಶ್ರೀಕಾಲಭೈರವೇಶ್ವರ ಮಹಾ ಸಂಸ್ಥಾನ ಮಠವು ನೀಡುವುದರಲ್ಲಿ ಪ್ರಮುಖ ಪಾತ್ರ ವಹಿಸಿದೆ. ಆದಿಚುಂಚನಗಿರಿ ಮಠದ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಅನೇಕ ಸಮಾಜ ಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದರು.

ಇಲ್ಲಿನ ಬಸವಪ್ಪನ ಮಹಿಮೆ ಬಹಳ ದೊಡ್ಡದಾಗಿದೆ. ಗ್ರಾಮಗಳಲ್ಲಿನ ದೇವಸ್ಥಾನಗಳಿಗೆ ಗುಡ್ಡಪ್ಪರನ್ನು ಆಯ್ಕೆ ಮಾಡುವುದರಲ್ಲಿ, ಹಲವು ವರ್ಷಗಳ ಕಾಲ ಮಕ್ಕಳಿಲ್ಲದವರಿಗೆ ಬಂಜೆತನ ನಿವಾರಿಸುವುದು, ಬೋರ್‌ವೆಲ್ ಹಾಕಿಸಲು ಸ್ಥಳ ಗುರುತಿಸುವುದು ಹೀಗೆ ಅನೇಕ ಮಹಿಮೆಗಳನ್ನು ಮಾಡುವ ಮೂಲಕ ರಾಜ್ಯದಲ್ಲಿ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಮಾತನಾಡಿ, ರೈತರಿಗೆ ಮಳೆ, ಬೆಳೆಯಾಗಿ ಉತ್ತಮ ಬೆಲೆಸಿಗಲಿ ಎಲ್ಲರೂ ಸಂತೋಷದಿಂದ ಸಹಬಾಳ್ವೆ ನಡೆಸಲಿ ಎಂದರು.

ಹಿರಿಯ ದಂಪತಿಗಳಿಗೆ ಅಭಿನಂದನೆ: ಇದೇ ವೇಳೆ 50 ವರ್ಷ ಪೂರೈಸಿದ ಸುವರ್ಣ ಘಟಕ್ಕೆ ಕಾಲಿಟ್ಟ 60 ಕ್ಕೂ ಹೆಚ್ಚು ಹಿರಿಯ ದಂಪತಿಗಳಿಗೆ ಸೀರೆ ಪಂಚೆ ನೀಡುವ ಮೂಲಕ ಶಾಲು ಹೊದಿಸಿ ಮೈಸೂರು ಪೇಟ ತೊಡಿಸಿ ಕಾಲಭೈರವೇಶ್ವರನ ನೆನಪಿನ ಕಾಣಿಕೆ ನೀಡಿ ಮಡಿಲು ಅಕ್ಕಿ ಕೊಟ್ಟು ಶ್ರೀ ಕಾಲಭೈರವೇಶ್ವರ ಟ್ರಸ್ಟ್‌ನ ವತಿಯಿಂದ ಶುಭಹಾರೈಸಿ ಅಭಿನಂದಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಕಾರ್ಕಹಳ್ಳಿ ಶ್ರೀಬಸವೇಶ್ವರಸ್ವಾಮಿ ಬಸವಪ್ಪ ಮತ್ತು ಚಿಕ್ಕರಸಿನಕೆರೆ ಶ್ರೀಕಾಲಭೈರವೇಶ್ವರಸ್ವಾಮಿ ಬಸವಪ್ಪಗಳಿಗೆ ಶ್ರೀಕಾಲಭೈರವೇಶ್ವರ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಲಾಯಿತು.

ಶ್ರೀಕಾಲಭೈರವನ ಹೆಸರಿನಲ್ಲಿ ಗ್ರಾಮದ ರಕ್ಷಣೆಗಾಗಿ ಹೋಮ, ಪೂಜೆ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಕೆ.ಎಂ. ಉದಯ್ ಅವರ ಪತ್ನಿ ಶ್ರೀಮತಿ ವಿನುತ ಉದಯ್, ಶ್ರೀಕಾಲಭೈರವೇಶ್ವರ ಟ್ರಸ್ಟ್‌ನ ಅಧ್ಯಕ್ಷ ಶಿವಲಿಂಗೇಗೌಡ, ಪದಾಧಿಕಾರಿಗಳಾದ ಚನ್ನೇಗೌಡ, ಪುಟ್ಟರಾಜು, ಡಿ.ಎ.ಕೆರೆ ರಘು, ಅಜ್ಜಹಳ್ಳಿ ಲೋಕೇಶ್, ಸಿ.ಕೆ.ಶಿವಣ್ಣ, ಮರಿಲಿಂಗಮ್ಮಜ್ಯೋಗಿಗೌಡ, ಸೇರಿದಂತೆ ಹಲವರಿದ್ದರು.

ಬೆಲೆಬಾಳುವ ಆಸ್ತಿ ಮೇಲೆ ಕಣ್ಣು

ಪ್ರಭಾವಿ ರಾಜಕೀಯ ಮುಖಂಡನಿಂದ ಕಿರುಕುಳ

ಮೈಸೂರು,ಏ.8(ಜಿಎ)–ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಪ್ರಭಾವೀ ರಾಜಕೀಯ ಮುಖಂಡರೊಬ್ಬರು ಗ್ರಾಮದಲ್ಲಿ ತಮ್ಮ ಬೆಲೆಬಾಳುವ ಜಾಗವನ್ನು ತಮ್ಮ ಹೆಸರಿಗೆ ಬರೆದುಕೊಡಿ ಎಂದು ಕಿರುಕುಳ ನೀಡುತ್ತಿದ್ದಾರೆ. ಬೆಟ್ಟದಪುರ ಠಾಣೆ ಪೊಲೀಸ್ ಅಧಿಕಾರಿಗಳು ಸಹ ಇವರ ಬೆಂಬಲಕ್ಕೆ ನಿಂತು ತಮಗೆ ಅನೇಕ ರೀತಿಯ ಬೆದರಿಕೆ ಹಾಕುತ್ತಿದ್ದಾರೆ ಎಂದು ಗ್ರಾಮದ ಶಂಕರೇಗೌಡ ಮತ್ತು ಅವರ ಕುಟುಂಬದವರು ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಪ್ರಮುಖ ಹೆದ್ದಾರಿಯಲ್ಲಿ ತಮಗೆ ಸೇರಿದ ಸುಮಾರು 8 ಗುಂಟೆ ಜಮೀನಿದೆ. ಇದನ್ನು ತಮ್ಮ ಹೆಸರಿಗೆ ಬರೆದುಕೊಡಬೇಕು ಎಂದು ಗ್ರಾಮದ ಮುಖಂಡ ಪದೇ ಪದೇ ಕಿರುಕುಳ ನೀಡುತ್ತಿದ್ದಾರೆ. ಇವರ ಕಿರುಕುಳ ವಿರುದ್ಧ ತಾವು ನ್ಯಾಯಾಲಯದ ಮೊರೆ ಹೋಗಿದ್ದರೂ ಸ್ಥಳೀಯ ಠಾಣೆ ಪೊಲೀಸರು ಮಧ್ಯ ಪ್ರವೇಶಿಸಿ, ಜಮೀನನ್ನು ಮುಖಂಡನಿಗೆ ಬರೆದುಕೊಡಬೇಕೆಂದು ಒತ್ತಾಯಿಸುತ್ತಿದ್ದಾರೆ ಎಂದು ದೂರಿದರು.

ಪದೇ ಪದೇ ಪೊಲೀಸರು ತಮ್ಮ ಮನೆಗೆ ಬಂದು ಠಾಣೆಗೆ ಕರೆದೊಯ್ದು ಕುಳ್ಳಿರಿಸುತ್ತಾರೆ. ಒಂದು ವೇಳೆ ಜಮೀನು ಬರೆದು ಕೊಡದಿದ್ದರೆ ಯಾವುದಾದರೊಂದು ಪ್ರಕರಣದಲ್ಲಿ ಸಿಲುಕಿಸಿ ರೌಡಿ ಶೀಟರ್ ತೆರೆಯುವುದಾಗಿ ಬೆದರಿಕೆ ಹಾಕುತ್ತಿದ್ದಾರೆ. ತಮ್ಮ ಕುಟುಂಬದ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇವರ ವಿರುದ್ಧ ಸಹ ಏನಾದರೂ ಒಂದು ಪ್ರಕರಣ ದಾಖಲಿಸುವುದಾಗಿ ಹೆದರಿಸುತ್ತಿದ್ದಾರೆ. ಈ ಕುರಿತು ಸ್ಥಳೀಯ ಶಾಸಕರ ಗಮನಕ್ಕೂ ತಂದಾಗಿದೆ. ಆದರೂ ಪ್ರಯೋಜನವಾಗಿಲ್ಲ. ಹೀಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳು ಮಧ್ಯ ಪ್ರವೇಶಿಸಿ ತಮಗೆ ರಕ್ಷಣೆ ದೊರಕಿಸಿಕೊಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಕುಟುಂಬಸ್ಥರು ಇದ್ದರು.

ಗುಣಮಟ್ಟದ ಆಹಾರ ಮಾರಾಟ ಮಾಡದಿದ್ದಲ್ಲಿ ಕ್ರಮ

ಅಧಿಕಾರಿಗಳಿಗೆ ಎಡಿಸಿ ಡಾ.ಶಿವರಾಜ್ ಸೂಚನೆ



ಮೈಸೂರು ಡಿಸಿ ಕಚೇರಿ ಸಭಾಂಗಣದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಕಾಯ್ದೆ–2006ರ ಅನುಷ್ಠಾನದ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆ ನಡೆಯಿತು.

ಮೈಸೂರು, ಏ.8– ಸಾರ್ವಜನಿಕರು ಹಣ ನೀಡಿ ಆಹಾರ ಪದಾರ್ಥ ಖರೀದಿಸುತ್ತಾರೆ. ಅವರಿಗೆ ಗುಣಮಟ್ಟದ ಆಹಾರ ಪದಾರ್ಥ ನೀಡಬೇಕಿರುವುದು ಮಾರಾಟಗಾರರ ಕೆಲಸವಾಗಿರುತ್ತದೆ. ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆಹಾರ ಪದಾರ್ಥ ಮಾರಾಟ ಕಂಡುಬಂದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳು ನಿಯಮದಂತೆ ಪ್ರಕರಣ ದಾಖಲಿಸಿ ಎಂದು ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಪಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಕಾಯ್ದೆ 2006ರ ಅನುಷ್ಠಾನದ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮೈಸೂರು ನಗರ ವ್ಯಾಪ್ತಿಯಲ್ಲಿ ಆಹಾರ ಸುರಕ್ಷತೆ ಪರಿಶೀಲಿಸಲು 3 ವೃತ್ತಕ್ಕೆ ಅಧಿಕಾರಿಗಳಿದ್ದು, ಆಹಾರ ಗುಣಮಟ್ಟದ ಪರಿಶೀಲನೆಯ ಸರ್ವೇಗಳು ಅಕ್ಟೋಬರ್ 2025ರಿಂದ ಡಿಸೆಂಬರ್ 2025ರವರೆಗೆ 130 ಆಹಾರ ಪದಾರ್ಥಗಳ ಗುಣಮಟ್ಟದ ಬಗ್ಗೆ ಸರ್ವೆ ನಡೆಸಲಾಗಿದೆ. ಇದನ್ನು ಮುಂದಿನ ದಿನಗಳಲ್ಲಿ ಹೆಚ್ಚಿಸಬೇಕು ಎಂದರು.

ಬೀದಿಬದಿ ಆಹಾರ ಪದಾರ್ಥ ಮಾರಾಟ ಮಾಡುವ ಸ್ಥಳಗಳಲ್ಲಿ ಜನರು ಹೆಚ್ಚು ಆಹಾರ ಸೇವಿಸುತ್ತಾರೆ. ಈ ಸ್ಥಳಗಳಲ್ಲಿ ಮುಂದಿನ ದಿನಗಳಲ್ಲಿ ಆಹಾರ ಗುಣಮಟ್ಟದ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ತಿಳಿಸಿದರು. ಆಹಾರ ಸುರಕ್ಷತಾ ಕಚೇರಿಯ ಎಫ್‌ಎಸ್‌ಎಸ್‌ಎಐ ವೆಬ್‌ಸೈಟ್‌ನಲ್ಲಿ 1.5 ಕೋಟಿ ರೂ.ಕ್ಕಿಂತ ಹೆಚ್ಚಿನ ವಹಿವಾಟು ಮಾಡುವ ಆಹಾರ ಮಾರಾಟಗಾರರು ಅರ್ಜಿ ಸಲ್ಲಿಸಿ ಪರವಾನಗಿ ಪಡೆಯಬೇಕು 1.5 ಕೋಟಿಕ್ಕಿಂತ ಕಡಿಮೆ ವಹಿವಾಟು ಮಾಡುವವರು ನೋಂದಣಿ ಮಾಡಿಕೊಳ್ಳಬೇಕು ಎಂದರು.

ಕುರುಕಲು ತಿಂಡಿ ಸೇರಿದಂತೆ ಹಲವಾರು ಆಹಾರ ಪದಾರ್ಥಗಳನ್ನು ಎರಡು, ಮೂರು ಅಥವಾ ಹೆಚ್ಚು ಬಾರಿ ಎಣ್ಣೆ ಕಾಯಿಸಿ ಬಳಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೋಟೆಲ್, ಆಹಾರ ಮಾರಾಟ ಅಂಗಡಿಗಳಲ್ಲಿ ಪರಿಶೀಲಿಸಿದಾಗ ತೀವ್ರ ನಿಗಾ ವಹಿಸಿ, ರಾಸಾಯನಿಕ ಪರೀಕ್ಷೆಗೆ ಒಳಪಡಿಸುವುದರ ಜೊತೆಗೆ ಮಾರಾಟಗಾರರು ಎಣ್ಣೆ ಖರೀದಿಸಿರುವುದು, ಬಳಸಿರುವುದು, ಉಳಿಕೆಯನ್ನು ವಿಲೇವಾರಿ ಮಾಡಿರುವುದನ್ನು ಪರಿಶೀಲಿಸಿ ಎಂದರು.

ಮೈಸೂರು ಮಹಾ ನಗರಪಾಲಿಕೆ ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತದ ಅಂಕಿತ ಅಧಿಕಾರಿ ಡಾ.ರವೀಂದ್ರ ಮಾತನಾಡಿ, ಇಲಾಖೆಯಿಂದ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಒಟ್ಟು 24 ಪ್ರಕರಣಗಳನ್ನು ದಾಖಲಿಸಲಾಗಿದೆ. 6 ಪ್ರಕರಣಗಳು ಇತ್ಯರ್ಥವಾಗಿ 70000 ದಂಡ ವಿಧಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಗೋಪಿನಾಥ್ , ಮೈಸೂರು ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆ ಅಧ್ಯಕ್ಷ ಲಿಂಗರಾಜು, ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲ ಎಸ್.ಹೆಚ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು,ಏ.8–ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಏ.14ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಮೊಹಲ್ಲಾದ ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗೆ ಹೆಚ್.ಎಸ್. ಬಸವರಾಜ್, ಮೊ.94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.

ಬೆಳಗ್ಗೆ 10ರಿಂದ ಮಧ್ಯಾಹ್ನ 12 ರವರೆಗೆ ಆಯುಷ್ಮಾನ್ ಕಾರ್ಡ್ ಮಾಡಿಕೊಡಲಾಗುವುದು. ಆಸಕ್ತಿವುಳ್ಳವರು (69 ವರ್ಷದ ಒಳಗಿರುವವರಿಗೆ) ರೇಷನ್ ಕಾರ್ಡ್, ಎಪಿಎಲ್, ಬಿಪಿಎಲ್, ಆಧಾರ್ ಕಾರ್ಡ್, ಫೋನ್ ನಂ., ಫೋಟೋ ತರಬೇಕು. 70 ವರ್ಷ ಮೇಲ್ಪಟ್ಟವರು: ಆಧಾರ್ ಕಾರ್ಡ್, ಫೋನ್ ನಂ., ಫೋಟೋ ತರಬೇಕು. 60 ವರ್ಷ ಮೇಲ್ಪಟ್ಟವರಿಗೆ ಹಿರಿಯ ನಾಗರಿಕರ ಗುರುತಿನ ಚೀಟಿ ಮಾಡಿಕೊಡಲಾಗುವುದು. ಬೇಕಾಗಿರುವ ದಾಖಲೆಗಳು: ಆಧಾರ್ ಕಾರ್ಡ್, ಫೋಟೋ, ರಕ್ತದ ಗುಂಪಿನ ದಾಖಲೆ (ಇದ್ದಲ್ಲಿ) ತರಬೇಕು.

ದಿವ್ಯಾ, ರೇವತಿ ಕೃಷ್ಣಪ್ಪ, ಪೂರ್ಣಿಮಾ ಅವರಿಗೆ ಮಹಿಳಾ ರತ್ನ ಪ್ರಶಸ್ತಿ ಪ್ರದಾನ





ಮೈಸೂರು,ಏ.8–ಪಿಆರ್‌ಕೆ ಫೌಂಡೇಶನ್ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ ನೀಡುತ್ತಿರುವ ಮಹಿಳಾ ರತ್ನ ಪ್ರಶಸ್ತಿ 2026 ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಏ.10ರಂದು ಚಾಮುಂಡಿಪುರಂನಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮರುಣಾ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್ 1ನ ದಿವ್ಯ ಎಂ, ಬೈರವಿ ಗೌಡತಿಯರ ಬಳಗದ ಅಧ್ಯಕ್ಷರಾದ ರೇವತಿ ಕೃಷ್ಣಪ್ಪ ಹಾಗೂ ಸಮಾಜ ಸೇವಕಿ ಪೂರ್ಣಿಮಾ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಫೌಂಡೇಶನ್ ಅಧ್ಯಕ್ಷ ಅಯ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಗ್ರಾಮೀಣ ಪುನರ್ವಸತಿ ಕಾರ್ಯಕರ್ತರ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು: ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮದಡಿಯಲ್ಲಿ ಹುಣಸೂರು ತಾಲೂಕಿನ ಹನಗೋಡು, ಹರವೆ ಗ್ರಾಪಂ ವ್ಯಾಪ್ತಿಯಲ್ಲಿ ಖಾಲಿಯಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರನ್ನು ಮಾಸಿಕ ರೂ.10000 ಗೌರವಧನದ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ನೇಮಕಾತಿ ಸಂಬಂಧ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ವಿಕಲಚೇತನ ವ್ಯಕ್ತಿಗಳು ಏ.8ರಿಂದ 20ರವರಗೆ ಅರ್ಜಿ ನಮೂನೆಯನ್ನು ಸಂಬಂಧಪಟ್ಟ ತಾಲೂಕು ಪಂಚಾಯಿತಿಯಲ್ಲಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರಿಂದ ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಏ.23 ರಂದು ಸಂಜೆ 5 ಗಂಟೆಯೊಳಗೆ ಸಂಬಂಧಪಟ್ಟ ಕಛೇರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೇವರಾಜು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು, ಹುಣಸೂರು ತಾಲೂಕು ಇವರ ಮೊ.ಸಂ: 9739644342 ಅನ್ನು ಸಂಪರ್ಕಿಸುವುದು.

ಏ.15ಕ್ಕೆ ಪ್ರಧಾನಿ ಮೋದಿ ಆದಿಚುಂಚನಗಿರಿ ಮಠಕ್ಕೆ ಭೇಟಿ

- ಅಂದು ಬಾಲಗಂಗಾಧರನಾಥರ ಮಂದಿರ ಉದ್ಘಾಟನೆ
- ಈ ವೇಳೆ ದೇವಾಲಯಕ್ಕೆ ಭಕ್ತರಿಗಿಲ್ಲ ಪ್ರವೇಶ



ನಾಗಮಂಗಲ, ಏ.8– ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಧಾರ್ಮಿಕ ಮತ್ತು ಆಧ್ಯಾತ್ಮಿಕ ಪುಣ್ಯ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಡಾ.ಬಾಲಗಂಗಾಧರ ನಾಥ ಶ್ರೀಗಳ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿಯವರು ಏ.15ರಂದು ಲೋಕಾರ್ಪಣೆ ಮಾಡಲಿದ್ದಾರೆ. ಮೋದಿ ಭೇಟಿ ಹಿನ್ನೆಲೆಯಲ್ಲಿ ಏ.15ರಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ದೇವಾಲಯ ಪ್ರವೇಶಕ್ಕೆ ಸಾರ್ವಜನಿಕರಿಗೆ ನಿರ್ಬಂಧ ವಿಧಿಸಲಾಗಿದೆ.

ಶ್ರೀಕ್ಷೇತ್ರದಲ್ಲಿ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರದಲ್ಲಿ ಡಾ.ಬಾಲಗಂಗಾಧರನಾಥ ಶ್ರೀಗಳ ಮೂಲ ವಿಗ್ರಹ ಪ್ರಾಣ ಪ್ರತಿಷ್ಠಾಪನಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಏ.10ರಿಂದ 15ರವರೆಗೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ಜರುಗಲಿವೆ. ಏ.15ರಂದು ಬೆಳಗ್ಗೆ ಶ್ರೀಗುರು ಭೈರವೈಕ್ಯ ಮಂದಿರವನ್ನು ಮೋದಿ ಉದ್ಘಾಟಿಸಲಿದ್ದಾರೆ. ಬಳಿಕ, ಬಿಜಿಎಸ್ ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜಿಸಲಾಗಿದೆ. ಶ್ರೀಗಳ ಆಶಯದಂತೆ 175 *150 ಅಡಿ ವಿಸ್ತೀರ್ಣದಲ್ಲಿ ಕೆಂಪು ಶಿಲೆ ಮತ್ತು ವಿವಿಧ ಬಗೆಯ ಶಿಲಾ ಕಲ್ಲುಗಳಿಂದ ಶ್ರೀಗುರು ಭೈರವೈಕ್ಯ ಮಂದಿರ ನಿರ್ಮಾಣಗೊಂಡಿದೆ.

ಬಸವ ಜಯಂತಿ ಮೆರವಣಿಗೆ ಯಶಸ್ಸಿಗೆ ಸಿದ್ಧತಾ ಸಮಿತಿಯ ಸಭೆಯಲ್ಲಿ ರೂಪುರೇಷೆ ನಿರ್ಧಾರ



ಬಸವ ಜಯಂತಿ–2026ರ ಮೆರವಣಿಗೆ ಸಮಿತಿ ಪದಾಧಿಕಾರಿಗಳ ಸಭೆ.

ಮೈಸೂರು,ಏ.8–ಬಸವ ಜಯಂತಿ–2026ರ ಅಂಗವಾಗಿ ಮೆರವಣಿಗೆ ಸಮಿತಿ ಪದಾಧಿಕಾರಿಗಳ ಮಹತ್ವದ ಸಭೆ ಸಮಿತಿ ಅಧ್ಯಕ್ಷ ಕೆ.ವಿ.ಮಲ್ಲೇಶ್ ಅವರ ಸಮ್ಮುಖ ಹಾಗೂ ಬಸವ ಜಯಂತಿ ಅಧ್ಯಕ್ಷ ಎಂ. ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ನಡೆಯಿತು.

ಪದಾಧಿಕಾರಿಗಳು ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ ಎ.ಪಿ.ವಿರುಪಾಕ್ಷ, ಸಂಚಾಲಕ ದೇವರಾಜು ಚಿಕ್ಕಹಳ್ಳಿ, ಮೆರವಣಿಗೆ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಎಂ. ಸುರೇಶ್, ಉಪಾಧ್ಯಕ್ಷ ಪ್ರಸಾದ್ ಬಾಬು, ರವಿಶಂಕರ್ ಹಾಗೂ ಅಂಬಳೆ ಶಿವಾನಂದ ಸ್ವಾಮಿ ಉಪಸ್ಥಿತರಿದ್ದು, ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಸಭೆಯಲ್ಲಿ ಬಸವ ಜಯಂತಿ ಮೆರವಣಿಗೆಯನ್ನು ಹೇಗೆ ಹೆಚ್ಚು ಶಿಸ್ತು ಹಾಗೂ ಭವ್ಯವಾಗಿ ಆಯೋಜಿಸಬೇಕು ಎಂಬ ಕುರಿತು ಸವಿಸ್ತಾರವಾಗಿ ಚರ್ಚಿಸಲಾಯಿತು. ಮೆರವಣಿಗೆಯ ಮಾರ್ಗ, ಭಾಗವಹಿಸುವ ಸಂಘಟನೆಗಳ ವ್ಯವಸ್ಥೆ, ಭದ್ರತಾ ಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳ ಅಳವಡಿಕೆ ಸೇರಿದಂತೆ ವಿವಿಧ ವಿಷಯಗಳಲ್ಲಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಕೆ.ವಿ.ಮಲ್ಲೇಶ್ ಮಾತನಾಡಿ, ಬಸವಣ್ಣನವರ ಸಂದೇಶಗಳನ್ನು ಜನಸಾಮಾನ್ಯರಿಗೆ ತಲುಪಿಸುವುದು ನಮ್ಮ ಪ್ರಮುಖ ಉದ್ದೇಶ. ಮೆರವಣಿಗೆ ಕೇವಲ ಆಚರಣೆ ಮಾತ್ರವಲ್ಲ, ಅದು ಸಮಾಜಕ್ಕೆ ದಾರಿದೀಪವಾಗಬೇಕು ಎಂದು ಹೇಳಿದರು.

ಎಂ. ಚಂದ್ರಶೇಖರ್, ಪ್ರತಿ ಸದಸ್ಯರು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿದರೆ, ಈ ವರ್ಷದ ಬಸವ ಜಯಂತಿ ರಾಜ್ಯ ಮಟ್ಟದಲ್ಲಿ ಮಾದರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಸ್.ಎಂ.ಸುರೇಶ್ ಅವರು ಕಾರ್ಯಕ್ರಮದ ಕಾರ್ಯಪದ್ಧತಿ ಹಾಗೂ ಸಮನ್ವಯದ ಮಹತ್ವವನ್ನು ವಿವರಿಸಿ, ಎಲ್ಲರ ಸಹಕಾರವನ್ನು ಕೋರಿದರು. ಈ ಸಂದರ್ಭದಲ್ಲಿ ವಕೀಲರಾದ ರಾಜಶೇಖರ್, ಶಿವಕುಮಾರ್, ಸುರೇಶ್, ಪ್ರತಿಧ್ವನಿ ಪ್ರಸಾದ್, ಮಂಜುನಾಥ್, ಶಿವಪ್ರಭು, ಮಹದೇವಪ್ಪ, ರವಿಪ್ರಕಾಶ್ ಸೇರಿದಂತೆ ಅನೇಕ ಸಮಾಜದ ಮುಖಂಡರು ಸಭೆಯಲ್ಲಿ ಭಾಗವಹಿಸಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಇಂದು ಮೈಸೂರು, ಮಂಡ್ಯ ರೈಲ್ವೆ ನಿಲ್ದಾಣಕ್ಕೆ ಕೇಂದ್ರ ಸಚಿವರಾದ ಕುಮಾರಸ್ವಾಮಿ, ಸೋಮಣ್ಣ ಭೇಟಿ

ಅಭಿವೃದ್ಧಿ ಕಾರ್ಯಗಳ ಬಗ್ಗೆ ಸ್ಥಳ ಪರಿಶೀಲನೆ




ಮೈಸೂರು ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡುವ ಕುಮಾರಸ್ವಾಮಿ ಹಾಗೂ ಸೋಮಣ್ಣ ಅಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸುವರು. ನಾಳೆ ಮೈಸೂರಿನಲ್ಲೇ ವಾಸ್ತವ್ಯ ಹೂಡುವ ಕುಮಾರಸ್ವಾಮಿ, ನಾಡಿದ್ದು (ಏಪ್ರಿಲ್ 10) ಬೆಳಿಗ್ಗೆ 7 ಗಂಟೆಗೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆಯಲಿದ್ದಾರೆ. ಬಳಿಕ ಮೈಸೂರು ಜಿಪ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯುವ ದಿಶಾ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 3 ಗಂಟೆಗೆ ಮೈಸೂರಿಂದ ಬೆಂಗಳೂರಿಗೆ ನಿರ್ಗಮಿಸಲಿದ್ದಾರೆ.

ಮೈಸೂರು, ಏ.8(ಬಿಎಲ್‌ಯು)– ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ನಾಳೆ (ಏಪ್ರಿಲ್ 9) ಮಂಡ್ಯ ಹಾಗೂ ಮೈಸೂರು ರೈಲ್ವೆ ನಿಲ್ದಾಣಗಳಿಗೆ ಭೇಟಿ ನೀಡಿ, ಇಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲನೆ ನಡೆಸಲಿದ್ದಾರೆ.

ನಾಳೆ ಮಧ್ಯಾಹ್ನ 12 ಗಂಟೆಗೆ ಮಂಡ್ಯ ರೈಲ್ವೆ ನಿಲ್ದಾಣದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲನೆ ನಡೆಸಲಿದ್ದಾರೆ. ತರುವಾಯ ಎಲಿಯೂರು, ಬ್ಯಾಡರಹಳ್ಳಿ, ಪಾಂಡವಪುರ, ಶ್ರೀರಂಗಪಟ್ಟಣ ರೈಲ್ವೆ ನಿಲ್ದಾಣಗಳಲ್ಲಿ ಪರಿಶೀಲನೆ ನಡೆಸಿ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಿದ್ದಾರೆ. ಮಂಡ್ಯದ ನಾಲ್ಕು ರೈಲ್ವೆ ನಿಲ್ದಾಣಗಳಿಗೆ ಭೇಟಿ ವೇಳೆ ಕುಮಾರಸ್ವಾಮಿ ಸಾರ್ವಜನಿಕರ ಅಹವಾಲು ಸ್ವೀಕರಿಸಲಿದ್ದಾರೆ. ತರುವಾಯ ಮಧ್ಯಾಹ್ನ 2.30ಕ್ಕೆ

ಯೋಗ ಗುರು ಡಾ.ರಾಘವೇಂದ್ರ ಪೈಗೆ ಸನ್ಮಾನ



ಖ್ಯಾತ ಯೋಗ ಗುರು ಡಾಕ್ಟರ್ ರಾಘವೇಂದ್ರ ಪೈ ಅವರು ಅಮೆರಿಕದ ವ್ಯಾಸಭಾರತಿ ತ್ರಿಯೋಗ ವಿಶ್ವವಿದ್ಯಾಲಯ ಉಪಕುಲಪತಿಯಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ನಗರದಲ್ಲಿರುವ ಅವರ ಯೋಗ ಕೇಂದ್ರದಲ್ಲಿ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ, ಅಪೂರ್ವ ಸುರೇಶ್, ಸಂದೇಶ್ ಪವಾರ್, ಗಗನ್‌ಗೌಡ, ಚಂದ್ರು, ಮುರಳಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗುಜರಾತ್ ಟೈಟನ್ಸ್ ವಿರುದ್ಧ ಡೆಲ್ಲಿಗೆ ವಿರೋಚಿತ ಸೋಲು



ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 1 ರನ್‌ನಿಂದ ಮಣಿಸಿದ ಗುಜರಾತ್ ಟೈಟನ್ಸ್ ತಂಡದ ಆಟಗಾರರ ಸಂಭ್ರಮ

ಡೆಲ್ಲಿ, ಏ.8(ವಿವಿಹೆಚ್)– ಕನ್ನಡಿಗ ಪ್ರಸಿದ್ಧ್ ಕೃಷ್ಣ ಅವರ ಕರಾರುವಕ್ಕಾದ ಬೌಲಿಂಗ್ ದಾಳಿಯ ನೆರವಿನಿಂದ ಗುಜರಾತ್ ಟೈಟನ್ಸ್, ಅತಿಥೇಯ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 1 ರನ್‌ನಿಂದ ಮಣಿಸಿತು.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್–2026ರ 14ನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 210 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 209 ರನ್ ಗಳಿಸಿ 1 ರನ್ ವಿರೋಚಿತ ಸೋಲನನುಭವಿಸಿತು.

ಮೊದಲು ಬ್ಯಾಟ್ ಮಾಡಿದ ಜಿಟಿ ಪರ ಸಾಯಿ ಸುದರ್ಶನ್ 12 ರನ್‌ಗೆ ಔಟಾಗಿ ಆರಂಭಿಕ ಹಿನ್ನಡೆ ತಂದುಕೊಟ್ಟರು. ಉತ್ತಮ ಲಯದಲ್ಲಿ ಬ್ಯಾಟ್ ಬೀಸಿದ ನಾಯಕ ಶುಬ್‌ಮನ್ ಗಿಲ್ 45 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸರ್ ಸಹಿತ 70 ರನ್ ಬಾರಿಸಿದರು.

ಉಳಿದಂತೆ ಜೋಶ್ ಬಟ್ಲರ್ 27 ಎಸೆತಗಳಲ್ಲಿ 3 ಬೌಂಡರಿ ಹಾಗೂ 5 ಸಿಕ್ಸರ್ ಸಹಿತ 52 ರನ್, ವಾಷಿಂಗ್ಟನ್ ಸುಂದರ್ 32 ಎಸೆತಗಳಲ್ಲಿ 6 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 55 ರನ್, ಗ್ಲೆನ್ ಫಿಲಿಪ್ಸ್ ಅಜೇಯ 14 ರನ್ ಹಾಗೂ ರಾಹುಲ್ ತೆವಾಟಿಯಾ ಅಜೇಯ 1 ರನ್ ಗಳಿಸಿದರು.

ಡೆಲ್ಲಿ ಪರ ಮುಕೇಶ್ ಕುಮಾರ್ 2 ವಿಕೆಟ್, ಲುಂಗಿ ಎನ್‌ಗಿಡಿ ಹಾಗೂ ಕುಲ್‌ದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಡೆಲ್ಲಿಗೆ ಭರ್ಜರಿ ಆರಂಭ ದೊರೆಯಿತು. ಪಥುಮ್ ನಿಸ್ಸಂಕಾ 24 ಎಸೆತಗಳಲ್ಲಿ 41, ಕೆ.ಎಲ್.ರಾಹುಲ್ 52 ಎಸೆತ 11 ಬೌಂಡರಿ, 4 ಸಿಕ್ಸರ್ ಸಹಿತ 92 ರನ್ ಬಾರಿಸಿದರು. ಈ ಜೋಡಿ ಮೊದಲ ವಿಕೆಟ್‌ಗೆ 76ರನ್‌ಗಳ ಜೊತೆಯಾಟ ನೀಡಿದರು.

ಇತ್ತ ಈ ಜೋಡಿ ಬಳಿಕ ದಿಢೀರ್ ಮಧ್ಯಮ ಕ್ರಮಾಂಕ ಕುಸಿತದಿಂದ ತಂಡ ಮತ್ತೆ ಸಂಕಷ್ಟಕ್ಕೆ ಸಿಲುಕಿತು. ನಿತೀಶ್ ರಾಣಾ 2, ಸಮೀರ್ ರಿಜ್ವಿ ಗೋಲ್ಡನ್ ಡಕ್, ನಾಯಕ ಅಕ್ಷರ್ ಪಟೇಲ್ 2, ಟ್ರಿಸ್ಟನ್ ಸ್ಟಬ್ಸ್ 7 ರನ್ ಗಳಿಸಿ ಪೆವಿಲಿಯನ್ ಸೇರಿದರು. ಇತ್ತ ಛಲ ಬಿಡದೇ ಬ್ಯಾಟ್ ಬೀಸಿದ ಡೇವಿಡ್ ಮಿಲ್ಲರ್ 20 ಎಸೆತಗಳಲ್ಲಿ ಅಜೇಯ 40 ರನ್ ಬಾರಿಸಿಯ ಪಂದ್ಯವನ್ನು ಗೆಲ್ಲಿಸಿಕೊಡಲು ಸಾಧ್ಯವಾಗಲಿಲ್ಲ.

ಕೊನೆಯ ಓವರ್‌ಗೆ 13 ರನ್ ಬೇಕಿದ್ದ ವೇಳೆ ಮಿಂಚಿನ ಬೌಲಿಂಗ್ ದಾಳಿ ನಡೆಸಿದ ಕನ್ನಡಿಗ ಪ್ರಸಿದ್ಧ ಕೃಷ್ಣ ಗುಜರಾತ್‌ಗೆ 1 ರನ್ ಜಯ ತಂದುಕೊಟ್ಟರು. ಚಾಣಾಕ್ಷತನದಿಂದ ಕುಲ್‌ದೀಪ್ ಯಾದವ್‌ರನ್ನು ರನ್‌ಔಟ್ ಮಾಡಿದ ಜೋಸ್ ಬಟ್ಲರ್ ಗುಜರಾತ್ ಪಾಲಿಗೆ ವರದಾನವಾದರು.

ಗುಜರಾತ್ ಪರ ರಶೀದ್ ಖಾನ್ 3, ಪ್ರಸಿದ್ಧ್ ಕೃಷ್ಣ 2 ಹಾಗೂ ಮೊಹಮ್ಮದ್ ಸಿರಾಜ್ ಒಂದು ವಿಕೆಟ್ ಪಡೆದು ಮಿಂಚಿದರು.

ಇಂದು ಯೋಗೇಶ್ ಗೌಡ ಕೊಲೆ ಪ್ರಕರಣದ ತೀರ್ಪು: ಮಾಜಿ ಸಚಿವ ವಿನಯ್ ಕುಲಕರ್ಣಿ ಭವಿಷ್ಯ ನಿರ್ಧಾರ

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ಧಾರವಾಡ ನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಹಾಗೂ ಮಾಜಿ ಸಚಿವ ವಿನಯ್ ಕುಲಕರ್ಣಿ ಭವಿಷ್ಯ ಗುರುವಾರ ನಿರ್ಧಾರವಾಗಲಿದೆ.

2016ರ ಜೂನ್ 15 ರಂದು ನಡೆದ ಧಾರವಾಡ ಜಿಪಂ ಮಾಜಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಾಳೆ ತೀರ್ಪು ಪ್ರಕಟಿಸಲಿದೆ.

ಕಳೆದ ಮಾರ್ಚ್ ಕೊನೆಯ ವಾರದಲ್ಲಿ ವಾದ, ಪ್ರತಿವಾದ ಆಲಿಸಿದ್ದ ನ್ಯಾಯಾಲಯ, ಪ್ರಾಸಿಕ್ಯೂಷನ್ ಮತ್ತು ಆರೋಪಿಗಳ ಪರ ವಕೀಲರಿಗೆ ಹೆಚ್ಚುವರಿ ಲಿಖಿತ ವಾದ ಸಲ್ಲಿಕೆ ಮಾಡಲು ಅವಕಾಶ ನೀಡಿತ್ತು. ಅದರಂತೆ ಏ.2 ರಂದು ಎಲ್ಲರೂ ಲಿಖಿತ ವಾದ ಸಲ್ಲಿಸಿದ ಬಳಿಕ ಏ.9ಕ್ಕೆ ತೀರ್ಪು ಪ್ರಕಟ ಮಾಡುವುದಾಗಿ ಕೋರ್ಟ್ ಹೇಳಿತ್ತು. ತೀರ್ಪು ಪ್ರಕಟಣೆ ದಿನ ಎಲ್ಲಾ 21 ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಾಗಬೇಕಿದೆ.

ದೇಶ - ವಿದೇಶ

ಆದಷ್ಟು ಬೇಗನೆ ಇರಾನ್‌ನಿಂದ ನಿರ್ಗಮಿಸಿ: ಭಾರತೀಯರಿಗೆ ನಿರ್ದೇಶನ



ನವದೆಹಲಿ: ಅಮೆರಿಕ ಹಾಗೂ ಇರಾನ್ ನಡುವೆ ತಾತ್ಕಾಲಿಕ ಕದನ ವಿರಾಮ ಏರ್ಪಟ್ಟಿರುವ ಬೆನ್ನಲ್ಲೇ ಇರಾನ್‌ನಿಂದ ಆದಷ್ಟು ಬೇಗನೇ ನಿರ್ಗಮಿಸುವಂತೆ ಭಾರತೀಯ ನಾಗರಿಕರಿಗೆ ನಿರ್ದೇಶನ ನೀಡಲಾಗಿದೆ. ಯುದ್ಧಪೀಡಿತ ಪ್ರದೇಶದಿಂದ ಸಾಧ್ಯವಾದಷ್ಟು ಬೇಗ ನಿಗರ್ಮಿಸುವಂತೆ ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ರಾಯಭಾರ ಕಚೇರಿಯೊಂದಿಗೆ ಸಮನ್ವಯ ಸಾಧಿಸಿ ಇರಾನ್‌ನಲ್ಲಿರುವ ಭಾರತೀಯ ನಾಗರಿಕರು ಆದಷ್ಟು ಬೇಗನೇ ನಿರ್ಗಮಿಸಬೇಕು. ಅಲ್ಲದೆ ರಾಯಭಾರ ಕಚೇರಿಯೊಂದಿಗೆ ಸಮನ್ವಯ ಸಾಧಿಸದೆ ಯಾವುದೇ ಅಂತರರಾಷ್ಟ್ರೀಯ ಗಡಿಯನ್ನು ದಾಟಲು ಯತ್ನಿಸಬಾರದು ಎಂದು ಹೇಳಿದೆ. ಈ ಸಂಬಂಧ ತುರ್ತು ಸಹಾಯವಾಣಿ ಸಂಖ್ಯೆ +989128109115, +989128109109, +989128109102, +98993 2179359 ಅಥವಾ ಇಮೇಲ್–cons.tehran@mea. gov.in ಸಂಪರ್ಕಿಸುವುದು. ಗಡುವು ಮೀರಿದರೆ ಇರಾನ್ ಸರ್ವನಾಶ ಮಾಡುವುದಾಗಿ ಅಮೆರಿಕದ ಅಧ್ಯಕ್ಷ ಟ್ರಂಪ್ ಎಚ್ಚರಿಕೆ ನೀಡಿದ್ದರು. ಇದಾದ ಬೆನ್ನಲ್ಲೇ 48 ತಾಸು ಇದ್ದಲ್ಲೇ ಇರುವಂತೆಯೇ ಭಾರತೀಯರಿಗೆ ತುರ್ತು ಸಲಹೆ ನೀಡಲಾಗಿತ್ತು. ಅನಿರೀಕ್ಷಿತ ವೆಂಬಂತೆ ಪಾಕಿಸ್ತಾನ ಮಧ್ಯಸ್ಥಿಕೆಯಲ್ಲಿ ನಡೆದ ಮಾತುಕತೆಯಲ್ಲಿ ಅಮೆರಿಕ–ಇರಾನ್ ನಡುವೆ 2 ವಾರ ತಾತ್ಕಾಲಿಕ ಕದನ ವಿರಾಮ ಏರ್ಪಟ್ಟಿತ್ತು. ಇದರಿಂದ ಪಶ್ಚಿಮ ಏಷ್ಯಾದಲ್ಲಿ ಬಿಕ್ಕಟ್ಟು ಅಲ್ಪ ಶಮನಗೊಂಡಿದೆ.

ಕದನ ವಿರಾಮ ಘೋಷಣೆಯಲ್ಲೂ ಎಡವಟ್ಟು; ಪಾಕ್ ಪ್ರಧಾನಿ ಟ್ರೋಲ್



ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವೆ ಕದನ ವಿರಾಮ ಘೋಷಣೆ ಮಾಡಿ ದೊಡ್ಡ ಸಾಧನೆ ಮಾಡಿದಂತೆ ಬಿಂಬಿಸುತ್ತಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಈಗ ಸಾಮಾಜಿಕ ಜಾಲತಾಣದಲ್ಲಿ ಟ್ರೋಲ್ ಆಗುತ್ತಿದ್ದಾರೆ. ಷರೀಫ್ ಅವರು ಎಕ್ಸ್‌ನಲ್ಲಿ ಹಾಕಿದ ಪೋಸ್ಟ್‌ನ ಆರಂಭದಲ್ಲಿ Draft ? Pakistan's PM Message on X" ಎಂಬ ಸಾಲು ಹಾಗೆಯೇ ಇತ್ತು. ಅಂದರೆ ಯಾರೋ ಬೇರೆಯವರು ಸಿದ್ಧಪಡಿಸಿಕೊಟ್ಟಿದ್ದ ಸಂದೇಶವನ್ನು ಅವರ ಅಧಿಕಾರಿಗಳು ಹಾಗೆಯೇ ಕಾಪಿ ಪೇಸ್ಟ್ ಮಾಡಿದ್ದಾರೆ ಎನ್ನುವುದು ಅಧಿಕೃತವಾಗಿ ಬಹಿರಂಗವಾಗಿದೆ. ಡ್ರಾಫ್ಟ್ ಪೋಸ್ಟ್ ವಿವಾದದಿಂದಾಗಿ ಪಾಕಿಸ್ತಾನದ ರಾಜತಾಂತ್ರಿಕ ಸಂವಹನದ ಮೇಲಿನ ವಿಶ್ವಾಸಾರ್ಹತೆಯನ್ನು ನೆಟ್ಟಿಗರು ಪ್ರಶ್ನಿಸುತ್ತಿದ್ದಾರೆ. Pakistan PM Shehbaz Sharif gets trolled over post on US Iran ceasefire

ಈ ತಪ್ಪಿನಿಂದಾಗಿ, ಪ್ರಧಾನಿ ಷರೀಫ್ ಸ್ವತಃ ಸಂದೇಶ ಬರೆಯುತ್ತಿಲ್ಲ, ಬದಲಿಗೆ ಅಮೆರಿಕದ ಅಧಿಕಾರಿಗಳು ಸಿದ್ಧಪಡಿಸಿದ ಸ್ಕ್ರಿಪ್ಟ್ ಅನ್ನು ಪೇಸ್ಟ್ ಮಾಡಿದ್ದಾರೆ ಎಂದು ನೆಟ್ಟಿಗರು ಟ್ರೋಲ್ ಮಾಡುತ್ತಿದ್ದಾರೆ. ಪೋಸ್ಟ್ ಅನ್ನು ತಕ್ಷಣವೇ ಎಡಿಟ್ ಮಾಡಿ ಆ ಸಾಲನ್ನು ತೆಗೆದುಹಾಕಿದರೂ, ಎಕ್ಸ್‌ನ 'ಎಡಿಟ್ ಹಿಸ್ಟರಿ'ಯಲ್ಲಿ ಈ ತಪ್ಪು ಸ್ಪಷ್ಟವಾಗಿ ದಾಖಲಾಗಿದೆ. ಇದರ ಸ್ಕ್ರೀನ್‌ಶಾಟ್‌ಗಳು ಈಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ.

ನಾಳೆ ಕೇರಳ, ಅಸ್ಸಾಂ, ಪುದುಚೇರಿ ಚುನಾವಣೆ: ಮೇ 4ಕ್ಕೆ ಫಲಿತಾಂಶ




ನವದೆಹಲಿ: ಅಸ್ಸಾಂ, ಕೇರಳ ಮತ್ತು ಪುದುಚೇರಿಯಲ್ಲಿ ಏ.9ರಂದು ಒಂದೇ ಹಂತದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಮೇ 4ರಂದು ಫಲಿತಾಂಶ ಪ್ರಕಟವಾಗಲಿದೆ. ಅಸ್ಸಾಂನ 126, ಕೇರಳದ 140, ಪುದುಚೇರಿಯ 30 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಅಸ್ಸಾಂನಲ್ಲಿ ಒಟ್ಟು 25 ಮಿಲಿಯನ್ ಮತದಾರರಿದ್ದಾರೆ. ಇದರಲ್ಲಿ 12.5 ಮಿಲಿಯನ್ ಪುರುಷರು, 12.5 ಮಿಲಿಯನ್ ಮಹಿಳೆಯರು, 343 ತೃತೀಯ ಲಿಂಗಿಗಳಿದ್ದಾರೆ. 18–19 ವರ್ಷ ವಯಸ್ಸಿನ 57.5 ಮಿಲಿಯನ್ ಯುವಕರು ಮೊದಲ ಬಾರಿಗೆ ಮತ ಚಲಾಯಿಸಲಿದ್ದಾರೆ.

ಕೇರಳ ವಿಧಾನಸಭೆಯ 140 ಸ್ಥಾನಗಳಿಗೆ 890 ಮಂದಿ ಸ್ಪರ್ಧಿಸುತ್ತಿದ್ದಾರೆ. ಸರ್ಕಾರ ರಚಿಸಲು 71 ಸ್ಥಾನಗಳ ಬಹುಮತದ ಅಗತ್ಯವಿದೆ. ರಾಜ್ಯವು ಒಟ್ಟು 27.1 ಮಿಲಿಯನ್ ಮತದಾರರನ್ನು ಹೊಂದಿದ್ದು, ಇದರಲ್ಲಿ 13.2 ಮಿಲಿಯನ್ ಪುರುಷರು, 13.9 ಮಿಲಿಯನ್ ಮಹಿಳೆಯರು ಮತ್ತು 273 ತೃತೀಯ ಲಿಂಗಿ ಮತದಾರರು ಸೇರಿದ್ದಾರೆ.

ಪುದುಚೇರಿಯ 30 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಇದರಲ್ಲಿ 5 ಪರಿಶಿಷ್ಟ ಜಾತಿಗಳಿಗೆ ಮೀಸಲಾಗಿವೆ. ಸರ್ಕಾರ ರಚಿಸಲು 16 ಸ್ಥಾನಗಳ ಬಹುಮತದ ಅಗತ್ಯವಿದೆ. ಸುಮಾರು 4.43 ಲಕ್ಷ ಪುರುಷರು, 5 ಲಕ್ಷ ಮಹಿಳೆಯರು, 139 ತೃತೀಯ ಲಿಂಗದ ಮತದಾರರು ಸೇರಿದಂತೆ ಒಟ್ಟು 9.44 ಲಕ್ಷ ಮತದಾರರಿದ್ದಾರೆ.

ಕದನ ವಿರಾಮ ಘೋಷಣೆ: ಟೆಹ್ರಾನ್‌ನಲ್ಲಿ ವಿಜಯೋತ್ಸವ



ಟೆಹ್ರಾನ್: ಅಮೆರಿಕ ಹಾಗೂ ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ ಘೋಷಣೆ ಬೆನ್ನಲ್ಲೇ ಇರಾನ್ ಜನತೆ ರಾಷ್ಟ್ರಧ್ವಜ ಹಿಡಿದು ವಿಜಯೋತ್ಸವ ಆಚರಣೆ ಮಾಡಿದೆ. ಕದನ ವಿರಾಮ ಹಿನ್ನೆಲೆ ಟೆಹ್ರಾನ್‌ನ ಪ್ರಮುಖ ಬೀದಿಗಳಲ್ಲಿ ವಿಜಯೋತ್ಸವ ಆಚರಿಸಲಾಗಿದೆ.

ಜೀವ್ಸ್ ಹಾಗೂ ಅಮೆರಿಕನ್ನರ ಮೇಲೆ ನಮ್ಮ ಗೆಲುವಾಗಿದೆ ಎಂದು ಘೋಷಣೆ ಕೂಗುತ್ತಾ ಟೆಹ್ರಾನ್‌ನಲ್ಲಿ ಸಂಭ್ರಮಾಚರಣೆ ಮಾಡಿದ್ದಾರೆ.

ಮಹತ್ವದ ಬೆಳವಣಿಗೆಯಲ್ಲಿ ಅಮೆರಿಕ ಮತ್ತು ಇರಾನ್ ನಡುವೆ ಎರಡು ವಾರಗಳ ಕದನ ವಿರಾಮ ಘೋಷಣೆಯಾಗಿದೆ. ಇರಾನ್‌ಗೆ ನೀಡಿದ್ದ 48 ಗಂಟೆಗಳ ಡೆಡ್‌ಲೈನ್ ಅಮೆರಿಕ ಕಾಲಮಾನ ರಾತ್ರಿ 8 ಗಂಟೆಗೆ ಅಂತ್ಯವಾಗುವ ಒಂದು ಗಂಟೆಯ ಮೊದಲು ಟ್ರಂಪ್ ತಮ್ಮ ಟ್ರೂತ್ ಸಾಮಾಜಿಕ ಜಾಲತಾಣದಲ್ಲಿ ಈ ವಿಚಾರವನ್ನು ಬಹಿರಂಗಪಡಿಸಿದ್ದಾರೆ.

ಇಂದಿರಾ, ರಾಜೀವ್ ಗಾಂಧಿ ಸಂಪುಟದಲ್ಲಿ ಸಚಿವೆಯಾಗಿದ್ದ ಮೊಹ್ಸೀನಾ ಕಿದ್ವಾಯಿ ನಿಧನ



ನವದೆಹಲಿ: ಇಂದಿರಾ ಗಾಂಧಿ ಹಾಗೂ ರಾಜೀವ್ ಗಾಂಧಿ ಅವರ ಸಂಪುಟದಲ್ಲಿ ಸಚಿವೆಯಾಗಿ ಸೇವೆ ಸಲ್ಲಿಸಿದ್ದ ಮೊಹ್ಸೀನಾ ಕಿದ್ವಾಯಿ ಅವರು ನಿಧನರಾಗಿದ್ದಾರೆ. ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದ ಅವರು ತಮ್ಮ 94ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದಿದ್ದಾರೆ. ನಿಜಾಮುದ್ದೀನ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಅವರ ಅಳಿಯ ರಾಜಿ ಉರ್ ರೆಹಮಾನ್ ಕಿದ್ವಾಯಿ ತಿಳಿಸಿದ್ದಾರೆ.

1930ರ ಜ.1ರಂದು ಉತ್ತರಪ್ರದೇಶದ ಬಾರಾಬಂಕಿಯಲ್ಲಿ ಜನಿಸಿದ ಮೊಹ್ಸೀನಾ 1977ರಲ್ಲಿ ಮೀರತ್‌ನಿಂದ ಲೋಕಸಭೆಗೆ ಆಯ್ಕೆಯಾದರು. 1982ರಲ್ಲಿ ಮೊದಲ ಬಾರಿಗೆ ಕಾರ್ಮಿಕ ಸಚಿವರಾಗಿ (1982–83) ಕೇಂದ್ರ ಸಚಿವ ಸಂಪುಟಕ್ಕೆ ಸೇರ್ಪಡೆಯಾದರು. ಜೊತೆಗೆ ಆರೋಗ್ಯ–ಕುಟುಂಬ ಕಲ್ಯಾಣ (1983–84), ಗ್ರಾಮೀಣಾಭಿವೃದ್ಧಿ (1984), ಸಾರಿಗೆ (1986) ಮತ್ತು ನಗರಾಭಿವೃದ್ಧಿ (1986–89) ಸೇರಿದಂತೆ ವಿವಿಧ ನಿರ್ಣಾಯಕ ಖಾತೆಗಳನ್ನು ನಿರ್ವಹಿಸಿದರು. ನಂತರ 2004ರಿಂದ 2016ರವರೆಗೆ ರಾಜ್ಯಸಭಾ ಸಂಸದರಾಗಿ ಛತ್ತೀಸ್‌ಗಢವನ್ನು ಪ್ರತಿನಿಧಿಸಿದರು. ಮೊಹ್ಸೀನಾ ಕಿದ್ವಾಯಿ ಅವರ ನಿಧನಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಂತಾಪ ಸೂಚಿಸಿದ್ದಾರೆ. ಮಾಜಿ ಕೇಂದ್ರ ಸಚಿವೆ, ಮಾಜಿ ಸಂಸದೆ ಮೊಹ್ಸೀನಾ ಅವರು ಕಾಂಗ್ರೆಸ್ ಪಕ್ಷದ ಅತ್ಯಂತ ಹಿರಿಯ ಮತ್ತು ನಿಷ್ಠಾವಂತ ನಾಯಕಿಯಾಗಿದ್ದರು. ಅವರ ಸರಳತೆ, ಸೌಮ್ಯತೆ ಮತ್ತು ಗೌರವಾನ್ವಿತ ರಾಜಕೀಯ ಯಶಸ್ಸಿನಿಂದ ದೇಶದ ಹಲವಾರು ಮಹಿಳೆಯರಿಗೆ ಸ್ಫೂರ್ತಿ ನೀಡಿದರು ಎಂದು ಬರೆದುಕೊಂಡಿದ್ದಾರೆ.

ಕಾಡಾನೆ ದಾಳಿಗೆ ಸಿಲುಕಿ ಕಾಫಿ ಬೆಳೆಗಾರ ಸಾವು

ಮಡಿಕೇರಿ, ಏ.8–ತೋಟಕ್ಕೆ ತೆರಳುತ್ತಿದ್ದ ಕಾಫಿ ಬೆಳೆಗಾರರೊಬ್ಬರು ಕಾಡಾನೆ ದಾಳಿಗೆ ಸಿಲುಕಿ ಮೃತಪಟ್ಟ ಘಟನೆ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯಲ್ಲಿ ನಡೆದಿದೆ. ಇಲ್ಲಿನ ಕುರ್ಚಿ ಕಾಯಿಮಾನಿ ಬಳಿಯ ನಿವಾಸಿ ಮೂಕಳೇರ ರತ್ತು ಎಂಬವರೇ ಮೃತಪಟ್ಟ ದುರ್ದೈವಿಯಾಗಿದ್ದಾರೆ.

ಬೆಳಗ್ಗೆ 7 ಗಂಟೆ ಸಮಯದಲ್ಲಿ ಮನೆಯ ಸಮೀಪದ ತೋಟದ ಕಡೆಗೆ ತೆರಳುತ್ತಿದ್ದ ಸಂದರ್ಭ ಏಕಾಏಕಿ ಕಾಡಾನೆ ಎದುರಾಗಿ ಹಠಾತ್ ದಾಳಿ ನಡೆಸಿದೆ. ದಾಳಿಯಿಂದ ತೀವ್ರವಾಗಿ ಗಾಯಗೊಂಡ ಮೂಕಳೇರ ರತ್ತು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರತ್ತು ಅವರ ಮೃತದೇಹವನ್ನು ಕುಟ್ಟ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತೆರಳಿ ಪರಿಶೀಲನೆ ನಡೆಸಿದರು.


ಕಾಡಾನೆ ದಾಳಿಯನ್ನು ವಿರೋಧಿಸಿ ಗ್ರಾಮಸ್ಥರ ಪ್ರತಿಭಟನೆ.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಧರ್ಮಜ ಉತ್ತಪ್ಪ ಭೇಟಿ ನೀಡಿ, ನಿರಂತರವಾಗಿ ನಡೆಯುತ್ತಿರುವ ಪ್ರಾಣಿ–ಮಾನವ ಸಂಘರ್ಷದ ಕುರಿತಾಗಿ ಸರ್ಕಾರ ಈಗಾಗಲೇ ಕ್ರಮ ಕೈಗೊಳ್ಳುತ್ತಿದೆ. ಇನ್ನೂ ಹೆಚ್ಚಿನ ಅನುದಾನ ಒದಗಿಸಿ ಈ ಭಾಗದ ಜನರ ಸುರಕ್ಷತೆ ಕಡೆ ಗಮನ ಹರಿಸಲು ಕೂಡಲೇ ಶಾಸಕರೊಂದಿಗೆ, ಅರಣ್ಯ ಸಚಿವರೊಂದಿಗೆ ಹಾಗೂ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ಗ್ರಾಮಸ್ಥರ ಆಕ್ರೋಶ: ಕಾಡಾನೆ ಹಾವಳಿ ತಡೆಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು. ತಕ್ಷಣವೇ ಕಾಡಾನೆಗಳನ್ನು ಕಾಡಿಗಟ್ಟಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳನ್ನು ಗ್ರಾಮಸ್ಥರು ಆಗ್ರಹಿಸಿದರು.

ಅರಣ್ಯ ಸಚಿವರ ಸಂತಾಪ: ಕಾಡಾನೆ ದಾಳಿಯಿಂದ ಕೊಡಗಿನ ಕಾಫಿ ಬೆಳೆಗಾರರೊಬ್ಬರು ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಸಂತಾಪ ಸೂಚಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮಾನವ–ಆನೆ ಸಂಘರ್ಷ ತಡೆಯಲು ಸರ್ಕಾರ ಮತ್ತು ಇಲಾಖೆ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದೆ. ಜೀವಕ್ಕೆ ಬೆಲೆ ನೀಡಲು ಸಾಧ್ಯವೆ ಇಲ್ಲ. ಈ ನೋವಿನ ಸಂದರ್ಭದಲ್ಲಿ ನೊಂದ ಕುಟುಂಬದ ಜೊತೆ ಸರ್ಕಾರ ಇದೆ ಎಂದು ಹೇಳಿದರು. ಆನೆಗಳ ಸಮಸ್ಯೆ ಪರಿಹರಿಸಲು ಆನೆ ಧಾಮ ಮಾಡುವ ಬಗ್ಗೆ ಸರ್ಕಾರ ಯೋಜನೆ ರೂಪಿಸಿತ್ತು. ಅದಕ್ಕೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಗುವಲ್ಲಿ ತೊಡಕಾಗಿದೆ. ಈ ಸಮಸ್ಯೆ ಪರಿಹರಿಸಿಕೊಂಡು ಆನೆಧಾಮ ನಿರ್ಮಾಣದ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಟ್ರಾನ್ಸ್‌ಫಾರ್ಮರ್ ಕಿಡಿ ತಗುಲಿ ಅಡಿಕೆ ಗಿಡ ಭಸ್ಮ

ಮಡಿಕೇರಿ, ಏ.8–ವಿದ್ಯುತ್ ಟ್ರಾನ್ಸ್‌ಫಾರ್ಮರ್‌ನಿಂದ ಹಾರಿದ ಕಿಡಿ ತೋಟಕ್ಕೆ ತಗುಲಿದ ಪರಿಣಾಮ 15ರಿಂದ 20 ಅಡಿಕೆ ಗಿಡಗಳು ಸುಟ್ಟು ಹೋಗಿರುವ ಘಟನೆ ಕುಶಾಲನಗರ ತಾಲೂಕಿನ ಯಡವಾರೆ ಗ್ರಾಮದಲ್ಲಿ ಸಂಭವಿಸಿದೆ. ಬುಧವಾರ ಮಧ್ಯಾಹ್ನ 12.30ರ ಸಮಯದಲ್ಲಿ ಯಡವಾರೆ ನಿವಾಸಿ ಪಾಣತ್ತಲೆ ಶಂಭು ಎಂಬವರ ತೋಟದ ಪಕ್ಕದಲ್ಲಿರುವ ಟ್ರಾನ್ಸ್‌ಫಾರ್ಮರ್‌ನಿಂದ ಆಕಸ್ಮಿಕವಾಗಿ ವಿದ್ಯುತ್ ಕಿಡಿ ಹಾರಿ ತೋಟಕ್ಕೆ ತಗುಲಿದ್ದು, ತಕ್ಷಣವೇ ಬೆಂಕಿ ಹೊತ್ತಿಕೊಂಡಿದೆ.

ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಇದನ್ನು ಗಮನಿಸಿ ಮಾಲೀಕರಿಗೆ ಮಾಹಿತಿ ನೀಡಿದ್ದು, ಬಳಿಕ ತೋಟದ ಮಾಲೀಕರು ಚೆಸ್ಕಾಂ ಅಧಿಕಾರಿಗಳ ಗಮನಕ್ಕೆ ತಂದು ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿದ್ದಾರೆ. ಮಾಹಿತಿ ಪಡೆದ ಕುಶಾಲನಗರ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಗ್ರಾಮಸ್ಥರ ಸಹಕಾರದೊಂದಿಗೆ ಬೆಂಕಿಯನ್ನು ನಂದಿಸಿ ಪಕ್ಕದಲ್ಲಿರುವ ಬೇರೆ ತೋಟಗಳಿಗೆ ಹರಡದಂತೆ ಕ್ರಮ ವಹಿಸಿದ್ದಾರೆ. ಆದರೆ ಸುಡು ಬಿಸಿಲು ಮತ್ತು ಬೆಂಕಿಯ ತೀವ್ರತೆಗೆ ಫಸಲುಭರಿತ 15ರಿಂದ 20 ಅಡಿಕೆ ಗಿಡಗಳು ಸುಟ್ಟು ಹೋಗಿದೆ. ಸ್ಥಳ ಮಹಜರು ನಡೆಸಿದ ಅಗ್ನಿ ಶಾಮಕ ದಳದ ಅಧಿಕಾರಿ ರಂಜಿತ್ ಮತ್ತು ಸಿಬ್ಬಂದಿಗಳು ಮುಂದಿನ ಕ್ರಮ ಕೈಗೊಂಡಿ ದ್ದಾರೆ. ಈ ಸಂದರ್ಭ ಪ್ರಮುಖ ಅಗ್ನಿ ಶಾಮಕ ಸಿಬ್ಬಂದಿಗಳಾದ ಸಂದೀಪ್, ಚೇತನ್ ಕುಮಾರ್, ಚಾಲಕ ಶಿವಾನಂದ್, ಆನಂದ್, ಹಾಗೂ ಗ್ರಾಮಸ್ಥರು ಹಾಜರಿದ್ದರು.


ಬೆಂಕಿಯನ್ನು ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ.

ಪಾಸ್‌ಪೋರ್ಟ್ ಮೇಳಕ್ಕೆ ಸಂಸದ ಯದುವೀರ್ ಚಾಲನೆ


ಸಂಸದ ಯದುವೀರ್ ಪಾಸ್‌ಪೋರ್ಟ್ ಮೇಳಕ್ಕೆ ಚಾಲನೆ ನೀಡಿದರು.

ಮಡಿಕೇರಿ, ಏ.8–ಸಂಸದ ಯದುವೀರ್ ಅವರ ಪ್ರಯತ್ನದಿಂದ ಕೇಂದ್ರ ವಿದೇಶಾಂಗ ಸಚಿವಾಲಯದ ಸಹಕಾರದಲ್ಲಿ ಪಾಸ್‌ಪೋರ್ಟ್ ಮೇಳ ಬುಧವಾರ ಚಾಲನೆ ದೊರೆಯಿತು.

ಸಂಸದ ಯದುವೀರ್ ಪಾಸ್‌ಪೋರ್ಟ್ ಮೇಳಕ್ಕೆ ಚಾಲನೆ ನೀಡಿ, ಜಿಲ್ಲೆಯ ಜನರು ಪಾಸ್‌ಪೋರ್ಟ್‌ಗಾಗಿ ದೂರದ ಊರಿಗೆ ಹೋಗುತ್ತಿದ್ದರು. ಆ ನಿಟ್ಟಿನಲ್ಲಿ ವಿದೇಶಾಂಗ ಸಚಿವಾಲಯಕ್ಕೆ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯವರು ಮೂರು ದಿನಗಳ ಪಾಸ್ ಪೋರ್ಟ್ ಮೇಳ ಹಮ್ಮಿಕೊಂಡಿದ್ದು, ಇದರ ಪ್ರಯೋಜನವನ್ನು ಪಡೆಯುವಂತೆ ಕೋರಿದರು. ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ನಿತಿನ್‌ಚಕ್ಕಿ, ನಗರಸಭೆ ಸದಸ್ಯರು, ಪಾಸ್‌ಪೋರ್ಟ್ ಮೇಳದ ಅಧಿಕಾರಿಗಳಿದ್ದರು.

ಜಿಲ್ಲೆಯ ಹಲವಾರು ಮಂದಿ ಪಾಸ್‌ಪೋರ್ಟ್‌ಗಾಗಿ ಮೈಸೂರಿಗೆ ಅಥವಾ ಬೆಂಗಳೂರಿಗೆ ತೆರಳಬೇಕು. ಇದರಿಂದ ಹಿರಿಯ ನಾಗರಿಕರಿಗೆ ತೊಂದರೆ ಆಗುತ್ತದೆ ಎಂದು ಫೆಬ್ರವರಿ ತಿಂಗಳಿನಲ್ಲಿ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದ ಯದುವೀರ್, ಜಿಲ್ಲೆಯಲ್ಲಿ ಪಾಸ್ ಪೋರ್ಟ್ ಮೇಳ ಆಯೋಜಿಸುವಂತೆ ಮನವಿ ಮಾಡಿದ್ದರು.

ಕಳೆದ ಬಾರಿ ನವದೆಹಲಿಗೆ ತೆರಳಿದಾಗ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗಳಾದ ಪ್ರಿಯಾ ರಂಗನಾಥನ್ ಅವರನ್ನು ಭೇಟಿ ಮಾಡಿ, ಜಿಲ್ಲೆಯಲ್ಲಿ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಮನವಿ ಸಲ್ಲಿಸಿದ್ದೆ. ಇದಕ್ಕೆ ಸ್ಪಂದಿಸಿರುವ ಹಿರಿಯ ಅಧಿಕಾರಿಗಳು, ಬೆಂಗಳೂರು ಪಾಸ್‌ಪೋರ್ಟ್ ಕಚೇರಿಗೆ ಸೂಚನೆ ನೀಡಿ ಪಾಸ್‌ಪೋರ್ಟ್ ಮೇಳ ಆಯೋಜಿಸಲು ಕ್ರಮ ಕೈಗೊಂಡಿದ್ದಾರೆ ಎಂದು ಸಂಸದರು ತಿಳಿಸಿದರು.

ಮೂಕೋಂಡ ನಿತಿನ್ ಕುಶಾಲಪ್ಪರ ಕೃತಿ ಬಿಡುಗಡೆ

ಮಡಿಕೇರಿ, ಏ.8– ಲೇಖಕ ಅಮ್ಮತ್ತಿಯ ಮೂಕೋಂಡ ನಿತಿನ್ ಕುಶಾಲಪ್ಪ ಅವರು ರಚಿಸಿರುವ ದಕ್ಷಿಣ ಭಾರತದ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ಜಾನಪದ ಕಥೆಗಳನ್ನು ಆಧರಿಸಿದ ನೂತನ ಇಂಗ್ಲೀಷ್ ಕೃತಿ 'Folktales, Myths and Legends from the Deccan' ಇಂದು ಬಿಡುಗಡೆಗೊಂಡಿತು.

ನಗರದ ಸಂಸದರ ಕಚೇರಿಯಲ್ಲಿ ಸಂಸದ ಯದುವೀರ್ ಪುಸ್ತಕ ಬಿಡುಗಡೆಗೊಳಿಸಿ, ಮತ್ತಷ್ಟು ಪುಸ್ತಕಗಳು ಸಾಹಿತ್ಯ ಲೋಕಕ್ಕೆ ದೊರೆಯಲಿ ಎಂದು ನಿತಿನ್ ಕುಶಾಲಪ್ಪ ಅವರಿಗೆ ಶುಭ ಹಾರೈಸಿದರು.

ನಿತಿನ್ ಕುಶಾಲಪ್ಪ ಅವರು ರಚಿಸಿರುವ 10ನೇ ಇಂಗ್ಲೀಷ್ ಕೃತಿಯಾಗಿದೆ. ಈ ಕೃತಿ ದಕ್ಷಿಣ ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪರಂಪರೆಯನ್ನು ಪರಿಚಯಿಸುವ ಅಪರೂಪದ ಪ್ರಯಾಣವಾಗಿದ್ದು, ದಕ್ಷಿಣ ಭಾರತದ 5 ರಾಜ್ಯಗಳಾದ ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶ, ಕೇರಳ ಮತ್ತು ತಮಿಳುನಾಡು ಪ್ರದೇಶಗಳ 11 ಜನಪದ ಕಥೆಗಳ ಸಂಗ್ರಹವಿದೆ.

ವಿವಿಧ ಪ್ರದೇಶಗಳಲ್ಲಿ ಅಡಗಿರುವ ಮರೆತು ಹೋದ ಮೌಖಿಕ ಸಂಪ್ರದಾಯಗಳು, ಪುರಾತನ ಪುರಾಣಗಳು ಮತ್ತು ಐತಿಹಾಸಿಕ ಸಾಕ್ಷಿಗಳನ್ನು ಅತ್ಯಂತ ಸುಂದರವಾಗಿ ಹೆಣೆಯಲಾಗಿದೆ. ಸ್ಥಳೀಯ ರಾಜರ ಶೌರ್ಯ ಗಾಥೆಗಳಿಂದ ಹಿಡಿದು, ಪವಿತ್ರ ವನಗಳ ರಹಸ್ಯಗಳು ಮತ್ತು ಜಾನಪದದ ರೋಚಕ ಕಥೆಗಳವರೆಗೆ ಲೇಖನವನ್ನು ವಿಸ್ತರಿಸಲಾಗಿದೆ. ಐತಿಹಾಸಿಕ ಸತ್ಯ ಮತ್ತು ಜನಪದ ನಂಬಿಕೆಗಳ ನಡುವಿನ ಕೊಂಡಿಯಾಗಿ ಈ ಕೃತಿ ರಚನೆಗೊಂಡಿದೆ ಎಂದು ಲೇಖಕ ನಿತಿನ್ ಕುಶಾಲಪ್ಪ ತಿಳಿಸಿದರು.



ನಿತಿನ್ ಕುಶಾಲಪ್ಪ ಅವರ ತಾಯಿ ಮೂಕೋಂಡ ಪುಷ್ಪ ಪೂಣಚ್ಚ ಅವರು ಕೂಡ ಕನ್ನಡ ಮತ್ತು ಕೊಡವ ಭಾಷೆಯಲ್ಲಿ ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರದ ಗಮನ ಸೆಳೆದಿದ್ದಾರೆ.

ಗಾಂಜಾ ಮಾರಾಟ: ಮೈಸೂರಿನ ನಾಲ್ವರ ಬಂಧನ

ಮಡಿಕೇರಿ, ಏ.8–ಮಾದಕ ವಸ್ತು ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೈಸೂರು ಮೂಲದ 4 ಮಂದಿ ಆರೋಪಿಗಳನ್ನು ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಶಾಂತಿ ನಗರ ನಿವಾಸಿ ಹರ್ಷದ್ ಖಾನ್(25), ಅಜೀಜ್ ಸೇಠ್ ನಗರದ ಬಿ.ಡಿ ಕಾಲೋನಿಯ ಮುಜಾಮಿಲ್ ಅಹಮದ್(46), ಅಪ್ಸಲ್ ಪಾಷಾ(28) ಮತ್ತು ಕಲ್ಯಾಣಗಿರಿ ನಿವಾಸಿ ಸಾಕ್ಯೂಬ್(32) ಎಂಬವರು ಬಂಧಿತರಾಗಿದ್ದು, ಇವರ ಬಳಿ ಇದ್ದ 576 ಗ್ರಾಂ ನಿಷೇಧಿತ ಮಾದಕ ವಸ್ತು ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ಆರ್ಜಿ ಗ್ರಾಮದ ಹೆಗ್ಗಳ ಜಂಕ್ಷನ್ ಬಳಿ ಕಾರಿನಲ್ಲಿ (ಕೆಎ. 09.ಸಿ.2898) ಆಗಮಿಸಿ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಸಂದರ್ಭ ದಾಳಿ ನಡೆಸಿ ಬಂಧಿಸಿ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ, ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.


ಮುಜಾಮಿಲ್ ಹರ್ಷದ್ ಖಾನ್ ಅಪ್ಸಲ್ ಪಾಷಾ ಸಾಕ್ಯೂಬ್

ಏ.11ರಿಂದ ಚಿಣ್ಣರ ಬೇಸಿಗೆ ಸಂಭ್ರಮ

ವಿರಾಜಪೇಟೆ, ಏ.8– ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವ ವಿದ್ಯಾಲಯದ ವತಿಯಿಂದ ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಬ್ರಹ್ಮಾಕುಮಾರೀಸ್ ಜ್ಞಾನಗಂಗಾ ಭವನದಲ್ಲಿ ಏ.11 ರಿಂದ 13 ರವರೆಗೆ ಮೂರು ದಿನಗಳಕಾಲ 10 ರಿಂದ 16 ವಯಸ್ಸಿನ ಮಕ್ಕಳಿಗೆ ಚಿಣ್ಣರ ಬೇಸಿಗೆ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. 11 ರಂದು ಬೆಳಿಗ್ಗೆ 10 ಗಂಟೆಯಿಂದ ಪ್ರಾರಂಭಗೊಳ್ಳುವ ಚಿಣ್ಣರ ಬೇಸಿಗೆ ಸಂಭ್ರಮದಲ್ಲಿ ವ್ಯಾಯಾಮ, ಧ್ಯಾನ, ಸಕಾರಾತ್ಮಕ ಚಿಂತನೆ, ಕ್ರೀಡೆಗಳು, ಇತ್ಯಾದಿ ಸ್ಪರ್ಧೆಗಳು ನಡೆಯಲಿವೆ. ವಿದ್ಯಾರ್ಥಿಗಳು ಹೆಸರು ನೊಂದಾಯಿಸಿಕೊಳ್ಳಲು, ಮೊಬೈಲ್–8105419822 ನ್ನು ಸಂಪರ್ಕಿಸುವಂತೆ ಬ್ರಹ್ಮಾಕುಮಾರಿಸ್ ಜ್ಞಾನಗಂಗಾ ಭವನದ ಪ್ರಕಟಣೆ ತಿಳಿಸಿದೆ.

ಶ್ರೀ ಭಗವತಿ ದೇವಸ್ಥಾನದ ವಾರ್ಷಿಕೋತ್ಸವ

ನಾಪೋಕ್ಲು, ಏ.8– ಸಮೀಪದ ಕುಂಜಿಲ ಗ್ರಾಮದ ನಾಲ್ಕೇರಿ ಶ್ರೀ ಭಗವತಿ ದೇವಸ್ಥಾನದ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವದ ಅಂಗವಾಗಿ ಭಾನುವಾರ ರಾತ್ರಿ ಅಂದಿಬೊಳಕ್, ದೇವರ ಬಲಿ, ಮಹಾಪೂಜೆ ಹಾಗೂ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಿತು. ಸೋಮವಾರ ದೇವರ ನೃತ್ಯ ಬಲಿ ಜರುಗಿತು. ಅಲಂಕಾರ ಪೂಜೆ. ಮಹಾಪೂಜೆ ಬಳಿಕ ಮಧ್ಯಾಹ್ನ ಭಕ್ತರಿಗೆ ಅನ್ನ ಸಂತ ರ್ಪಣೆ ಏರ್ಪಡಿಸಲಾಗಿತ್ತು. ಮಧ್ಯಾಹ್ನ ದೇವರ ನೃತ್ಯ ಬಲಿಯನ್ನು ವೀಕ್ಷಿಸಿದರು.


ನಾಲ್ಕೇರಿ ಶ್ರೀ ಭಗವತಿ ದೇವಸ್ಥಾನದ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು.

ಮಂಗಳವಾರ ಬೆಳಿಗ್ಗೆ ಅಲಂಕಾರ ಪೂಜೆ, ಮಹಾಪೂಜೆ ನಡೆಯಿತು. ಮಧ್ಯಾಹ್ನ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಸಂಜೆ ದೇವರ ಕಟ್ಟು ಸಡಿಲಿಸಿದ ಬಳಿಕ ದೇವಿಯ ಅವಬೃತ ಸ್ನಾನ ಜರುಗಿತು. ಸಂಜೆ ದೇವಿಯ ದರ್ಶನ ಬಳಿ ನಂತರ ವಸಂತ ಪೂಜೆ, ಅನ್ನ ಸಂತರ್ಪಣೆಯೊಂದಿಗೆ ಉತ್ಸವ ಸಂಪನ್ನಗೊಂಡಿತು.

ಅರ್ಚಕರಾದ ಸುರೇಶ್, ಸುಧೀರ್ ಭಟ್ ತಂತ್ರಿ– ರಮೇಶ್ ಭಟ್ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು. ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು, ಊರಿನ ತಕ್ಕ ಮುಖ್ಯಸ್ಥರು ಹಾಗೂ ನಾಲ್ಕೇರಿ ಗ್ರಾಮಸ್ಥರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು

ಬೋನ್ ಇಟ್ಟಿದ್ದು ಹುಲಿಗೆ; ಬಿದ್ದದ್ದು ಚಿರತೆ!



ಗುಂಡ್ಲುಪೇಟೆ, ಏ.8– ತಾಲೂಕಿನ ಪಡಗೂರು ಗ್ರಾಮದಲ್ಲಿ ಹುಲಿ ಸೆರೆಗೆ ಅಳವಡಿಸಿದ್ದ ಬೋನಿಗೆ ಚಿರತೆ ಬಿದ್ದಿದೆ.

ಕಳೆದ ಕೆಲವು ದಿನಗಳಿಂದ ಗ್ರಾಮದಲ್ಲಿ ಕಾಣಿಸಿಕೊಳ್ಳುತ್ತಿದ್ದ ಹುಲಿ ಸೆರೆಗೆ ಗ್ರಾಮಸ್ಥರು ತೀವ್ರ ಒತ್ತಾಯ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಬಫರ್ ವಲಯದ ಅಧಿಕಾರಿಗಳು ಗ್ರಾಮದ ಮಹದೇವಸ್ವಾಮಿ ಎಂಬುವರ ಜಮೀನಿನಲ್ಲಿ ತುಮಕೂರು ಮಾದರಿಯ ಬೋನು ಅಳವಡಿಸಿ ಹುಲಿಯನ್ನು ಆಕರ್ಷಿಸಲು ಈ ಬೋನಿನ ಒಳಗೆ ಕರುವನ್ನು ಕಟ್ಟಿದ್ದರು.

ಬುಧವಾರ ಬೆಳಗ್ಗೆ ಹತ್ತು ಗಂಟೆ ಸಮಯದಲ್ಲಿ ಕರುವನ್ನು ತಿನ್ನಲು ಒಳಗೆ ಬಂದ 3 ವರ್ಷ ವಯಸ್ಸಿನ ಗಂಡು ಚಿರತೆ ಬೋನಿನೊಳಗೆ ಸೆರೆಯಾಗಿದೆ.

ವಿಷಯ ತಿಳಿದ ಕೂಡಲೇ ಅಕ್ಕಪಕ್ಕದ ಗ್ರಾಮಗಳ ಜನರು ಚಿರತೆಯನ್ನು ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದರು. ನಂತರ ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳು ಚಿರತೆಯ ಬೇರೊಂದು ಬೋನಿಗೆ ಸ್ಥಳಾಂತರಿಸಿ ಬಂಡೀಪುರ ಅರಣ್ಯಕ್ಕೆ ಕೊಂಡೊಯ್ದರು.

ದುಡಿಯುವ ಕೈಗಳಿಗೆ ಕೆಲಸ ನೀಡುವ ಗುರಿ ನನ್ನದು


ಚಾಮರಾಜನಗರ ತಾಲೂಕಿನ ಕೋಟಂಬಳ್ಳಿ ಗ್ರಾಮದ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಚಾಲನೆ ನೀಡಿ ಮಾತನಾಡಿದರು.

ಯಳಂದೂರು, ಏ.8– ದುಡಿಯುವ ಕೈಗೆ ಕೆಲಸ ನೀಡುವ ಗುರಿಯನ್ನು ನಾನು ಹೊಂದಿದ್ದೇನೆ. ಇದಕ್ಕಾಗಿ ಸಂತೆಮರಹಳ್ಳಿಯಲ್ಲಿ ರೇಷ್ಮೆ ನೇಕಾರರಿಗೆ ತರಬೇತಿ ಕೇಂದ್ರ, ಹೊಸ ಹಂಪಾಪುರದಲ್ಲಿ ಸಿಲ್ಕ್ ಪಾರ್ಕ್ ನಿರ್ಮಾಣ ಮಾಡಲು ಈಗಾಗಲೇ ಸಂಬಂಧಪಟ್ಟ ಇಲಾಖೆಯವರು ಕಾರ್ಯನಿರತರಾಗಿದ್ದಾರೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಕೋಟಂಬಳ್ಳಿ, ಬಸವರಾಜಪುರ, ಗೂಳೀಪುರ ಗ್ರಾಮಗಳಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಟಗರಪುರ ಗ್ರಾಮದ ಬಳಿ ಸರ್ಕಾರಿ ಜಮೀನನ್ನು ಗುರುತಿಸಲಾಗಿದೆ. ಇಲ್ಲಿ ಗಾರ್ಮೆಂಟ್ಸ್ ಸೇರಿದಂತೆ ಇತರೆ ಕಾರ್ಖಾನೆಗಳನ್ನು ಸ್ಥಾಪಿಸುವ ಉದ್ದೇಶವಿದೆ. ಇವೆಲ್ಲಾ ಇಲ್ಲಿಗೆ ಬಂದರೆ ಮಹಿಳೆಯರಿಗೂ ಉದ್ಯೋಗ ಲಭಿಸಲಿದೆ. ಅಲ್ಲದೆ ಚಾಮರಾಜನಗರದ ಬದನಗುಪ್ಪೆ ಹಾಗೂ ಕೆಲ್ಲಂಬಳ್ಳಿ ಕೈಗಾರಿಕಾ ವಲಯಗಳು ಬೆಳೆಯುತ್ತಿದೆ. ಇದರ ಫೇಸ್–02 ರ ಭಾಗವು ಇನ್ನು ಬೆಳೆದರೆ ಇದು ನನ್ನ ಕ್ಷೇತ್ರ ವ್ಯಾಪ್ತಿಯ ಕುದೇರು, ಸಂತೆಮರಹಳ್ಳಿ ಭಾಗದ ವರೆಗೂ ವಿಸ್ತರಿಸಲಿದೆ. ಆಗ ಇಲ್ಲೂ ಕೂಡ ಕೈಗಾರಿಕೆಗಳಾದರೆ ಉದ್ಯೋಗ ಸೃಷ್ಟಿಯಾಗುತ್ತದೆ ಎಂದರು.

ಗೂಳೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಮ್ಮ, ಬಸವರಾಜಪುರ, ಕೋಟಂಬಳ್ಳಿ, ಗೂಳೀಪುರ ಗ್ರಾಮಗಳಲ್ಲಿ 7.35 ಕೋಟಿ ರೂ. ವೆಚ್ಚದ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆಯನ್ನು ಮಾಡಲಾಗಿದೆ. ಈ ಗ್ರಾಮ ವ್ಯಾಪ್ತಿಯ ಪ್ರತಿ ಜನಾಂಗಗಳು ವಾಸಿಸುವ ಬೀದಿಗಳ ಅಭಿವೃದ್ಧಿ ಮಾಡಲಾಗುವುದು ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಮಾತನಾಡಿದರು. ಕೆಆರ್‌ಐಡಿಎಲ್‌ನ ಎಇಇ ಚಿಕ್ಕಲಿಂಗಯ್ಯ, ಜೆಇ ಅರುಣ್‌ಕುಮಾರ್, ಕಂದಹಳ್ಳಿ ನಂಜುಂಡಸ್ವಾಮಿ, ಮಸಣಾಪುರ ವಿಜಯ್, ಶಂಕರಮೂರ್ತಿ, ರವಿಶಂಕರ್, ಶಿವಶಂಕರ್, ಜಿ.ನಾಗೇಂದ್ರಸ್ವಾಮಿ, ಶಿವಣ್ಣ ಬೂದಂಬಳ್ಳಿ ಶಂಕರ್, ಮೋಹನ್, ಮಹದೇವಸ್ವಾಮಿ, ವೇಷಭೇಂದ್ರಪ್ಪ, ಶಿವಣ್ಣ, ಬಾಬು ಸೇರಿದಂತೆ ಅನೇಕರು ಇದ್ದರು.

ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬಿಸಿಲಿನ ತಾಪಮಾನ

ಬಂಡೀಪುರ, ಬಿ.ಆರ್.ಹಿಲ್ಸ್, ಮಹದೇಶ್ವರ ಬೆಟ್ಟದ ಕಾಡಿನಲ್ಲಿ ಕಾಡ್ಗಿಚ್ಚಿನ ಆತಂಕ

ಅನಾಹುತ ತಡೆಯಲು ಅರಣ್ಯ ಇಲಾಖೆ ಹೆಚ್ಚುವರಿ ಸಿಬ್ಬಂದಿ ನೇಮಕ

ಚಾಮರಾಜನಗರ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದೆ. ಪರಿಣಾಮ ಗಡಿ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿನ ಗಿಡ, ಮರ ಹಾಗೂ ಪರಿಸರ ಒಣಗಲಾರಂಭಿಸಿದ್ದು, ಕಾಡ್ಗಿಚ್ಚಿನ ಆತಂಕ ಎದುರಾಗಿದೆ.

ಪ್ರಸ್ತುತ ಜಿಲ್ಲೆಯಲ್ಲಿನ ಬಂಡೀಪುರ, ಬಿಆರ್ ಹಿಲ್ಸ್, ಮಲೆ ಮಹದೇಶ್ವರ ವನ್ಯಧಾಮ ಹಾಗೂ ಕಾವೇರಿ ವನ್ಯಜೀವಿ ಧಾಮಗಳಲ್ಲಿ ಪರಿಸರ ಸಂಪೂರ್ಣ ತನ್ನ ಸ್ವರೂಪ ಬದಲಾಯಿಸಿಕೊಳ್ಳಲು ಆರಂಭಿಸಿದೆ. ಅಲ್ಲದೇ ಕಳೆದ ಎರಡು ವಾರದ ಹಿಂದೆ ಜಿಲ್ಲೆಯ ಕೊಳ್ಳೇಗಾಲ ಹಾಗೂ ಹನೂರು ತಾಲೂಕಿನ ಬಿಆರ್‌ಟಿ ಅರಣ್ಯ ಪ್ರದೇಶ ವ್ಯಾಪ್ತಿಯ ಲೊಕ್ಕನಹಳ್ಳಿ ವ್ಯಾಪ್ತಿಯ ತುಮಾರ– ಸಮಾಧಿ ಪಡುಗ ಅರಣ್ಯ ಪ್ರದೇಶದಲ್ಲಿ ಮತ್ತು ಬೈಲೂರು ವನ್ಯಜೀವಿ ವಲಯ ವ್ಯಾಪ್ತಿಯ ಬಿದಿರುಕಿರೆ, ದೊಡ್ಡಹಳ್ಳಿ, ಜೋರೆಕೆರೆ, ಭಕ್ತಿಬಾವಿ ಕೆರೆ, ಕಡಬದ ಕೆರೆ ಅರಣ್ಯ ಪ್ರದೇಶ, ಪಿ.ಜಿ.ಪಾಳ್ಯ ಶಾಖೆಯ ನೆಲ್ಲಿಕತ್ರಿ ಹತ್ತಿರ ಬೆಂಕಿಯು ಕಾಣಿಸಿಕೊಂಡು ಸುಮಾರು 50ಕ್ಕೂ ಹೆಚ್ಚು ಎಕರೆ ಅರಣ್ಯ ನಾಶವಾಗಿದೆ. ಈ ಘಟನೆಯಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆ ಕೈಗೊಂಡಿದೆ.

> ಕಾಡ್ಗಿಚ್ಚು ತಡೆಯಲು ಮುನ್ನೆಚ್ಚರಿಕೆ ದೃಷ್ಟಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ಬೆಂಕಿ ರೇಖೆ ನಿರ್ಮಿಸಲಾಗಿದೆ. ಜೊತೆಗೆ ಬೆಂಕಿ ಆಕಸ್ಮಿಕಗಳ ಬಗ್ಗೆ ನಿಗಾವಿಡಲು ಫೈರ್ ವಾಚರ್‌ಗಳನ್ನೂ ನೇಮಕ ಮಾಡಿಕೊಳ್ಳಲಾಗಿದೆ. ಅಲ್ಲದೇ ಎಲ್ಲೆಡೆ ಬೆಂಕಿ ಕಾಣಿಸಿಕೊಂಡರೂ ತಕ್ಷಣ ಎಚ್ಚರಿಸುವ ಎಐ ತಂತ್ರಜ್ಞಾನವನ್ನು ಸಹ ಅಳವಡಿಸಿಕೊಳ್ಳಲಾಗಿದೆ. –ಪ್ರಭಾಕರನ್, ಡಿಸಿಎಫ್, ಬಂಡೀಪುರ

ಬೆಂಕಿ ರೇಖೆ ನಿರ್ಮಾಣ: ಜಿಲ್ಲೆಯಲ್ಲಿರುವ ಪ್ರಮುಖ ನಾಲ್ಕು ಅರಣ್ಯದಲ್ಲೂ ಅರಣ್ಯ ಇಲಾಖೆಯು ಬೆಂಕಿ ರೇಖೆ ನಿರ್ಮಾಣ ಕಾರ್ಯಗಳನ್ನು ಕೈಗೊಂಡಿದ್ದು, ಆಕಸ್ಮಿಕ ಬೆಂಕಿ ಅವಘಡಗಳಿಂದ ಅರಣ್ಯವನ್ನು ಕಾಯಲು ಹೆಚ್ಚುವರಿ ಸಿಬ್ಬಂದಿಯನ್ನೂ ತಾತ್ಕಾಲಿಕ ಅವಧಿಗೆ ನೇಮಕ ಮಾಡಿಕೊಂಡಿದೆ. ಬಂಡೀಪುರ, ಬಿಆರ್‌ಟಿಯಲ್ಲಿ ನೂರಾರು ಕಿ.ಮೀ. ವ್ಯಾಪ್ತಿಯಲ್ಲಿ ಬೆಂಕಿ ರೇಖೆಗಳನ್ನು ನಿರ್ಮಾಣ ಮಾಡಿರುವುದರಿಂದ ಬೆಂಕಿ ಆಕಸ್ಮಿಕಗಳಿಂದ ಕಾಡನ್ನು ರಕ್ಷಿಸಲು ಇಲಾಖೆಯಿಂದ ಕ್ರಮ ವಹಿಸಲಾಗಿದೆ.

ಲಂಟಾನಾ ತೆರವು: ಅರಣ್ಯದಲ್ಲಿ ಆಕಸ್ಮಿಕವಾಗಿ ಕಾಣಿಸಿಕೊಳ್ಳುವ ಕಾಡ್ಗಿಚ್ಚಿಗಿಂತ ಸಂಘರ್ಷ, ದ್ವೇಷದಿಂದ ಕಾಣಿಸಿಕೊಳ್ಳುವ ಬೆಂಕಿಯೇ ಹೆಚ್ಚು. ಈ ಬೆಂಕಿಯು ಹೆಚ್ಚು ವ್ಯಾಪಿಸದಂತೆ ತಡೆಯಲು ಅರಣ್ಯ ಇಲಾಖೆಯು ಕಾಡಿನಲ್ಲಿ ಹರಡಿಕೊಂಡಿರುವ ಲಂಟಾನಾ ತೆರವುಗೊಳಿಸುವ ಕಾರ್ಯವನ್ನು ಕೈಗೊಂಡಿದೆ.



ಕಾಡಂಚಿನ ಪ್ರದೇಶದಲ್ಲಿ ಜಾಗೃತಿ: ಕಾಡನ್ನು ಬೆಂಕಿಯಿಂದ ರಕ್ಷಿಸಲು ಅರಣ್ಯ ಇಲಾಖೆಯು ನಾನಾ ಯೋಜನೆಗಳನ್ನು ರೂಪಿಸಿಕೊಳ್ಳುತ್ತಿದ್ದು, ಇದೀಗ ಈ ಬಾರಿ ಗ್ರಾಮ ಪಂಚಾಯಿತಿ, ಪೊಲೀಸ್ ಇಲಾಖೆ ಹಾಗೂ ಕಂದಾಯ ಇಲಾಖೆ ಸಹಕಾರದೊಂದಿಗೆ ಕಾಡ್ಗಿಚ್ಚು ತಡೆಗೆ ಮುಂದಾಗಿದೆ.

ಈ ಇಲಾಖೆಗಳು ಜನಸಂಪರ್ಕಕ್ಕೆ ಹೆಚ್ಚಾಗಿ ಬರುವುದರಿಂದ ಕಾಡಿನಲ್ಲಿ ಬೆಂಕಿ ಕಂಡು ಬಂದಲ್ಲಿ ಅರಣ್ಯ ಇಲಾಖೆಗೆ ಮಾಹಿತಿ ನೀಡುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ಮನವಿ ಮಾಡಲಾಗಿದೆ. ಜೊತೆಗೆ ಬಿಆರ್‌ಟಿ ಹುಲಿ ರಕ್ಷಿತ ಅರಣ್ಯ ಪ್ರದೇಶದಲ್ಲಿನ ಯಳಂದೂರು ಹಾಗೂ ಕೆ.ಗುಡಿಗೆ ಹಾಗೂ ಬಂಡೀಪುರ ಅರಣ್ಯಕ್ಕೆ ಹೆಚ್ಚು ಪ್ರವಾಸಿಗರು ಭೇಟಿ ನೀಡುತ್ತಾರೆ. ಬಿಳಿಗಿರಿರಂಗನಬೆಟ್ಟದ ದೇವಸ್ಥಾನಕ್ಕೆ ಹಾಗೂ ಕೆ.ಗುಡಿ, ಬಂಡೀಪುರದಲ್ಲಿರುವ ಸಫಾರಿಗೆ ನಿತ್ಯ ಸಾವಿರಾರು ಜನರು ಭೇಟಿ ನೀಡುತ್ತಾರೆ. ಹಾಗಾಗಿ ಅರಣ್ಯ ಇಲಾಖೆ ಬೆಂಕಿ ಅವಘಡಗಳನ್ನು ತಪ್ಪಿಸಲು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ವಿಶೇಷ ಕಾಳಜಿ ವಹಿಸಿದೆ. ಬೇಸಿಗೆ ಮುಗಿಯುವವರೆಗೂ ರಸ್ತೆಯಲ್ಲಿ ತನ್ನ ಸಿಬ್ಬಂದಿಯನ್ನು ನೇಮಕ ಮಾಡಲಾಗುತ್ತಿದೆ.

ಹಿಂದಿ ಭಾಷೆ ಹೇರಿಕೆ ಖಂಡಿಸಿ ಕರವೇ ಪ್ರತಿಭಟನೆ

ಚಾಮರಾಜನಗರ, ಏ.8– ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ಮೇಲೆ ಹಿಂದಿ ಭಾಷೆಯನ್ನು ಹೇರಿಕೆ ಮಾಡುತ್ತಿರುವುದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಮುಂಭಾಗದಲ್ಲಿ ವೇದಿಕೆ ಜಿಲ್ಲಾಧ್ಯಕ್ಷ ಮಂಜೇಶ್ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರ ಹಾಗೂ ರಾಜ್ಯಪಾಲರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಶ್ರೀರೂಪಾಗೆ ಮನವಿ ಸಲ್ಲಿಸಿದರು.

ರಾಜ್ಯದಲ್ಲಿ ತೃತೀಯ ಭಾಷೆಗೆ ಗ್ರೇಡಿಂಗ್ ವ್ಯವಸ್ಥೆ ಜಾರಿಗೆ ತಂದಿರುವ ಸರ್ಕಾರದ ನಿರ್ಧಾರವನ್ನು ಮರು ಪರಿಶೀಲಿಸುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಕೂಡಲೇ ಕೇಂದ್ರ ಸರ್ಕಾರ ರಾಜ್ಯಪಾಲರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ಒತ್ತಾಯಿಸಿದರು. ರಾಜ್ಯಪಾಲರ ಈ ಕ್ರಮವು ತಮ್ಮ ಕಾರ್ಯ ವ್ಯಾಪ್ತಿಯನ್ನು ಮೀರಿ ನಡೆದಿರುವುದು ಮಾತ್ರವಲ್ಲದೆ, ಕರ್ನಾಟಕದ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ. ಇದರ ಹಿಂದೆ ರಾಜ್ಯದಲ್ಲಿ ಹಿಂದಿ ಹೇರಿಕೆಯನ್ನು ಉತ್ತೇಜಿಸುವ ಉದ್ದೇಶವಿದೆ ಎಂದು ದೂರಿದರು. ರಾಜ್ಯದ ಆಡಳಿತವನ್ನು ನಡೆಸುವ ಅಧಿಕಾರ ಜನರಿಂದ ಆಯ್ಕೆ ಯಾದ ಸರ್ಕಾರಕ್ಕಿದ್ದು, ಶಿಕ್ಷಣ ನೀತಿ ಸೇರಿದಂತೆ ವಿವಿಧ ವಿಷಯಗಳಲ್ಲಿ ನಿರ್ಧಾರ ಕೈಗೊಳ್ಳುವುದು ರಾಜ್ಯ ಸರ್ಕಾರದ ಅಧಿಕಾರವಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯಪಾಲರು ಸರ್ಕಾರದ ನಿರ್ಧಾರಗಳಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ ಎಂದರು.



ಕರವೇ ವತಿಯಿಂದ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಮಹಿಳಾ ಜಿಲ್ಲಾಧ್ಯಕ್ಷೆ ಭಾಗ್ಯಲಕ್ಷ್ಮಿ, ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೂಪೇಶ್, ಜಿಲ್ಲಾ ಸಹಕಾರ್ಯದರ್ಶಿ ಅರ್ಜುನ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹೇಮಂತ್, ಜಿಲ್ಲಾ ಪ್ರಧಾನ ಸಂಚಾಲಕ ರಾಘವೇಂದ್ರ, ತಾಲೂಕು ಅಧ್ಯಕ್ಷ ಸಂತೋಷ್ ಚಾಮರಾಜನಗರ, ಯಳಂದೂರು ತಾಲೂಕು ಅಧ್ಯಕ್ಷ ಮಾದೇವಸ್ವಾಮಿ ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ರಮೇಶ್ ನಾಯಕ್, ಕೊಳ್ಳೇ ಗಾಲ ತಾಲೂಕು ಅಧ್ಯಕ್ಷ ಆಯಸ್ ಕನ್ನಡಿಗ, ಚಾಮರಾಜನಗರ ಮಹಿಳಾ ತಾಲೂಕು ಅಧ್ಯಕ್ಷೆ ಸುಮಾ, ಕೊಳ್ಳೇಗಾಲ ತಾಲೂಕು ಅಧ್ಯಕ್ಷೆ ರಾಜೇಶ್ವರಿ, ಮುಖಂಡರಾದ ನಾಗರಾಜಣ್ಣ, ವಿಜಯ್, ಮಹೇಶ್, ಯೋಗೇಶ್ ಇತರರು ಭಾಗವಹಿಸಿದ್ದರು.

ರಾಘವೇಂದ್ರ ಮಠದಲ್ಲಿ ಸಂಸ್ಥಾನದ ಪೂಜೆ

ಚಾಮರಾಜನಗರ: ಚಿತ್ರಾಪುರದ ಶ್ರೀ ವಿಜಯಧ್ವಜ ತೀರ್ಥ ಪೀಠದ ಶ್ರೀ ವಿದ್ವೇಂದ್ರ ತೀರ್ಥ ಶ್ರೀಪಾದರು ನಗರದ ರಾಘವೇಂದ್ರ ಮಠದಲ್ಲಿ ಸಂಸ್ಥಾನದ ಪೂಜೆ ನಡೆಸಿದರು.

ನಗರಕ್ಕೆ ಪ್ರಥಮ ಬಾರಿಗೆ ನಗರಕ್ಕೆ ಆಗಮಿಸಿದ ಪೂಜ್ಯರು ನಗರದ ರಾಘವೇಂದ್ರ ಮಠದಲ್ಲಿ ಸಂಸ್ಥಾನದ ಪೂಜೆ ನಡೆಸಿ, ಎಲ್ಲರಿಗೂ ದೇವರು ಒಳ್ಳೆಯದು ಮಾಡಲಿ ಎಲ್ಲರೂ ಧರ್ಮದಲ್ಲಿ ಆಸಕ್ತಿ ಉಳ್ಳವರಾಗಿ ಮತ್ತು ದೇಶ ಸುಭಿಕ್ಷವಾಗಿರಲಿ ಎಂದು ತಿಳಿಸಿದರು.



ವೀರನಪುರ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ


ಅಧ್ಯಕ್ಷ ಉಪಾಧ್ಯಕ್ಷರನ್ನು ನಿರ್ದೇಶಕರು ಅಭಿನಂದಿಸಿದರು.

ಗುಂಡ್ಲುಪೇಟೆ, ಏ.8 – ತಾಲೂಕಿನ ವೀರನಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ವಿ.ನಾ.ಚಿದಾನಂದಸ್ವಾಮಿ ಆಯ್ಕೆಯಾದರು.

ಈ ಹಿಂದೆ ಅಧ್ಯಕ್ಷರಾಗಿದ್ದ ಗುರುಪ್ರಸಾದ್ ರಾಜೀನಾಮೆ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಬುಧವಾರ ಚುನಾವಣೆ ನಡೆಯಿತು. ಅಧ್ಯಕ್ಷರಾಗಿ ಚಿದಾನಂದ, ಉಪಾಧ್ಯಕ್ಷರಾಗಿ ಪಂಜನಹಳ್ಳಿ ಶಿವಣ್ಣ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸಹಕಾರ ಇಲಾಖೆಯ ಎಸ್. ನಾಗೇಶ್ ಆಯ್ಕೆಯನ್ನು ಪ್ರಕಟಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ವಿ.ಬಿ.ಬಸವಣ್ಣ, ಗುರುಮಲ್ಲಪ್ಪ, ಕುಮಾರ್, ಮಂಜು, ಅಂದಲೇಗೌಡ, ಮಹೇಶ್ವರಿ, ಪುಟ್ಟನಂಜಮ್ಮ, ಚಂದ್ರಶೇಖರ್ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ
0821–2496522/23

ನಿವೇಶನ ಮಾರಾಟಕ್ಕಿದೆ
30×40 ದಕ್ಷಿಣ 40 ಅಡಿ ರಸ್ತೆ ನಿರ್ಮಾಣ ಬಡಾವಣೆ, ಟಿ.ನರಸೀಪುರ ರಸ್ತೆ, JSS ಯುನಿವರ್ಸಿಟಿ ಹತ್ತಿರ
99000 00994

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ. 2921/A, ಸರಸ್ವತಿಪುರಂ, ಮೈಸೂರು.
ನಾವು ನ್ಯಾಷನಲೈಸ್ ಮತ್ತು ಎನ್.ಬಿ.ಎಫ್.ಸಿ. ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಯಾರಿಗಾದರು ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. ಸಿಬಿಲ್ ತೊಂದರೆ ಇದ್ದು, 11B, 9 & 11A, ಮುಡಾ ಮತ್ತು ಕಾರ್ಪೊರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿಕೊಡಲಾಗುವುದು ಹಾಗೂ 18 ವರ್ಷ ಮೇಲ್ಪಟ್ಟ ಹುಡುಗ ಹಾಗೂ ಹುಡುಗಿಯರು ಟೆಲಿಕಾಲಿಂಗ್ ಹಾಗೂ ಫೀಲ್ಡ್ ವರ್ಕ್ ಕೆಲಸಕ್ಕೆ ಬೇಕಾಗಿದ್ದಾರೆ.
8088647887

ಛತ್ರ ಖಾಲಿ ಇದೆ
06-07/May/2026
GLN Convention Hall
Bogadi, Mysuru
9845129666
7411250999

ಸೈಟು ಮಾರಾಟಕ್ಕಿದೆ
30x50 (1453 Sqft) East Face Muda Approved Site-07, ವಿದ್ಯಾರಣ್ಯಪುರಂ, ಎನ್.ಐ.ಇ ಕಾಲೇಜ್ ಹತ್ತಿರ, ಮೈಸೂರು
ಸಂತೋಷ್ :
9108334936

Sri Venkateshwara Tyres & Service
Vijaya Bank Circle, Double Road, Kuvempunagar, Mysore
Computerised Wheel Alignment and Balancing
Authorised dealers for
BRIDGESTONE
YOKOHAMA
JK TYRES

Since 1999
Mob: 94483 72715

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ಸಂಬಳ : 18000 (8 hrs, 26 ದಿನಗಳು)
ವಯೋಮಿತಿ : 50 ವರ್ಷದೊಳಗೆ
ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಬೇಕಾಗಿದ್ದಾರೆ
ಇಂಡಸ್ಟ್ರಿಯಲ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು / ಮಹಿಳೆಯರು ಬೇಕಗಿದ್ದಾರೆ. ವಯಸ್ಸು: 18 ರಿಂದ 40. 8 hours duty. ಸಂಬಳ: 17500 + ESI, PF. ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ. ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು.
Mob: 9986874574

ಶ್ರೀ ಬಾಲಾಜಿ ಟೂರಿಸ್ಟ್
22–4–26: 6 ದಿನ: ಮೇಘಾಲಯ, ಚಿರಾಪುಂಜಿ, ಶಿಲ್ಲಾಂಗ್, ಕಾಜಿರಂಗ, ಅಸ್ಸಾಂ, ಕಾಮಾಕ್ಯ ದೇವಿ.
18–6–26: 7 ದಿನ: ದೆಹಲಿ, ಆಗ್ರಾ, ಅಯೋಧ್ಯ, ಮಥುರಾ, ಪ್ರಯಾಗ್‌ರಾಜ್, ಕಾಶಿ, ಗಯಾ ಇತ್ಯಾದಿ.
3–7–26: 9 ದಿನ: ಕಾಶ್ಮೀರ, ಅಮರ್‌ನಾಥ್, ಗುಲ್‌ಮಾರ್ಗ್, ಸೋನ್ಮಾರ್ಗ್, ವೈಷ್ಣೋದೇವಿ.
18–9–26: 14 ದಿನ: ಚಾರ್‌ಧಾಮ್ ಯಾತ್ರಾ
24–10–26: 12 ದಿನ: ಗುಜರಾತ್, ರಾಜಸ್ಥಾನ್ ಮಧ್ಯಪ್ರದೇಶ, 4 ಜ್ಯೋತಿರ್ಲಿಂಗ, ದ್ವಾರಕಾ, ಇತ್ಯಾದಿ.
9945770486

Sri Venkateshwara Autocare
Near Hinkal Flyover, Mysore
Computerised Wheel Alignment and Balancing
Authorised dealers for
BRIDGESTONE
YOKOHAMA
JK TYRES

Since 1999
Mob: 94483 72715

SITE FOR SALE
Sukdai Woods (Nadanahalli Circle T.N. Pura Main Road)
60x40
8088363738

CORNER SITE FOR SALE
35x60 East North Corner Site for Sale S.P. Enclave Near by KSRTC Layout, Srirampura, Mysore
9880218673

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SITE FOR SALE
40X60, W/F, MUDA KHATA HIGH TENSION ROAD SUVARNA NAGAR BOGADI, PRICE : 75 LAKHS, CONTACT :
7019769205

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

7 ದಿನಗಳ ಭೂತಾನ್ ಪ್ರವಾಸ 15–5–26
7 ದಿನಗಳ ನೇಪಾಳ ಮತ್ತು ಮುಕ್ತಿನಾಥ ಪ್ರವಾಸ 23–4–26
3 ದಿನಗಳ ಶಿರಡಿ ಪ್ರವಾಸ 24–4–26
6 ದಿನಗಳ ಸಿಕ್ಕಿಂ ಮತ್ತು ಡಾರ್ಜಿಲಿಂಗ್ 7–5–26
13 ದಿನಗಳ ಚಾರ್ ಧಾಮ್ ಪ್ರವಾಸ 26–5–26
ಸುವರ್ಣ ಯಾತ್ರಾ
9019462508 / 9480843945

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, NIE ಕಾಲೇಜ್ ಪಕ್ಕ, ಮೈಸೂರು
Mob: 9916908454

ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಕಟ್ಟಿಂಗ್/ ಗ್ರೈಂಡಿಂಗ್ ದೋಸೆ, ಕೌಂಟ್ರು ಆಲ್‌ರೌಂಡರ್‌ಗಳು ಬೇಕಾಗಿದ್ದಾರೆ.
8970893632
9606238790

SHOP FOR RENT
400 Sq ft Ground floor, near Marimallappa College, City #12/A CH 15/A Dhivanas Road Chamarajmohalla, Mysore-570001
9945651695

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ.
whatsapp resume to
7795104543
9538886328

ಸೈಟು ಮಾರಾಟಕ್ಕಿದೆ
MUDA Approved 30x53 ಕಾರ್ನರ್ ಪೂರ್ವ ಮತ್ತು ಉತ್ತರಕ್ಕೆ ರಸ್ತೆ ಜಯಪುರ ಹತ್ತಿರ
9945623596

ಜಮೀನು ಬೇಕಾಗಿದೆ
ಆಶ್ರಮಕ್ಕಾಗಿ ಶ್ರೀರಂಗಪಟ್ಟಣದ (3–5 ಕಿಮೀ) ಬಳಿ 1 ಎಕರೆ ಲೋಕಪಾವನಿ ನದಿ ಹತ್ತಿರವಿರುವ ಜಮೀನು.
9964069933

ನಿವೇಶನ ಮಾರಾಟಕ್ಕಿದೆ
30X40, ಪಶ್ಚಿಮ ದಿಕ್ಕು, ಸೈಟ್ ಸಂಖ್ಯೆ 50, ಪ್ರಕೃತಿ ಲೇಔಟ್, ಎಚ್.ಡಿ. ಕೋಟೆ ರಸ್ತೆ, ಕಾಮಾಕ್ಷಿ ಆಸ್ಪತ್ರೆ ಹತ್ತಿರ, ಮೈಸೂರು. ರಾಗಿ ಡಿ–ಸ್ಟೋನ್ ಯಂತ್ರ ಮಾರಾಟಕ್ಕಿದೆ.
9880808458

ಸೈಟು ಮಾರಾಟಕ್ಕಿದೆ
30x40 E/F 38 ಲಕ್ಷ ಸುವರ್ಣನಗರ, ಬೋಗಾದಿ
20x42 East North Corner,. 55 ಲಕ್ಷ ವಿಜಯನಗರ 4ನೇ ಹಂತ ಪಕ್ಕ, ಮೈಸೂರು
9845765573
9986856999

WANTED TEACHERS
Nursery:2 Primary: 2 High School: 2, Qualification N.S.T, Montessori, B.A, B.Se, D.Ed, B.Ed, Subjects; Kannada, Science, and Social. English communication , Computer knowledge must. #103/7 7th cross,3rd main B.M Shree Nagar Metagalli Mysuru.
8197695840
8431891316

ಕಳೆದಿದೆ
ಮಲೆ ಮಾದಪ್ಪ ಬಿನ್ ಲೇಟ್ ಸಿದ್ದಪ್ಪ, ಕಟ್ನವಾಡಿ ಗ್ರಾಮ, ಚಾಮರಾಜನಗರ ತಾಲ್ಲೂಕು ಆದ ನನಗೆ ಸೇರಿದ ಚಾಮರಾಜನಗರ ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ CRJ-1-07920–2019–20 ಆಗಿ ಸಿಡಿ ನಂಬರ್ CRJD 487 ನೇದ್ದರಲ್ಲಿ ನೋಂದಣಿಯಾಗಿರುವ ಹಕ್ಕು ಖುಲಾಸೆ ಪತ್ರದ ಮೂಲ ಪ್ರತಿಯು ದಿನಾಂಕ 03.04.2026 ರಂದು ಕಟ್ನವಾಡಿ ಗ್ರಾಮದಿಂದ ಚಾಮರಾಜನಗರಕ್ಕೆ ಬಸ್‌ನಲ್ಲಿ ಬರುವಾಗ ಆಕಸ್ಮಿಕವಾಗಿ ಕಳೆದುಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ
ಮೊ. 8150816946

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಬೇಕಾಗಿದ್ದಾರೆ
ಮಡಿಕೇರಿ–ಮಂಗಳೂರು ಹಾಗೂ ಮಡಿಕೇರಿ–ಮೈಸೂರು ಮಾರ್ಗಗಳಲ್ಲಿ ಸಂಚರಿಸುವ ಲಾರಿಗಳಲ್ಲಿ ಪಾರ್ಸಲ್ ವಿತರಿಸಲು ಯುವಕರು ಬೇಕಾಗಿದ್ದಾರೆ. ಡೆಲಿವರಿ ಬಾಯ್ಸ್ ಆರಂಭಿಕ ವೇತನ 16000+ ಲೋಡಿಂಗ್ ಚಾರ್ಜ್. ಪ್ರತಿ ಭಾನುವಾರ ರಜೆ. ಸಂಪರ್ಕಿಸಿ:
Mob: 9740408488

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಡ್ರೈವರ್ ಬೇಕಾಗಿದ್ದಾರೆ
ಉಚಿತ ಊಟ, ವಸತಿ ನೀಡಲಾಗುವುದು. ಮಾಸಿಕ ವೇತನ: 15,000 – 20,000 ನೀಡಲಾಗುತ್ತದೆ.
Ph: 0821-2491755

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಶಿರಡಿ ಪ್ರವಾಸ 06 ದಿನಗಳು
ಪ್ರವಾಸದ ದಿನಾಂಕ: 09/05/2026 ಅಜಂತ ಎಲ್ಲೋರಾ ಶಿರಡಿ ಶನಿ ಸಿಂಗಾಪುರ ಕೊಲ್ಲಾಪುರ ಮಹಾಲಕ್ಷ್ಮಿ ನಾರಾಯಣಪುರ ಬಾಲಾಜಿ ಟೆಂಪಲ್ ಪಂಡ್ರಾಪುರ ಜ್ಯೋತಿರ್ಲಿಂಗ ತ್ರಯಂಬಕೇಶ್ವರ ಕೃಷ್ಣಶ್ವರ ಬಿಜಾಪುರ ಗೋಲ್ ಗುಂಬಜ್ ಕೂಡಲಸಂಗಮ ನಾಸಿಕ್ ಸೀತ ಗುಹೆ ಇತ್ಯಾದಿ ಊಟ ವಸತಿ ಸೇರಿ ಒಬ್ಬರಿಗೆ 15000ಗಳು
70222 71023

ವೀಕೆಂಡ್ ಪ್ರವಾಸ 03 ದಿನಗಳು
ಪ್ರವಾಸದ ದಿನಾಂಕ: 25/04/2026 ನಿರ್ವಾಣ ಬೀಚ್ ಪ್ಯಾರಡೈಸ್ ಬೀಚ್ ಟ್ರೆಕಿಂಗ್ ನೇತ್ರಾವತಿ ಬ್ಯಾಕ್ ವಾಟರ್ ಬೋಟಿಂಗ್ ನೀಲಗೋಡು ಚೌಡೇಶ್ವರಿ ದೇವಸ್ಥಾನ ಮುರುಡೇಶ್ವರ ಯಾಣ ಗುಹೆಗಳು ಇಕೋ ಬೀಚ್ ಮಿರ್ಜಾನ್ ಫೋರ್ಟ್ ಇತ್ಯಾದಿ ಊಟ ತಿಂಡಿ ವಸತಿ ಸೇರಿ ಒಬ್ಬರಿಗೆ 6000/–
70222 71023

ತಕ್ಷಣ ಬೇಕಾಗಿದ್ದಾರೆ
ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಕೆಲಸ ಡೇಟಾ ಎಂಟ್ರಿ, ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ. 20,000 ದಿಂದ ಕೊರಿಯರ್ ಲಭ್ಯವಿದೆ.
7996021216

ಬೇಕಾಗಿದ್ದಾರೆ
ಮೈಸೂರಿನ ಕುವೆಂಪುನಗರದ ಸೋಲಾರ್ ಕಂಪನಿಗೆ
ಆಫೀಸ್ ಅಸಿಸ್ಟೆಂಟ್
ಬೇಸಿಕ್ ಕಂಪ್ಯೂಟರ್ ಮತ್ತು ಟ್ಯಾಲಿ ಕಲಿತಿರಬೇಕು
ಸನ್‌ಜೋನ್ ಸೋಲಾರ್ ಸಿಸ್ಟಂ
98451 75443

FOR SALE
2 & 3 BHK New Apartments @ Ramakrishna Nagar.
20x30, 30x40 2,3 & 4 BHK New Construction as Per Your Plan Near Rainbow School, Bogadi
30x50 Sites Near RT Nagar Brahmins Lyt, 50ft & 60ft Road
PRAKRUTHI PROPERTIES
95386 90359, 90359 90359

FOR SALE
20x40, 30x50 Sites@ Gurukula Lyt, JP Ngr
30x45 Corner Site@ Dattagalli
2 BHK APARTMENT & 2 BHK HOUSE NEAR INFOSYS
30x40 New House @ JP Ngr Siddlingeshwara Lyt,
40x60 Commercial Srirampura
20x30 Site @ VRL Lyt, HD Kote Rd
PRAKRUTHI PROPERTIES
95386 90359, 90359 90359

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ಖಾಲಿ ಇರುವ ಕೆಲಸ
1) ವಯಸ್ಸಾದವರನ್ನು, (2) ರೋಗಿಗಳನ್ನು ನೋಡಿಕೊಳ್ಳಲು, (3) ಮಗು, ಬಾಣಂತಿ ಆರೈಕೆ, (4) ಮನೆ ಕೆಲಸ ಹಾಗೂ ಅಡುಗೆ ಕೆಲಸ, (5) ಆಫೀಸ್ ಕೆಲಸ ಮಾಡಲು ನುರಿತ ಕೆಲಸಗಾರರು (ಜನ ಸಂಬಾಳನೆ ಮಾಡುವವರು) ಕರೆ ಮಾಡಿ.
ಸ್ಥಳ: ಮೈಸೂರು, ಮಂಡ್ಯ.
Mob: 8951717070

MYSORE CONSTRUCTIONS
Build Your Dream Home Starting ₹1,900/sqft All construction works undertaken.
Experienced team | On-timdelivery
37,First Floor, Mydanahalli opposite visamya paradise layout -Yelawala
Contact: 6361548626/8088905575

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಪೆಸ್ಟ್ ಕಂಟ್ರೋಲ್ ಸರ್ವೀಸ್ ಕೆಲಸಕ್ಕೆ ಬೇಕಾಗಿದ್ದಾರೆ
ಸೂಪರ್‌ವೈಸರ್ ಮತ್ತು ಟೆಕ್ನಿಷಿಯನ್, ಸಂಪರ್ಕಿಸಿ:
9343550005
ಊಟ ಮತ್ತು ವಸತಿ ಉಚಿತ

CHANGE FOR NAME
Ramaiah, S/o Sannaeraiah, residing at # 4075, Siddappaji Road, 1st Cross, Gandinagar, Mysore-570007, have changed my name from Eraiah to Ramaiah on my own free will, sworn in before Notary A.P. Sreekanta Ruje urs, Mysuru, Vide affidavit dated 07-04-2026
Sd/- Ramaiah

ಸೈಟು ಮಾರಾಟಕ್ಕಿದೆ (ಜಮೀನು)
9 ಗುಂಟೆ ಜಾಗ ಮಾರಾಟಕ್ಕಿದೆ. ಚಾಮಲಪುರದ ಹುಂಡಿ (ಕೆ.ಹೆಚ್.ಬಿ. ಹತ್ತಿರ) ನಂಜನಗೂಡು, ಸಂಪರ್ಕಿಸಿ
9448614062

ಬೇಕಾಗಿದ್ದಾರೆ

ಗ್ಯಾಸ್ ಏಜನ್ಸಿಯಲ್ಲಿ ಸಿಲಿಂಡರ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ಸರಕು ಸಾಗಾಣೆ ಮಾಡುವ ಆಟೋ/ಮಿನಿ ವ್ಯಾನ್ ಇದ್ದವರಿಗೆ ಮೊದಲ ಆದ್ಯತೆ. ಸಂಪರ್ಕಿಸಿ
7975409456
9686202867

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ (ಪುರುಷ / ಮಹಿಳೆ)
2) ಹೌಸ್‌ಕೀಪಿಂಗ್ (ಪುರುಷ / ಮಹಿಳೆ)
3) ಕೆಫೆ ಕೌಂಟರ್ (ಬಾಯ್ಸ್/ಗರ್ಲ್ಸ್)
ಕೆಲಸಕ್ಕೆ ಅನುಭವಿ ಅಭ್ಯರ್ಥಿಗಳು ಬೇಕಾಗಿದ್ದಾರೆ.
9739199355
9482810407

ತೇಜಸ್ವಿನಿ ಟೂರಿಸ್ಟ್
13–4–2026, 2 ದಿನ ಹರಿಹರಪುರ, ಕಾಪು ಮಾರಿಯಮ್ಮ, ಕೊಲ್ಲೂರು, ಕಮಲಶಿಲೆ, ಶ್ರೀಗೌರಿ ಇತ್ಯಾದಿ. 6–5–2026, 8 ದಿನ ಮಂತ್ರಾಲಯ, ಶ್ರೀಶೈಲ, ಅಹೋಬಲ, ಹೈದರಾಬಾದ್ ಇತ್ಯಾದಿ 14 ಸ್ಥಳಗಳು. 22–5–2026, 6 ದಿನ ಚಾರ್‌ಧಾಮ್ ಗಂಗೋತ್ರಿ, ಯಮುನೋತ್ರಿ, ಕೇದಾರ, ಬದ್ರಿನಾಥ್, ಒಟ್ಟು 3 ಸ್ಥಳಗಳು ವಿಮಾನದಲ್ಲಿ 14 ದಿನ ರೈಲಿನಲ್ಲಿ 18 ದಿನ. 26–5–2026 ಗುಜರಾತ್, ಮಧ್ಯಪ್ರದೇಶ, ರಾಜಸ್ಥಾನ 4 ಜ್ಯೋತಿರ್ಲಿಂಗ ಒಟ್ಟು 23 ಸ್ಥಳಗಳು.
Mob: 9379792644

FLAT FOR RENT
2 BHK FULLY FURNISHED 1250 Sqft in Gokulam, Mysore
7483543160
Brokers Excuse

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್(ಪುರುಷರು)– SSLC Pass 12 ಘಂಟೆ – 16000 Rs ESI & PF ಸೌಲಭ್ಯ, ಮೇಟಗಳ್ಳಿ, ಹೂಟಗಳ್ಳಿ ಮತ್ತು ಕೂರ್ಗಳ್ಳಿ ಸುತ್ತಮುತ್ತ ಪ್ರದೇಶ, ಸಂಪರ್ಕಿಸಿ
9035367083
6361548626

ವಿಜಯಶ್ರೀ ಮ್ಯಾಟ್ರಿಮೋನಿಯಲ್
ನಮ್ಮಲ್ಲಿ ಯಾದವ, ಗೊಲ್ಲ ಹಾಗೂ ಇತರ ಎಲ್ಲಾ ಜನಾಂಗದ ವಧು–ವರಗಳ ಮಾಹಿತಿಗಳು ದೊರೆಯುತ್ತದೆ. Fresh/Second Marriage- ವಧು–ವರರಿಗಾಗಿ ಸಂಪರ್ಕಿಸಿ No. 4404/6/2, 7th Cross, A.G. Block, N.R. Mohalla, St.Mary's Road, Mysore-570007
ಕಲಾವತಿ
8296896065

ಮಳಿಗೆಗಳು ಬಾಡಿಗೆಗೆ ದೊರೆಯುತ್ತದೆ
ಅಂಗಡಿ ಮಳಿಗೆಗಳು ರಾಮಕೃಷ್ಣನಗರ 'ಎ' ಬ್ಲಾಕ್ ಪೂರ್ವದಿಕ್ಕಿನಲ್ಲಿರುವ ಮಳಿಗೆ ದೊರೆಯುತ್ತದೆ. ಸುಮಿತ್ರ ಸ್ಟೀಲ್ ಹತ್ತಿರ, ಸಂಪರ್ಕಿಸಿ :
8147704670

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ 'Helper' ಕೆಲಸ ಮಾಡಲು SSLC/ ITI (Pass/Fail) ಆಗಿರುವ ಯುವಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 45 ವರ್ಷದೊಳಗಿರಬೇಕು. ESI, PF ಮತ್ತು Canteen ಸೌಲಭ್ಯವಿರುತ್ತದೆ.
9945537353
8310990980

SITE FOR SALE
40x40 N/F
Panchacharya Layout, Vijayanagar 4th Stage.
9740088990

ಡ್ರೈವರ್ ಬೇಕಾಗಿದ್ದಾರೆ
ನಾಲ್ಕು ಚಕ್ರದ ಗೂಡ್ಸ್ ವಾಹನ ಚಲಾಯಿಸಲು ಡಿಎಲ್ ಹೊಂದಿರುವ ಅಭ್ಯರ್ಥಿಗಳು (ಫರ್ನಿಚರ್ಸ್ ಮತ್ತು ಮ್ಯಾಟ್ರೆಸ್ ಡೆಲಿವರಿಗೆ) ವಯೋಮಿತಿ :18 ರಿಂದ 40 ವರ್ಷ. ಸಂಬಳ: 18,000. ESI, PF ಸೌಲಭ್ಯವಿರುತ್ತದೆ.
8884551387

ಉಚಿತ ಬ್ಯೂಟೀಷಿಯನ್ ತರಬೇತಿ
ಸಮೃದ್ಧಿ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಉಚಿತವಾಗಿ 25 ತರಹದ ವಿವಿಧ ತರಬೇತಿಯನ್ನು ಹೇಳಿಕೊಡಲಾಗುತ್ತದೆ. ತರಬೇತಿಯನ್ನು ಪಡೆಯಲು ಇಚ್ಛಿಸುವವರು ಕೆಳಕಂಡ ವಿಳಾಸ ಮತ್ತು ದೂರವಾಣಿ ಕರೆಗೆ ಸಂಪರ್ಕಿಸಿ. ಶಾರದಾದೇವಿನಗರ:
9964874954

ಉದ್ಯೋಗವಕಾಶ
ದಿನಾಂಕ : 14–04–2026, 10.30 AM ಪಾರ್ಟ್‌ಟೈಮ್– 45+ age, ನಿವೃತ್ತರು, ಗೃಹಿಣಿಯರು, ಹೆಚ್ಚಿನ ಆದಾಯಕ್ಕಾಗಿ, Salary upto 75000/- Life Cover upto 6 lakh, Family medical coverage, ದಾಖಲಾತಿಗಳು, SSLC/ ಆಧಾರ್/ಪಾನ್‌ಕಾರ್ಡ್
8762556332
9901628595

URGENT WANTED
ACCOUNTANT
Basic Computer with Tally (Male / Female) English and Kannada knowledge. Two wheeler DL compulsory. Mob
7996664455

MUDA/DTCP APPROVED
ತಕ್ಷಣ ಮನೆ ಕಟ್ಟಲು, ನಮ್ಮ ಲೇಔಟ್ಸ್‌ನಲ್ಲಿ
JP ನಗರ ರಿಂಗ್ ರಸ್ತೆ ಹತ್ತಿರ – 23.25 ಲಕ್ಷ
ಬೋಗಾದಿ ಟ್ರೆಂಡ್ಸ್ ಫ್ಲಾಟ್ಸ್ ಹತ್ತಿರ – 34.75 ಲಕ್ಷ
ಮಾನಸಿನಗರ MPRO ಹಿಂಭಾಗ – 34.75 ಲಕ್ಷ
ಇಲವಾಲ & ಹೆಚ್.ಡಿ.ಕೋಟೆ ಹೈವೆ 27 ಲಕ್ಷ
ಪೊಲೀಸ್ ಲೇಔಟ್ ರಿಂಗ್ ರಸ್ತೆ ಹತ್ತಿರ 37 ಲಕ್ಷ
8123075038
Broker Excuse 0% Commission

SITE FOR SALE
50x80 North Face 50 Feet Road, Vimana Nagara, Dadadahalli, Behind Airport. Mob:
9731148579

REQUIRED
Labour Supervisor and Field Executive.
Drop your resume.
Only whatsapp.
9845315102

WANTED FOR HARIHARAN CONSTRUCTIONS
1) Office Workers - 2 (any Degree)
2) Pavers production maintenance - 1 (12th).
3) Supervisors (2 -Diploma Civil)
4) Drivers - 2
8310947653
7259789326

ವಧು ಬೇಕಾಗಿದ್ದಾರೆ
ಅಯ್ಯಂಗಾರ್ ಜಾತಿಯ 39 ವರುಷದ ಡೈವೋರ್ಸ್ ಆಗಿರುವ ವರನಿಗೆ ತ್ರಿಮತಸ್ಥ ಬ್ರಾಹ್ಮಣರಲ್ಲಿ ವಧು ಬೇಕಾಗಿದ್ದಾರೆ. ವರನು ಒಳ್ಳೆಯ ಕೆಲಸದಲ್ಲಿದ್ದಾರೆ. ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ಸಂಪರ್ಕಿಸಿ:
9341946820
8050720592

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮೇಲ್ಪಟ್ಟು,
ಸಂಬಳ : 21,000/-
ವಯೋಮಿತಿ : 50 ವರ್ಷದೊಳಗೆ
ESI, PF ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819
9880727819

ಬೇಕಾಗಿದ್ದಾರೆ
ಮೈಸೂರು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ ಕೆಲಸ ಮಾಡಲು 18 ರಿಂದ 40 ವರ್ಷದ ಮಹಿಳೆಯರು ಬೇಕಾಗಿದ್ದಾರೆ. ಸಮಯ: 9 ರಿಂದ 5. ಸಂಬಳ: 15,000. ಸಂಪರ್ಕಿಸಿ:
Contact: 7892725603, 9900889325, 8971460235

ಬೇಕಾಗಿದ್ದಾರೆ
ಲೋಕಲ್ & ಮೈಸೂರಿನಿಂದ ನಂಜನಗೂಡಿಗೆ ಲಾರಿ ಚಾಲಕರು ಬೇಕಾಗಿದ್ದಾರೆ. ಕ್ಯಾಂಟೀನ್, ಪಿಎಫ್ ಮತ್ತು ಇಎಸ್‌ಐ ಸೌಲಭ್ಯ ಲಭ್ಯವಿದೆ. ದಯವಿಟ್ಟು ಸಂಪರ್ಕಿಸಿ:
Mob: 9341623350

ಬೇಕಾಗಿದ್ದಾರೆ
ಮೈಸೂರಿನ ಸರಸ್ವತಿಪುರಂನಲ್ಲಿರುವ ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕೆಲಸ ಮಾಡಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ವಿದ್ಯಾರ್ಹತೆ: PUC. ಕೆಲಸದ ಸಮಯ: ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆ. ಸಂಪರ್ಕಿಸಿ:
Mob: 8861042449

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್, ಫೀಲ್ಡ್ ಆಫೀಸರ್ ಮತ್ತು ಮಾರ್ಕೆಟಿಂಗ್ ಮ್ಯಾನೇಜರ್ ಹುದ್ದೆಗಳಿಗೆ ಗಂಡಸರು ಬೇಕಾಗಿದ್ದಾರೆ. ಕೆ.ಆರ್.ಎಸ್. ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಹಳ್ಳಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯುರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. (ಇ.ಎಸ್.ಐ ಮತ್ತು ಪಿ.ಎಫ್) ಸೌಲಭ್ಯ ಇದೆ, ಸ್ಕ್ವಾಡ್ರನ್ ಸೆಕ್ಯೂರಿಟಿ – ಮೆನ್ ಪವರ್ ಸರ್ವಿಸ್ #221, 6th ಕ್ರಾಸ್, ಮಹಾದೇಶ್ವರ ಬಡಾವಣೆ, ತ್ರಿನೇತ್ರ ಸರ್ಕಲ್, ಹೆಬ್ಬಾಳ್ ಮೈಸೂರು–570016
Contact- 9611741411/ 8197269895/ 8050900395

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್
2) 6 ವ್ಹೀಲ್ ಡ್ರೈವರ್ಸ್
3) ಹೆಲ್ಪರ್–ಹುಡುಗರು
7795162227
9731663856

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಮಯ: 10 ರಿಂದ 8 ಸಂಬಳ: 12,000 ರಿಂದ 20,000
8050744784
ಇರ್ವಿನ್ ರಸ್ತೆ, ಮೈಸೂರು

SITES FOR SALE
NEAR MIT COLLEGE FULLY DEVELOPED READY FOR REGISTRATION
Call : 9845187966

AXIS MAX LIFE INSURANCE
ಮಕ್ಕಳಿಗಾಗಿ Children Plan
ನಿಮಗಾಗಿ Savings Plan
ನಿಮ್ಮವರಿಗಾಗಿ Protection Plan
ಭವಿಷ್ಯಕ್ಕಾಗಿ Pension Plan
ಜೀವನಕ್ಕೆ Money Back
ನೆಮ್ಮದಿಗಾಗಿ Axis Max Life Insurance ತಗೊಳ್ಳಿ... ಖುಷಿಯಾಗಿರಿ
8095741384

AR Holidays: ಕೇರಳ ಪ್ರವಾಸ
ಏಪ್ರಿಲ್ 21–25 (5 ದಿನಗಳು). ಗುರುವಾಯೂರ್, ಕೊಚ್ಚಿನ್, ಆಲೆಪ್ಪಿ, ವರ್ಕಲಾ, ತಿರುವನಂತಪುರಂ ಸೇರಿದಂತೆ 35+ ಸ್ಥಳಗಳ ವೀಕ್ಷಣೆ. ಎಸಿ ಬಸ್, ಊಟ, ವಸತಿ ಸೇರಿ ಕೇವಲ ₹8999/–. ಬೆಂಗಳೂರು/ಮೈಸೂರಿನಿಂದ ಪಿಕಪ್ ಲಭ್ಯ. ಸಂಪರ್ಕಿಸಿ:
6362916014

ಮನೆಯಲ್ಲಿಯೇ ಕೆಲಸ
ನಿಮ್ಮ ಬಿಡುವಿನ ವೇಳೆಯಲ್ಲಿ ಮನೆಯಿಂದಲೇ ಕುಳಿತು ಬರವಣಿಗೆ ಮತ್ತು ಮೊಬೈಲ್ ಟೈಪಿಂಗ್, ಡಾಟಾ ಎಂಟ್ರಿ, ಹಾಗೂ ಪ್ಯಾಕಿಂಗ್ ಕೆಲಸಗಳನ್ನು ಮಾಡಿ ಗಳಿಸಿ ತಿಂಗಳಿಗೆ – 20,000/– ದಿಂದ 30,000/– ರವರೆಗೆ
8618966728

CHANGE OF NAME
I, ASIFF S/o LATE ABDUL KHADER, residing at No. 28, 2nd Stage, 2nd Cross, Nazarbad Mohalla, Gayathripuram, Udayagiri, Mysuru-570019, have changed my name from ASIFF to ASIF vide affidavit sworn before Notary Rajeshwari, Mysuru, dated 07-04-2026

ಬೇಕಾಗಿದ್ದಾರೆ
ರಾಜೇಶ್ವರಿ ನೋಟರಿ ಟೆಂಟ್ ಸರ್ಕಲ್ ಕ್ಯಾತಮಾರನಹಳ್ಳಿ ಮೈಸೂರಿನ ಆಫೀಸ್‌ಗೆ ಕನ್ನಡ ಮತ್ತು ಇಂಗ್ಲಿಷ್ ಅನುಭವ ಉಳ್ಳವರು ಕಂಪ್ಯೂಟರ್ ಕೆಲಸ ಮಾಡುವವರು ಬೇಕಾಗಿದ್ದಾರೆ.
8972817375

ಮಂಜುನಾಥ ಎಂಟರ್‌ಪ್ರೈಸಸ್
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ ದ್ವಿಚಕ್ರ ವಾಹನ ಹೊಂದಿರಬೇಕು, ಸಂಬಳ 16,000 ರಿಂದ 20,000 ವರೆಗೆ
ಸಂಪರ್ಕಿಸಿ: 9187046630

LEADING MNC COMPANY IS HIRING
Profile, House wives, Insurance agent, Retired persons/NRIs/Teachers, Self employed, Auto mobile distributor, Those who wants to earn extra income upto 1 lakh, Age 30 to 65, Qualification SSLC and above
Suryakala: 9845543874

DUPLEX HOUSE FOR SALE
WITH E KHATHA IN BOGADHI NORTH NEAR TO NIRMITHI KENDRA, SOUTH FACE, 30X20, GF 450 SQUAREFT Ist FLOOR 200 SQUARE FT, empty space 150 SFT Jayaram
Mob 9611509551
Price Rs. 1 Crore.

J.V. LAND AVAILABLE
@ Dadadahalli 1.5 acre (Behind Mandakalli Airport) just 5 km from J.P. Nagar Ring Road.
9538839926

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ವಿಜೃಂಭಣೆಯ ಶ್ರೀಕರಿಯಮ್ಮ ದೊಡ್ಡಮ್ಮ ಜಾತ್ರಾ ಮಹೋತ್ಸವ

ಭೇರ್ಯ, ಏ.8– ಗ್ರಾಮದಲ್ಲಿ ಶ್ರೀಕರಿಯಮ್ಮ ದೊಡ್ಡಮ್ಮ ಸಿಡಿ ಮತ್ತು ಜಾತ್ರಾ ಮಹೋತ್ಸವ ಮಂಗಳವಾರ ಹಾಗೂ ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಇದೇ ವೇಳೆ ಸುತ್ತಮುತ್ತಲ 18 ಗ್ರಾಮಗಳು ಸೇರಿದಂತೆ ಜಿಲ್ಲೆ ಹಾಗೂ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥೋತ್ಸವಕ್ಕೆ ಸಾಕ್ಷಿಯಾದರು.

ಗ್ರಾಮದ ಕೆ.ಆರ್.ಪೇಟೆ ರಸ್ತೆಯ ಕೆರೆ ಬಳಿ ಕಲ್ಲಿನ ಬಂಡಿ ರಥಕ್ಕೆ ಅಡಿಕೆ ಮರದಿಂದ ಸಿಡಿ ಕಂಬಗಳನ್ನು ನಿರ್ಮಿಸಿ, ವಿವಿಧ ಹೂಗಳಿಂದ ಅಲಂಕಾರ ಮಾಡಿದ ಬಳಿಕ ಅಡಿಕೆ ಮರಕ್ಕೆ ಬಾಳೆಗೊನೆಗಳನ್ನು ಕಟ್ಟಿ ಸಿಂಗಾರಗೊಳಿಸಲಾಯಿತು.

ಮಂಗಳವಾರ ರಾತ್ರಿ 10.30ರಲ್ಲಿ ಗ್ರಾಮದ ನಾಡಗೌಡರು, ಯಜಮಾನರು, ಮುಖಂಡರ ಸಮ್ಮುಖದಲ್ಲಿ ಪೂಜೆ ಸಲ್ಲಿಸುವ ಮೂಲಕ ಸಿಡಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ಬಳಿಕ ನೆರೆದಿದ್ದ ಯುವಕರು ಹಾಗೂ ಭಕ್ತರು ಗ್ರಾಮ ದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ದೇವಿಗೆ ಜೈಕಾರ ಹಾಕುತ್ತಾ ಸಿಡಿಯನ್ನು ಎಳೆದರು.

ಜಾತ್ರಾ ಮಹೋತ್ಸವ ಅಂಗವಾಗಿ ಇಡೀ ಗ್ರಾಮವೇ ತಳಿರು ತೋರಣಗಳಿಂದ ಕಂಗೊಳಿಸುತ್ತಿತ್ತು. ಎಲ್ಲೆಲ್ಲೂ ತೆಂಗಿನಗರಿ, ಮಾವಿನ ಸೊಪ್ಪಿನ ತೋರಣ, ಬಾಳೆ ಕಂದು, ಅಡಿಕೆ ಹೊಂಬಾಳೆ ರಾರಾಜಿಸುತ್ತಿದ್ದವು. ವಿದ್ಯುತ್ ದೀಪಾಲಂಕಾರದಿಂದ ಇಡೀ ಗ್ರಾಮವೇ ಜಗಮಗಿಸುತ್ತಿತ್ತು. ಇವೆಲ್ಲದರ ನಡುವೆ ಭಕ್ತರು ತೇರಿಗೆ ಹೂ, ಹಣ್ಣು ಎಸೆದು ಜೈಕಾರ ಕೂಗುತ್ತಾ ಸಂಭ್ರಮಿಸಿದರು. ಕೊಂಬು, ಕಹಳೆ, ಮಂಗಳವಾದ್ಯ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಗ್ರಾಮದ ಸಂತೆ ಬೀದಿ ಮಾರ್ಗವಾಗಿ ಗಾಂಧಿ ವೃತ್ತದ ಮೂಲಕ ಹಾಸನ–ಮೈಸೂರು ರಸ್ತೆಯಿಂದ ಶ್ರೀಕರಿಯಮ್ಮ ದೊಡ್ಡಮ್ಮ ದೇವಸ್ಥಾನದ ಬಳಿಗೆ ಸಿಡಿ ರಥ ಎಳೆದು ತಂದು ನಿಲ್ಲಿಸಿದ ನಂತರ ಗ್ರಾಮದ ಮುತ್ತೈದೆಯರು ಹಾಗೂ ಯುವತಿಯರು, ಬಾಲಕಿಯರು ತಂಬಿಟ್ಟು ಆರತಿ ಬೆಳಗಿದರು. ಬಳಿಕ ಸಿಡಿ ರಥವನ್ನು ಎಳೆದು 3 ಬಾರಿ ಪ್ರದಕ್ಷಿಣೆ ಹಾಕಿಸಲಾಯಿತು. ಅಲ್ಲದೇ ನವ ದಂಪತಿಗಳು ಸಿಡಿ ರಥಕ್ಕೆ ಹಣ್ಣು, ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.



ಭೇರ್ಯದಲ್ಲಿ ಶ್ರೀಕರಿಯಮ್ಮ ದೊಡ್ಡಮ್ಮ ಸಿಡಿ ಮತ್ತು ಜಾತ್ರಾ ಮಹೋತ್ಸವ ನಡೆಯಿತು.

ಇದೇ ವೇಳೆ ನಾಡಿನಲ್ಲಿ ಉತ್ತಮ ಮಳೆಯಾಗಿ ರೈತರಿಗೆ ಉತ್ತಮ ಫಸಲು ದೊರೆಯಲಿ ಎಂದು ಪ್ರಾರ್ಥಿಸಿ ಗ್ರಾಮ ದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ದೇವಿಗೆ ಟ್ರಸ್ಟ್ ಅಧ್ಯಕ್ಷ ನಾಡಗೌಡ ಕುಮಾರಸ್ವಾಮಿ ಹಾಗೂ ಗ್ರಾಮದ ಹಿರಿಯ ಯಜಮಾನರು ಪೂಜೆ ಸಲ್ಲಿಸಿದರು.

ಬಾಯಿ ಬೀಗ: ಸಾಮಾನ್ಯವಾಗಿ ಭಕ್ತರು ದೇವರಿಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಹೆಚ್ಚಾಗಿ ಮದುವೆಯಾಗದ ಯುವಕ–ಯುವತಿಯರು ಮದುವೆಯಾಗಲೆಂದು ದೇವರಲ್ಲಿ ಹರಕೆ ಮಾಡಿಕೊಳ್ಳುವುದು ಸರ್ವೇ ಸಾಮಾನ್ಯ. ಆದರೆ ಈ ದೇವಿಯಲ್ಲಿ ನಿರುದ್ಯೋಗಿಗಳು ಹರಕೆ ಹೊತ್ತರೇ ವರ್ಷದಲ್ಲಿ ಉದ್ಯೋಗ ದೊರಕುತ್ತದೆ ಎಂಬ ನಂಬಿಕೆ ಇದೆ. ಅಲ್ಲದೇ ಮಕ್ಕಳಾಗದವರು ಇಲ್ಲಿಗೆ ಬಂದು ಬಾಯಿಬೀಗ ಹಾಕಿಸಿಕೊಂಡರೆ ಸಂತಾನ ಪ್ರಾಪ್ತಿಯಾಗುವ ಅಚಲ ನಂಬಿಕೆ ಭಕ್ತರದ್ದು. ಹಾಗಾಗಿ ಇಲ್ಲಿ ಪುರುಷರಿಗಿಂತ ಹೆಚ್ಚು ಮಹಿಳೆಯರೇ ಹರಕೆ ಹೊತ್ತು ಬಾಯಿಬೀಗ ಹಾಕಿಸಿಕೊಂಡು ಹರಕೆ ತೀರಿಸಿದರು.

ಜಾತ್ರೆ ಹಿನ್ನೆಲೆಯಲ್ಲಿ ಬುಧವಾರ ಸಾವಿರಾರು ಮಂದಿ ಸರತಿ ಸಾಲಿನಲ್ಲಿ ನಿಂತು ದೇವಿ ದರ್ಶನ ಪಡೆದರು. ಸಾಲಿಗ್ರಾಮ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಶಿಕುಮಾರ್ 50ಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸುವ ಮೂಲಕ ಬಿಗಿ ಬಂದೋಬಸ್ತ್ ಕೈಗೊಂಡಿದ್ದರು.

ಪಾನಕ, ಮಜ್ಜಿಗೆ ವಿತರಣೆ: ಜಾತ್ರಾ ಮಹೋತ್ಸವದಲ್ಲಿ ಭಕ್ತರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಅಲ್ಲದೇ ಗ್ರಾಮದ ಹೂವಿನ ವ್ಯಾಪಾರಸ್ಥರು ಅನ್ನಸಂತರ್ಪಣೆ ಹಮ್ಮಿಕೊಂಡಿದ್ದರು.

ಶಾಸಕರ ಭೇಟಿ: ಶಾಸಕ ಡಿ.ರವಿಶಂಕರ್, ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್ ಕುಮಾರ್ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಉತ್ತಮ ಜೀವನ ಶೈಲಿಯಿಂದ ಮಾನಸಿಕ, ದೈಹಿಕ ಆರೋಗ್ಯ



ತಲಕಾಡು ಕಾಲೇಜಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ತಿ.ನರಸೀಪುರ, ಏ.8– ಉತ್ತಮ ಜೀವನ ಶೈಲಿ ರೂಢಿಸಿಕೊಂಡಾಗ ಮಾತ್ರ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ತಲಕಾಡು ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ.ದೇವರಾಜು ತಿಳಿಸಿದರು.

ತಲಕಾಡು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ಆರೋಗ್ಯ ಅತ್ಯಂತ ಪ್ರಮುಖವಾದದು. ಒಳ್ಳೆಯ ಆರೋಗ್ಯ ಪಡೆಯಲು ಒಳ್ಳೆಯ ಹವ್ಯಾಸವಿರಬೇಕು. ಮಾನಸಿಕ, ದೈಹಿಕ ಆರೋಗ್ಯಕ್ಕಾಗಿ ಗುಣಮಟ್ಟದ ಆಹಾರ ಸೇವಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸಾಮಾಜಿಕ ಆರೋಗ್ಯ ಕಾಪಾಡುವ ಬಗ್ಗೆ ಮತ್ತು ಸರ್ಕಾರಿ ಆಸ್ಪತ್ರೆ ಮೂಲ ಸೌಕರ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಭಾರ ಪ್ರಾಂಶುಪಾಲ ಡಾ.ಮಹದೇವ ಪ್ರಭು ಅವರು ಮಾತನಾಡಿದರು.

ದೈಹಿಕ ಶಿಕ್ಷಣ ನಿರ್ದೇಶಕ ಎಂ.ಎಸ್.ನಾಗಣ್ಣ, ರೆಡ್ ಕ್ರಾಸ್ ಘಟಕ ಸಂಚಾಲಕ ಡಾ.ಶೇಖರ್, ಐಕ್ಯೂಎಸಿ ಸಂಚಾಲಕಿ ಡಾ.ಅಶ್ವಿನಿ ಹಾಗೂ ಬೋಧಕ ಬೋಧಕೇತರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಶ್ರೀಬಸವೇಶ್ವರ ಓಕುಳಿ ಹಬ್ಬದ ಪ್ರಯುಕ್ತ

ಬಟಗನಹಳ್ಳಿಯಲ್ಲಿ ಗ್ರಾಮೀಣ ಕಲೆಗಳ ಅನಾವರಣ

ಭೇರ್ಯ, ಏ.8– ಇಲ್ಲಿಗೆ ಸಮೀಪದ ಬಟಗನಹಳ್ಳಿ ಗ್ರಾಮದಲ್ಲಿ ಶ್ರೀಬಸವೇಶ್ವರ ಓಕುಳಿ ಹಬ್ಬದ ಪ್ರಯುಕ್ತ ನಡೆದ ಗ್ರಾಮೀಣ ಕಲೆಗಳ ಪ್ರದರ್ಶನ ನಮ್ಮ ಜಾನಪದ ಅನಾವರಣಗೊಳಿಸಿತು.

ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಮದ ಶ್ರೀದೊಡ್ಡಮ್ಮ, ಕರಿಯಮ್ಮ ಸಿಡಿ ಮತ್ತು ಜಾತ್ರಾ ಮಹೋತ್ಸವ ಅಂಗವಾಗಿ ಬಟಗನಹಳ್ಳಿ ಗ್ರಾಮದಲ್ಲಿ ಶ್ರೀಬಸವೇಶ್ವರ ದೇವರ ಓಕುಳಿ ಹಬ್ಬ ನಡೆದ ಮಾರನೇ ದಿನ ಮಂಗಳವಾರ ವಿವಿಧ ಜನಪದ ಗ್ರಾಮೀಣ ಕಲೆಗಳನ್ನು ವಿಭಿನ್ನವಾಗಿ ಪ್ರದರ್ಶಿಸಲಾಯಿತು.

ಗ್ರಾಮೀಣ ಕಲೆಗಳಾದ ಹುಲಿ ವೇಷ, ಪಾಳೇಗಾರಿಕೆ, ಕೀಲು ಕುದುರೆ, ಮಹಿಷಿ, ಮರಿ ಹುಲಿಗಳು, ಯಮಕಿಂಕರರ ವೇಷ ಸೇರಿದಂತೆ ಅನೇಕ ವಿಭಿನ್ನ ರೀತಿಯ ಜನಪದ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.



ನಮ್ಮ ಪೂರ್ವಿಕರ ಕಾಲದಿಂದ ಭೇರ್ಯ ಗ್ರಾಮದ ದೊಡಮ್ಮ ಕರಿಯಮ್ಮ ಜಾತ್ರೆ ಪ್ರಯುಕ್ತ ನಡೆಯುವ ಶ್ರೀ ಬಸವೇಶ್ವರ ದೇವರ ಓಕುಳಿ ಹಬ್ಬವನ್ನು ಎಲ್ಲಾ ಜಾತಿ ಜನಾಂಗದವರೊಂದಿಗೆ ಬಟಗನಹಳ್ಳಿ ಗ್ರಾಮದಲ್ಲಿ ಸಾಮರಸ್ಯದಿಂದ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಗ್ರಾಮದ ಯುವಕರು ವಿವಿಧ ಕಲೆಗಳನ್ನು ಪ್ರದರ್ಶಿಸಿ ಹಳ್ಳಿಯ ಜನಪದ ಸೊಗಡನ್ನು ಜೀವಂತವಾಗಿಸಿದ್ದಾರೆ. – ಬಿ.ಹೆಚ್.ಮಹದೇವ್, ಗ್ರಾಪಂ ಮಾಜಿ ಅಧ್ಯಕ್ಷ

ನಾಡಿನ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುವ ಕಲಾ ಪ್ರಕಾರಗಳು ಗ್ರಾಮೀಣ ಪ್ರದೇಶಗಳಲ್ಲಿ ಪ್ರದರ್ಶನಗೊಳ್ಳುತ್ತಿದ್ದು, ಜನರಿಗೆ ಉತ್ತಮ ಸಂದೇಶ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ನಾನು 10ನೇ ವಯಸ್ಸಿನಿಂದ ಗ್ರಾಮದ ಹಬ್ಬಗಳಲ್ಲಿ ಸಿಂಡು ಹುಲಿ ವೇಷ ಹಾಕುತ್ತಿದ್ದೇನೆ. ನಾನು ವೇಷ ಹಾಕಿ ಕುಣಿತ ಹಾಕುವಾಗ ಜನರು ಪ್ರತಿ ಬಾರಿ ನನಗೆ ಬೆಂಬಲ ಸೂಚಿಸಿ ಸ್ಫೂರ್ತಿ ತುಂಬುತ್ತಾರೆ. ನನಗೆ 58 ವರ್ಷಗಳು ತುಂಬಿದೆ. ಆದರೂ ಇನ್ನೂ ಕುಣಿತ ಹಾಕಬೇಕು ಎನ್ನುವ ಆಸೆ ಹೊಂದಿದ್ದೇನೆ ಎಂದು ಹುಲಿ ವೇಷ ಪಾತ್ರಧಾರಿ ಸತ್ಯನಾರಾಯಣ ಹೇಳಿದರು.

ಪ್ರತಿ ಗ್ರಾಮದಲ್ಲಿ ಭಾರತೀಯ ಕಿಸಾನ್ ಸಂಘ ಸ್ಥಾಪನೆಯಿಂದ

ರೈತರ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದು

ಗುಣಮಟ್ಟದ ಬಿತ್ತನೆ ವಿತರಿಸುವಂತೆ ರೈತ ಮುಖಂಡರ ಮನವಿ

ತಿ.ನರಸೀಪುರ, ಏ.8– ಪ್ರತಿ ಗ್ರಾಮಗಳಲ್ಲಿ ಭಾರತೀಯ ಕಿಸಾನ್ ಸಂಘದ ಗ್ರಾಮ ಘಟಕಗಳನ್ನು ತೆರೆಯುವ ಮೂಲಕ ರೈತರ ಸಮಸ್ಯೆಗಳನ್ನು ಬಗೆಹರಿಸಬಹುದಾಗಿದೆ ಎಂದು ರೈತ ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಆಯೋಜಿಸಿದ್ದ ಭಾರತೀಯ ಕಿಸಾನ್ ಸಂಘದ ಮಾಸಿಕ ಸಭೆಯಲ್ಲಿ ರೈತರು ಪ್ರತಿಯೊಂದು ಗ್ರಾಮದಲ್ಲಿ ಕಿಸಾನ್ ಸಂಘದ ಶಾಖೆ ತೆರೆದು ಅಲ್ಲಿ ರೈತರ ತೊಂದರೆಗಳನ್ನು ಆಲಿಸದ ಹೊರತು ಯಾವುದೇ ಸಮಸ್ಯೆ ಬಗೆಹರಿಸಲು ಸಾಧ್ಯವಾಗದು ಎಂದು ಅಭಿಪ್ರಾಯ ಮಂಡಿಸಿದರು.

ಹಳ್ಳಿಗಳಲ್ಲಿ ರೈತರಿಗೆ ತೊಂದರೆಗಳಾದರೆ ತಾಲೂಕು ಅಧ್ಯಕ್ಷರ ಗಮನಕ್ಕೆ ತರುವ ಮೂಲಕ ಸಮಸ್ಯೆ ಬಗೆಹರಿಸಲು ಸಹಕಾರ ನೀಡಬೇಕೆಂದು ಜಿಲ್ಲಾಧ್ಯಕ್ಷ ಚಿಕ್ಕಹೊಮ್ಮ ಪ್ರಭುಸ್ವಾಮಿ ಅವರು ರೈತರಿಗೆ ಮನವಿ ಮಾಡಿದರು.

ಅಕ್ಕೂರು ದೊಡ್ಡಿ ಶಂಕರ್ ಮಾತನಾಡಿ, ನಮ್ಮ ಹೊಲ ನಮ್ಮ ದಾರಿ ಅಭಿಯಾನವನ್ನು ನಮ್ಮ ತಾಲೂಕಿನಿಂದ ಹಾಗೂ ನಮ್ಮೂರಿನಿಂದಲೇ ಮಾಡಬೇಕು ಎಂದು ಸಲಹೆ ಕೊಟ್ಟರು. ಸಭೆಯಲ್ಲಿದ್ದ ಇತರೆ ಸದಸ್ಯರು ತಮ್ಮ ಗ್ರಾಮಗಳಲ್ಲಿ ಆಗಿರುವ ತೊಂದರೆಗಳನ್ನು ಸಭೆಯಲ್ಲಿ ತಿಳಿಸಿದರು.



ಭಾರತೀಯ ಕಿಸಾನ್ ಸಂಘದ ಸದಸ್ಯರು ಗುಣಮಟ್ಟದ ಬಿತ್ತನೆ ಬೀಜ ವಿತರಿಸುವಂತೆ ಕೃಷಿ ಸಹಾಯಕ ನಿರ್ದೇಶಕಿ ಶೋಭಾ ಅವರಿಗೆ ಮನವಿ ಸಲ್ಲಿಸಿದರು.

ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಕೆಂಪರಾಜು ಇಲಾಖೆಯಲ್ಲಿ ಸಿಗುವ ಸವಲತ್ತುಗಳ ಬಗ್ಗೆ ವಿವರ ನೀಡಿ ಮಾತನಾಡಿ, ರೈತರು ಪ್ರತಿ ತಿಂಗಳು ಸಾಧ್ಯವಾದಷ್ಟು ಹಣ ಉಳಿತಾಯ ಮಾಡಬೇಕು. ಇದರಿಂದ ಮುಂದೆ ನಿಮ್ಮ ಭವಿಷ್ಯಕ್ಕೆ ಸಹಕಾರಿಯಾಗುತ್ತದೆ ಎಂದು ಕಿವಿಮಾತು ಹೇಳಿದರು. ಇದೇ ವೇಳೆ ಕೆಂಪರಾಜು ಅವರಿಗೆ ಸಂಘಟನೆ ವತಿಯಿಂದ 'ರೈತರೇ ಆರೋಗ್ಯವಂತರಾಗಿರಿ' ಎಂಬ ಪುಸ್ತಕ ನೀಡಿ ಗೌರವಿಸಲಾಯಿತು.

ಸಭೆ ಬಳಿಕ ತಾಲೂಕು ಅಧ್ಯಕ್ಷ ನಾಗಲಗೆರೆ ಶಿವಕುಮಾರ್ ಅವರೊಂದಿಗೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಶೋಭಾ ಅವರನ್ನು ಭೇಟಿಯಾದ ರೈತ ಮುಖಂಡರು ರೈತರಿಗೆ ಸರಿಯಾದ ಸಮಯಕ್ಕೆ ಬಿತ್ತನೆ ಬೀಜ ವಿತರಿಸಬೇಕು. ಬೀಜವನ್ನು ಪರೀಕ್ಷಿಸಿ ಆನಂತರವೇ ವಿತರಣೆ ಮಾಡಬೇಕು. ಕಳೆದ ಬಾರಿ ನಕಲಿ ಬಿತ್ತನೆ ಬೀಜ ಕೊಟ್ಟು ರೈತರನ್ನು ಬೀದಿಗೆ ತಂದಿದ್ದೀರಾ. ಆ ಕೆಲಸ ಏನಾದರೂ ಈ ಬಾರಿ ಮರುಕಳಿಸಿದರೆ ಕೃಷಿ ಇಲಾಖೆ ವಿರುದ್ಧ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿ ಮನವಿ ಸಲ್ಲಿಸಿದರು.

ಸಭೆಯಲ್ಲಿ ಉಪಾಧ್ಯಕ್ಷ ಬೆನಕನಹಳ್ಳಿ ಪರಮೇಶ್, ಮಾಲಂಗಿ ಪ್ರಭುರಾಜ್, ನಿಲಸೋಗೆ ಸಿದ್ದರಾಜು ದುಂಡನಾಯಕ, ಎಸ್ ಮೇಗಡಹಳ್ಳಿ ಮುಕುಂದ, ಚಿಕ್ಕಕಲ್ಲುಣಿ ಸಿದ್ದರಾಜು, ಸೋಮನಾಥಪುರ ಚೌಡಯ್ಯ, ಮಾದಪ್ಪ, ಹಿರಿಯೂರ್ ಲಿಂಗರಾಜು, ಪ್ರಭುಸ್ವಾಮಿ, ಮಾರನಪುರ ರಾಜೇಂದ್ರ, ಬನ್ನಳ್ಳಿಹುಂಡಿ ಮಂಜೇಶ್, ಮಹಿಳಾ ಪ್ರಮುಖರಾದ ರೂಪಶ್ರೀ, ಮರಡೀಪುರ ನಾಗರಾಜು, ಮಹಾದೇವ ಪ್ರಭು, ಚಂದ್ರಶೇಖರ, ಮಾದಾಪುರ ನಟರಾಜು, ತುಂಬಲ ಪ್ರಭುಸ್ವಾಮಿ, ಧರ್ಮಯ್ಯನಹುಂಡಿ ಬಸವರಾಜು, ಮಹಾದೇವಸ್ವಾಮಿ ಹಾಗೂ ಕಿಸಾನ್ ಸಂಘದ ಸದಸ್ಯರು ಭಾಗವಹಿಸಿದ್ದರು.

ಶಿಕ್ಷಣ, ಸಮಾನತೆಯಿಂದ ಮಹಿಳಾ ಸಬಲೀಕರಣ

ರಾಜ್ಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಡಿ.ಎಂ.ತ್ರಿವೇಣಿ



ವಾರ್ಷಿಕ ವಿಶೇಷ ಶಿಬಿರದಲ್ಲಿ ಡಿ.ಎಂ.ತ್ರಿವೇಣಿ ಮಾತನಾಡಿದರು.

ಹುಣಸೂರು, ಏ.8– ಮಹಿಳೆಯರು ಶಿಕ್ಷಣದೊಂದಿಗೆ ಸ್ವಾತಂತ್ರ್ಯ ಹಾಗೂ ಸಮಾನತೆಯ ಹಕ್ಕುಗಳನ್ನು ಪಡೆದಾಗ ಮಾತ್ರ ಮಹಿಳಾ ಸಬಲೀಕರಣ ಸಾಧ್ಯ ಎಂದು ರಾಜ್ಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಡಿ.ಎಂ.ತ್ರಿವೇಣಿ ತಿಳಿಸಿದರು.

ತಾಲೂಕಿನ ಬನ್ನಿಕುಪ್ಪೆ ಸರ್ಕಾರಿ ಹಿರಿಯ ಶಾಲೆಯಲ್ಲಿ ಹುಣಸೂರು ಸರ್ಕಾರಿ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿದ ಅವರು, ಮಹಿಳೆಯರು ಪುರುಷರಿಗಿಂತ ಹಿಂದೆ ಉಳಿದಿಲ್ಲ. ಮಹಿಳೆಗೆ ಸರಿಯಾದ ಶಿಕ್ಷಣ, ಸಮಾಜದ ಬಗ್ಗೆ ಮಾಹಿತಿ, ತಿಳುವಳಿಕೆ ನೀಡಿದರೆ ಅವರು ಸಮಾಜದಲ್ಲಿ ಮಾದರಿಯಾಗಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಪ್ರಸ್ತುತ ಬಾಲ್ಯ ವಿವಾಹ ಹೆಚ್ಚಾಗಿ ನಡೆಯುತ್ತಿದ್ದು, ಅದನ್ನು ತಡೆಗಟ್ಟಲು ಮುಂದಾಗಬೇಕು ಎಂದ ಅವರು ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಅಲ್ಲದೇ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ. ಹೀಗಾಗಿ ನೀವು ಈ ಶಿಬಿರದ ಮೂಲಕ ಗ್ರಾಮೀಣ ಜನಜೀವನದ ಬಗ್ಗೆ ತಿಳಿದುಕೊಳ್ಳಬೇಕು. ಮುಂದಿನ ದಿನಗಳಲ್ಲಿ ತಮ್ಮ ಗುರಿ ಸಾಧನೆಯತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ಪ್ರಸನ್ನ ಕುಮಾರ್, ಪ್ರಗತಿಪರ ಕೃಷಿಕ ಚಲುವರಾಜ್, ಡಾ.ಕೆ.ಪಿ.ಪ್ರಸನ್ನ, ಸಹ ಶಿಬಿರ ಅಧಿಕಾರಿ ಲಕ್ಷ್ಮಯ್ಯ, ವಿಶ್ರಾಂತ ಪ್ರಾಂಶುಪಾಲ ವೆಂಕಟೇಶ್ ಹಾಗೂ ಗ್ರಾಮದ ಮುಖಂಡರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾತು ಬಾರದ, ಕಿವಿ ಕೇಳದ ವ್ಯಕ್ತಿ ಕೊಲೆ: ಇಬ್ಬರ ಬಂಧನ

ಮೈಸೂರು, ಏ.8(ಪಿಎಂ)– ಮಾತು ಬಾರದ, ಕಿವಿ ಕೇಳದ ವ್ಯಕ್ತಿ ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ. ವಿಚಿತ್ರವೆಂದರೆ ಬಂಧಿತ ಆರೋಪಿಗಳೂ ಕಿವಿ ಕೇಳದ, ಮಾತು ಬಾರದವರೇ ಆಗಿದ್ದಾರೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ಶ್ರೀನಿವಾಸ (37), ಅಮೃತೂರು ಗ್ರಾಮದ ನಿವಾಸಿ ಐ.ಎಸ್.ಗಂಗಾಧರ (23) ಬಂಧಿತ ಆರೋಪಿಗಳು. ನಂಜನಗೂಡು ತಾಲೂಕು ದೇವಿರಮ್ಮನಹಳ್ಳಿ ಪಾಳ್ಯದ ನಿವಾಸಿ ಸ್ವಾಮಿ (32) ಎಂಬುವರ ಕೊಲೆ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಲಾಗಿದ್ದು, ಮತ್ತೋರ್ವ ಆರೋಪಿ ಬಂಧನಕ್ಕೆ ಶೋಧ ಕಾರ್ಯ ನಡೆಯುತ್ತಿದೆ.

ವಿವರ: ನನ್ನ ಪತಿ ಸ್ವಾಮಿ ಕಾಣೆಯಾಗಿದ್ದಾರೆ ಎಂದು ಮಾ.4ರಂದು ದೇವರಮ್ಮನಹಳ್ಳಿ ಪಾಳ್ಯದ ನಿವಾಸಿ ಸವಿತಾ ನಂಜನಗೂಡು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದರು. ಸ್ವಾಮಿ, ಸವಿತಾ ಇಬ್ಬರೂ ಮಾತು ಬಾರದೇ, ಕಿವಿ ಕೇಳದವರೇ ಆಗಿದ್ದಾರೆ. ಈ ಇಬ್ಬರು ಕಳೆದ ನಾಲ್ಕೂವರೆ ವರ್ಷಗಳ ಹಿಂದೆ ಪ್ರೀತಿಸಿ ವಿವಾಹವಾಗಿದ್ದರು. ಇವರ ಮೊಬೈಲ್‌ಗಳನ್ನು ಪರಿಶೀಲಿಸಿದಾಗ ಪೊಲೀಸರಿಗೆ ಆರೋಪಿಗಳ ಸುಳಿವು ಸಿಕ್ಕಿತು.

ಸವಿತಾ ಅವರನ್ನು ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ವಿಚಾರಣೆಗೊಳಪಡಿಸಿ ಅವರ ಹೇಳಿಕೆ ಆಧಾರದ ಮೇರೆಗೆ ಶ್ರೀನಿವಾಸ ಹಾಗೂ ಗಂಗಾಧರ ಅವರನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಈ ಇಬ್ಬರೂ ಮಾತು ಬಾರದ ಕಿವಿ ಕೇಳದ ವ್ಯಕ್ತಿಗಳಾಗಿರುವುದು ಪೊಲೀಸರಿಗೆ ತಿಳಿಯಿತು. ಅಲ್ಲದೇ ಇವರ ಕೊಲೆ ಕೃತ್ಯವೂ ಬಯಲಾಯಿತು.

ವಿಚಾರಣೆ ವೇಳೆ ಸವಿತಾಗೆ ಆರೋಪಿ ಶ್ರೀನಿವಾಸನ ಪರಿಚಯವಿರುವುದು ಮಾತ್ರವಲ್ಲದೆ, ಇಬ್ಬರು ಪರಸ್ಪರ ವಿಡಿಯೋ ಕಾಲ್ ಮೂಲಕ ಸಂಪರ್ಕದಲ್ಲಿದ್ದರು ಎಂಬುದು ತಿಳಿದು ಬಂದಿದೆ. ಶ್ರೀನಿವಾಸನಿಗೆ ಸವಿತಾ ಮೇಲೆ ಪ್ರೀತಿಯಾಗಿದ್ದಲ್ಲದೆ, ಹಣಕಾಸು ಸಹಾಯ ಮಾಡಿದ್ದ. ಸವಿತಾ ಮೂಲಕ ಆಕೆ ಗಂಡ ಸ್ವಾಮಿಯು ಸಹ ಶ್ರೀನಿವಾಸನಿಗೆ ಪರಿಚಯವಾಗಿದ್ದ. ಅಲ್ಲದೆ ಸ್ವಾಮಿಗೂ ಶ್ರೀನಿವಾಸ ಸಾಲ ನೀಡಿದ್ದ.

ಸ್ವಾಮಿ ಕೊಲೆ ಮಾಡಿದರೆ ಸವಿತಾಳನ್ನು ತಾನು ಮದುವೆಯಾಗಬಹುದೆಂದು ಆಲೋಚಿಸಿ ಯೋಜನೆ ರೂಪಿಸಿಕೊಂಡ ಶ್ರೀನಿವಾಸ ಫೆ.12ರಂದು ಹಣ ನೀಡುವುದಾಗಿ ಸ್ವಾಮಿಯನ್ನು ಕುಣಿಗಲ್ ತಾಲೂಕಿನ ಅಮೃತೂರಿಗೆ ಕರೆಸಿಕೊಂಡ ಮದ್ಯಪಾನ ಮಾಡಿಸಿದ್ದಾನೆ. ಬಳಿಕ ಶ್ರೀನಿವಾಸ ತನ್ನ ಸ್ನೇಹಿತರಾದ ಗಂಗಾಧರ ಮತ್ತು ಮತ್ತೋರ್ವನೊಂದಿಗೆ ಸೇರಿ ಕುಣಿಗಲ್ ತಾಲೂಕು ಹೊಸಪುರದ ಜಮೀನಿನಲ್ಲಿ ಸ್ವಾಮಿ ಕುತ್ತಿಗೆಗೆ ಹೊಡೆದು ಕೊಲೆ ಮಾಡಿ, ಕಲ್ಲನ್ನು ಮೃತದೇಹಕ್ಕೆ ಕಟ್ಟಿ ಶವವನ್ನು ಬಾವಿಗೆ ಹಾಕಿದ್ದರು.

ಮಂಗಳವಾರ ಆರೋಪಿಗಳಾದ ಶ್ರೀನಿವಾಸ ಮತ್ತು ಗಂಗಾಧರ ಇಬ್ಬರನ್ನು ವಶಕ್ಕೆ ಪಡೆದ ಪೊಲೀಸರು, ಹೊಸಪುರದಲ್ಲಿ ತನಿಖೆ ನಡೆಸಿ ಸ್ವಾಮಿ ಶವ ಪತ್ತೆ ಮಾಡಿದ್ದಾರೆ. ಅಲ್ಲದೇ ಅವರಿಂದ ಕೃತ್ಯಕ್ಕೆ ಬಳಸಿದ್ದ ಬೈಕ್, ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆರೋಪಿಗಳೂ ಕಿವಿ ಕೇಳದ ಮಾತು ಬಾರದವರೇ...

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್ಪಿಗಳಾದ ಸಿ.ಮಲ್ಲಿಕ್, ಎಲ್.ನಾಗೇಶ್, ನಂಜನಗೂಡು ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ಜಿ.ಎಸ್.ರಘು ಮಾರ್ಗದರ್ಶನದಲ್ಲಿ ನಂಜನಗೂಡು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಎಸ್.ಆನಂದ್, ಎಸ್ಐ ನಾಗರಾಜು, ಸಿಬ್ಬಂದಿಗಳಾದ ಕೆ.ಮಹೇಶ್, ರಾಜೇಗೌಡ, ಬಿ.ಸುರೇಶ್, ದೇವರಾಜು, ಪಿ.ವೆಂಕಟೇಶ್, ರೇಖಾ, ಪಿ.ಅನಿಲ್, ಆರ್.ಆರ್.ಗಣೇಶ್, ಸುನೀಲ್‌ಕುಮಾರ್, ಸುರೇಶ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

10 ದಿನ ನೀರು ಪೂರೈಕೆಯಲ್ಲಿ ವ್ಯತ್ಯಯ



ಸುರೇಶ್

ಹೆಚ್.ಡಿ.ಕೋಟೆ, ಏ.8– ಇಂದಿನಿಂದ (ಏ.9) 10 ದಿನಗಳ ಕಾಲ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಪಟ್ಟಣದ ಸಾರ್ವಜನಿಕರು ಸಹಕರಿಸಬೇಕು ಎಂದು ಪುರಸಭಾ ಮುಖ್ಯಾಧಿಕಾರಿ ಸುರೇಶ್ ತಿಳಿಸಿದ್ದಾರೆ.

ಅಮೃತ್ 2.0 ಯೋಜನೆಯಡಿ ಕಬಿನಿ ನದಿ ನೀರನ್ನು ಹೆಚ್.ಡಿ.ಕೋಟೆ ಪಟ್ಟಣಕ್ಕೆ ಸರಬರಾಜು ಮಾಡುವ 2ನೇ ಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಬೊಪ್ಪನಹಳ್ಳಿ ಸರಹದ್ದಿನ ಕಬಿನಿ ನದಿ ಪಕ್ಕದಲ್ಲಿರುವ ಜಾಕ್‌ವೆಲ್‌ನ ಇಂಟೆಕ್‌ವೆಲ್ ಪೈಪ್‌ಲೈನ್ ಮೇಲ್ದರ್ಜೆಗೇರಿಸುವ ಕಾಮಗಾರಿ ನಡೆಯಲಿದ್ದು, ಕೋಟೆ ಪಟ್ಟಣಕ್ಕೆ ಕಬಿನಿ ನದಿ ನೀರಿನ ಪೂರೈಕೆ ತಾತ್ಕಾಲಿಕ ವಾಗಿ 10 ದಿನಗಳ ಕಾಲ ಸ್ಥಗಿತವಾಗಲಿರುವುದರಿಂದ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗುತ್ತದೆ.

ಈ ಸಂದರ್ಭ ಪಟ್ಟಣದ ನಾಗರಿಕರಿಗೆ ವಾರ್ಡ್‌ಗಳಲ್ಲಿ ಹಾಲಿ ಇರುವ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತದೆ. ಪಟ್ಟಣದ ನಾಗರಿಕರು ನೀರನ್ನು ಮಿತವಾಗಿ ಬಳಸಿ ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಕಿತ್ಸೆ ಫಲಿಸದೇ ಅಪಘಾತದ ಗಾಯಾಳು ಸಾವು



ನಂಜನಗೂಡು, ಏ.8– ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಸಾವನ್ನಪ್ಪಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ಚಿಕ್ಕಾಟಿ ಗ್ರಾಮದ ನಿವಾಸಿ ನಾಗರಾಜು(30) ಸಾವನ್ನಪ್ಪಿದವರು.

ತಾಲೂಕಿನ ಹುಲ್ಲಹಳ್ಳಿಯ ಖಾಸಗಿ ಬಾರ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈತ ಎಂದಿನಂತೆ ಕೆಲಸ ಮುಗಿಸಿಕೊಂಡು ಮಾ.31ರಂದು ರಾತ್ರಿ 10.30ರಲ್ಲಿ ತಮ್ಮ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಹುಲ್ಲಹಳ್ಳಿ ಮುಖ್ಯ ರಸ್ತೆಯಲ್ಲಿ ಬರುವ ನಗರದ ಹೊರ ವಲಯದ ಖಾಸಗಿ ಕಲ್ಯಾಣ ಮಂಟಪದ ಬಳಿ ಅಪರಿಚಿತ ವಾಹನ ಬೈಕ್ ಡಿಕ್ಕಿ ಹೊಡೆದು ಪರಾರಿಯಾಗಿದೆ. ಪರಿಣಾಮ ತೀವ್ರ ಗಾಯಗೊಂಡ ನಾಗರಾಜು ಅವರಿಗೆ ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಬುಧವಾರ ಸಾವನ್ನಪ್ಪಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರ ಸಾಧನೆ

ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ.ಸೋಮಣ್ಣ ಅಭಿಪ್ರಾಯ

ಹೆಚ್.ಡಿ.ಕೋಟೆ, ಏ.8– ಈ ಹಿಂದೆ ಶಿಕ್ಷಣದ ಕೊರತೆಯಿಂದಾಗಿ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲು ಹಿಂದೇಟು ಹಾಕುತ್ತಿದ್ದರು ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ.ಸೋಮಣ್ಣ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಮತ್ತು ರಾಷ್ಟ್ರೀಯ ಸೇವಾ ಯೋಜನೆ ಸಹಯೋಗದೊಂದಿಗೆ ಆಯೋಜಿಸಿದ್ದ ಮಹಿಳಾ ದೌರ್ಜನ್ಯ ತಡೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಪ್ರಸ್ತುತ ಶಿಕ್ಷಣ ಪಡೆದ ಮಹಿಳೆ ಎಲ್ಲಾ ಕ್ಷೇತ್ರದಲ್ಲೂ ನಾನೇನು ಕಡಿಮೆ ಇಲ್ಲ ಎಂಬಂತೆ ಎಲ್ಲಾ ರಂಗಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಲ್ಲದೇ ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂಧೂರ್ ಕಾರ್ಯಾಚರಣೆಯ ನೇತೃತ್ವವನ್ನು ಮಹಿಳೆಯರೇ ವಹಿಸಿಕೊಂಡಿದ್ದರು ಎಂಬುದು ಮೆಚ್ಚುವ ವಿಷಯವಾಗಿದೆ ಎಂದರು.



ಸಾರ್ವಜನಿಕ ಆಸ್ಪತ್ರೆ ಹಿರಿಯ ವೈದ್ಯಾಧಿಕಾರಿ ಡಾ.ಸೋಮಣ್ಣ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಹಿಂದಿನ ಕಾಲದಲ್ಲಿ ಕಾಲರಾ, ಪ್ಲೇಗ್ ಸೇರಿದಂತೆ ಇನ್ನಿತರ ಮಾರಕ ಕಾಯಿಲೆಗಳು ಬಂದಾಗ ಬದುಕುಳಿಯುವವರ ಸಂಖ್ಯೆ ಕಡಿಮೆ ಇತ್ತು. ಈ ಕಾರಣಕ್ಕೆ ಪೋಷಕರು 10 ರಿಂದ 12 ಮಕ್ಕಳಿಗೆ ಜನ್ಮ ನೀಡುತ್ತಿದ್ದರು ಎಂದರು.

ಆಧುನಿಕತೆ ಬೆಳೆದಂತೆ ನಾವು ಸೇವಿಸುವ ಆಹಾರದಲ್ಲಿ ರೋಗ ನಿರೋಧಕ ಶಕ್ತಿ ಇಲ್ಲದಂತಾಗಿದ್ದು, ಮನುಷ್ಯರು ಸಣ್ಣ ಖಾಯಿಲೆಯನ್ನು ತಡೆಯಲು ಶಕ್ತಿ ಇಲ್ಲದಂತಾಗಿದೆ ಎಂದು ಬೇಸರಿಸಿದರು.


ಮೈಸೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕಿ ಡಾ.ರಶ್ಮಿಚನ್ನಯ್ಯ ಮಾತನಾಡಿ, ಮಹಿಳೆ ಮನೆಯಲ್ಲಿ ಕುಳಿತು ಕಾಲ ಕಳೆಯುತ್ತಾಳೆ ಎಂದು ಪುರುಷರು ತಿಳಿದುಕೊಂಡಿದ್ದರು. ಇದನ್ನು ಸಹಿಸದ ಮಹಿಳೆ ಮನೆಯಿಂದ ಹೊರಬಂದು ದುಡಿಯುವ ಮೂಲಕ ಗಂಡಿಗಿಂತ ಏನು ಕಡಿಮೆ ಇಲ್ಲ ಎಂದು ತೋರಿಸಿದ್ದು ಎಲ್ಲಾ ಕ್ಷೇತ್ರಕ್ಕೂ ಮಹಿಳೆ ಲಗ್ಗೆ ಇಟ್ಟಿದ್ದಾಳೆ ಎಂದು ತಿಳಿಸಿದರು.

ಈ ವೇಳೆ ಎನ್‌ಎಸ್‌ಎಸ್‌ನಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳು ಹಾಗೂ ವಿವಿಧ ವಿಭಾಗದಲ್ಲಿ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಜಯಗಳಿಸಿದವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಮೈಸೂರು ಮಹಾರಾಜ ಕಾಲೇಜಿನ ವಿಶ್ರಾಂತ ಪ್ರೊ.ಚಂದ್ರೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ಉಪನ್ಯಾಸಕರಾದ ರಾಮಚಂದ್ರ, ಅವಿನಾ, ಚಂದನ, ಚಿತ್ರಾ, ಚಿಕ್ಕದೇವಿ, ಸಂಗೀತಾ, ಶಾಂಭವಿ, ಚನ್ನಕೇಶವ, ಸಿದ್ದೇಗೌಡ, ರವಿ, ರಾಮಚಂದ್ರ, ಮಹೇಂದ್ರ, ಮಹದೇವು, ಸಿದ್ದರಾಜು, ಮಂಜು, ಪ್ರಕಾಶ್ ನಾಯಕ್, ಸಿದ್ದೇಗೌಡ, ದಿಲೀಪ್, ಸೋಮಶೇಖರ್, ರಾಜೇಶ್ ಇದ್ದರು.

"ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಕೇಂದ್ರ ಸರ್ಕಾರ ಪಾಶ್ ಕಾಯಿದೆ ಜಾರಿಗೊಳಿಸಿದ್ದು, ಕಾಲೇಜುಗಳಲ್ಲಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಕಾರ್ಖಾನೆಗಳಲ್ಲಿ, ಕ್ರೀಡೆ, ರಾಜಕೀಯ ಸೇರಿದಂತೆ ಯಾವುದೇ ಕ್ಷೇತ್ರದಲ್ಲಾಗಲೀ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದರೆ, ಅವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಮಹಿಳೆಗೆ ನ್ಯಾಯ ಒದಗಿಸುವುದೇ ಈ ಕಾನೂನಿನ ಉದ್ದೇಶ.
– ಡಾ.ರತ್ನ, ಬಿಳಿಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ.


ಶಿವೇಗೌಡ ನಿಧನ



ಹುಣಸೂರು, ಏ.8– ತಾಲೂಕಿನ ಕಾಳೇಗೌಡನಕೊಪ್ಪಲು ಗ್ರಾಮದ ನಿವಾಸಿ, ಬನ್ನಿಕುಪ್ಪೆ ಗ್ರಾಮದ ಮಂಡಲ ಪಂಚಾಯಿತಿ ಮಾಜಿ ಪ್ರಧಾನರಾದ ಶಿವೇಗೌಡ(80) ಬುಧವಾರ ನಿಧನರಾದರು.

ಮೃತರು ಪತ್ನಿ, ಸೊಸೆ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಕಳೆದ 6 ತಿಂಗಳ ಹಿಂದೆ ಮೃತರ ಪುತ್ರ ನಿಧನರಾಗಿದ್ದರು. ಅಂತ್ಯಕ್ರಿಯೆ ಮಧ್ಯಾಹ್ನ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗಣ್ಣ



ಪಿರಿಯಾಪಟ್ಟಣ, ಏ.8– ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಉಪಾಧ್ಯಕ್ಷ ಹಾಗೂ ಪಿರಿಯಾಪಟ್ಟಣ ತಾಲೂಕು ಕಾಂಗ್ರೆಸ್ ಹಿರಿಯ ಮುಖಂಡ ತೆಲಗಿನಕುಪ್ಪೆ ನಾಗಣ್ಣ(73) ಬುಧವಾರ ಸಂಜೆ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ತೆಲಗಿನಕುಪ್ಪೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗ್ರಾಮೀಣ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ತುರ್ತು ಕ್ರಮ

ವೈದ್ಯಾಧಿಕಾರಿಗಳ ವರ್ಗಾವಣೆ ನಿಯಮ ತಿದ್ದುಪಡಿಗೆ ಮುಂದಾದ ಸರ್ಕಾರ

ಬೆಂಗಳೂರು: ಗ್ರಾಮೀಣ ಪ್ರದೇಶಗಳ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ನಿವಾರಿಸಲು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ವೈದ್ಯಾಧಿಕಾರಿಗಳನ್ನು ನಿಯೋಜಿಸುವ ಉದ್ದೇಶದಿಂದ ವರ್ಗಾವಣೆ ನಿಯಮಗಳಲ್ಲಿ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ತಿದ್ದುಪಡಿಗಾಗಿ ಸಿದ್ಧಪಡಿಸಲಾಗಿರುವ ಪ್ರಸ್ತಾವಗಳನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದ್ದು, ಸಾರ್ವಜನಿಕರಿಂದ ಆಕ್ಷೇಪಣೆ, ಸಲಹೆಗಳನ್ನು ಆಹ್ವಾನಿಸಲಾಗಿದೆ. ಈ ತಿದ್ದುಪಡಿ ನಿಯಮಗಳು 2026ನೇ ಸಾಲಿನ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆಗೆ ಅನ್ವಯ ಆಗಲಿದೆ. ಈ ತಿದ್ದುಪಡಿ ನಿಯಮದಲ್ಲಿ ಶೇ 50ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರುವ ಆಸ್ಪತ್ರೆಗಳಲ್ಲಿ ತಕ್ಷಣವೇ ವೈದ್ಯರನ್ನು ನಿಯೋಜಿಸಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಜೊತೆಗೆ, ತುರ್ತು ಸೇವೆಗಳನ್ನು ನಿರ್ವಹಿಸಲು ಅಗತ್ಯವಿರುವ ಹುದ್ದೆಗಳನ್ನು ಅಧಿಸೂಚನೆಯ ಮೂಲಕ ಸರ್ಕಾರ ಭರ್ತಿ ಮಾಡಬೇಕೆಂದು ತಿಳಿಸಲಾಗಿದೆ.

ವಿಶೇಷ ವರ್ಗಗಳಿಗೆ ವಿನಾಯಿತಿ ನೀಡುವ ಪ್ರಸ್ತಾವವೂ ಅಧಿಸೂಚನೆಯಲ್ಲಿದೆ. ಅಂಗವಿಕಲರು, ಕುಟುಂಬದ ತುರ್ತು ಸಂಕಷ್ಟ ಎದುರಿಸುತ್ತಿರುವವರು, ಸರ್ಕಾರಿ ನೌಕರರ ಸಂಘದ ಪ್ರಮುಖ ಹುದ್ದೆಗಳಲ್ಲಿ ಇರುವವರಿಗೆ ನಿರ್ದಿಷ್ಟ ಅವಧಿಗೆ ವರ್ಗಾವಣೆ ವಿನಾಯಿತಿ ನೀಡಲಾಗುವುದು. ಪತಿ–ಪತ್ನಿ ಬೇರೆ ಬೇರೆ ಸ್ಥಳಗಳಲ್ಲಿ ಕೆಲಸ ಮಾಡುವುದರಿಂದ ಉಂಟಾಗುವ ಸಾಮಾಜಿಕ ಸಮಸ್ಯೆಗಳನ್ನು ಕಡಿಮೆ ಮಾಡಲು, ವೈದ್ಯಾಧಿಕಾರಿಗಳಿಗೆ ತಮ್ಮ ಪತ್ನಿ ಅಥವಾ ಪತಿಯ ಕೆಲಸದ ಸ್ಥಳದ ಸಮೀಪಕ್ಕೆ ವರ್ಗಾವಣೆಯ ಸೌಲಭ್ಯ ಕಲ್ಪಿಸಲಾಗಿದೆ.

ಆರೋಗ್ಯ ಸೇವೆಗಳ ನಿರಂತರತೆ ಕಾಪಾಡುವುದು ಈ ತಿದ್ದುಪಡಿಯ ಪ್ರಮುಖ ಉದ್ದೇಶ. ಗ್ರಾಮೀಣ ಹಾಗೂ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ತೀವ್ರವಾಗಿರುವುದರಿಂದ, ತಕ್ಷಣವೇ ಹುದ್ದೆಗಳನ್ನು ಭರ್ತಿ ಮಾಡುವ ಅಗತ್ಯವಿದೆ. ಈ ತಿದ್ದುಪಡಿಯ ಮೂಲಕ ವೈದ್ಯರ ವರ್ಗಾವಣೆ ಪ್ರಕ್ರಿಯೆಯಲ್ಲಿ ರಾಜಕೀಯ ಅಥವಾ ವೈಯಕ್ತಿಕ ಪ್ರಭಾವ ಕಡಿಮೆ ಮಾಡಿ ನಿಯಮಬದ್ಧವಾಗಿ ನಿರ್ವಹಿಸಲು ಹಾಗೂ ವೈದ್ಯಕೀಯ ಕ್ಷೇತ್ರದಲ್ಲಿ ಪಾರದರ್ಶಕತೆ ತರಲು ಸಾಧ್ಯವಾಗಲಿದೆ ಎಂದು ಆರೋಗ್ಯ ಇಲಾಖೆಯ ಮೂಲಗಳು ತಿಳಿಸಿವೆ.

ಏ.12, ವಿಜಯ ಮಹಾಗಣಪತಿ ಜಾತ್ರಾ ದಶಮಾನೋತ್ಸವ

ಮೈಸೂರು, ಏ.8(ಜಿಎ)–ಮೈಸೂರಿನ ವಿಜಯನಗರ 3ನೇ ಹಂತ ಏಳನೇ ಅಡ್ಡ ರಸ್ತೆಯಲ್ಲಿನ ವಿಜಯ ಮಹಾ ಗಣಪತಿ ದೇವಸ್ಥಾನ ಜಾತ್ರಾ ದಶಮಾನೋತ್ಸವ ಏ.12 ರಂದು ನಡೆಯಲಿದೆ ಎಂದು ಸಂಸ್ಥಾಪಕರಾದ ಸಿ.ಕೆ. ಮಂಜುನಾಥ ಶಾಸ್ತ್ರಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಗ್ಗೆ 10.20ಕ್ಕೆ ಸ್ವಾಮಿಯ ಬ್ರಹ್ಮ ರಥೋತ್ಸವ ಜರುಗಲಿದೆ. ಇದಕ್ಕೂ ಮೊದಲು ಬೆಳಗ್ಗೆ 7ಗಂಟೆಯಿಂದ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ. ಮಧ್ಯಾಹ್ನ 1ಕ್ಕೆ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಇದೆ. ಹೀಗಾಗಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಿ ದೇವರ ಕೃಪೆಗೆ ಪಾತ್ರರಾಗಬೇಕೆಂದು ಕೋರಿದರು.

ಒಂದನೇ ಪುಟದಿಂದ

ಯುದ್ಧಕ್ಕೆ ಅಲ್ಪ ವಿರಾಮ

ನೀಡಿರುವ ಹೇಳಿಕೆಯನ್ನು ಕೂಡ ಟ್ರಂಪ್ ಹಂಚಿಕೊಂಡಿದ್ದಾರೆ. ಇರಾನ್ ಕೂಡ ಇದಕ್ಕೆ ಪ್ರತಿಕ್ರಿಯಿಸಿದೆ. ಅಮೆರಿಕ ಮುಂದಿಟ್ಟಿರುವ ಎರಡು ವಾರಗಳ ಕದನ ವಿರಾಮ ಪ್ರಸ್ತಾವವನ್ನು ಇರಾನ್ ಒಪ್ಪಿಕೊಂಡಿದೆ. ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಭೆಯಲ್ಲಿ ಅಮೆರಿಕದೊಂದಿಗೆ ಮಾತುಕತೆ ನಡೆಸಲಾಗುವುದು ಎಂದು ಇರಾನ್ ನ ರಾಷ್ಟ್ರೀಯ ಭದ್ರತಾ ಪರಿಷತ್ತು ಟೆಹರಾನ್ ನಲ್ಲಿ ಪ್ರತಿಕ್ರಿಯಿಸಿದೆ.

ಮಂಗಳವಾರ ರಾತ್ರಿ 8 ಗಂಟೆ (ಅಮೆರಿಕ ಕಾಲಮಾನ) ಒಳಗಾಗಿ ಕದನ ವಿರಾಮಕ್ಕೆ ಒಪ್ಪಬೇಕು ಹಾಗೂ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಸಮ್ಮತಿಸದಿದ್ದಲ್ಲಿ ಇರಾನ್‌ನ ನಾಗರಿಕತೆಯನ್ನೇ ನಾಶ ಮಾಡಲಾಗುವುದು ಎಂದು ಟ್ರಂಪ್ ಬೆದರಿಕೆ ಹಾಕಿದ್ದರು.

ದಾಳಿ–ಪ್ರತಿದಾಳಿ: ಮೂರು ದೇಶಗಳು ಕದನ ವಿರಾಮಕ್ಕೆ ಒಪ್ಪಿಗೆ ಸೂಚಿಸುವ ಕುರಿತು ಘೋಷಣೆಗಳು ಹೊರಬಿದ್ದರೂ, ಇಸ್ರೇಲ್ ಪಡೆಗಳು ದೇಶದ ವಿವಿಧೆಡೆ ಬುಧವಾರ ದಾಳಿ ನಡೆಸಿವೆ ಎಂದು ಇರಾನ್ ಅಧಿಕಾರಿಗಳು ಹೇಳಿದ್ದಾರೆ. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಇಸ್ರೇಲ್ ಮೇಲೆ ದಾಳಿ ನಡೆಸಿದೆ. ಇರಾನ್ ಮೇಲೆ ಭೀಕರ ದಾಳಿ ನಡೆಸುವ ಸಂಬಂಧ ತಾನು ವಿಧಿಸಿದ್ದ ಗಡುವಿಗೂ ಒಂದೂವರೆ ಗಂಟೆ ಮೊದಲು ಕದನ ವಿರಾಮ ಕುರಿತ ಪ್ರಸ್ತಾವಕ್ಕೆ ಡೊನಾಲ್ಡ್ ಟ್ರಂಪ್ ಸಮ್ಮತಿ, ಇರಾನ್ ಮೇಲೆ ದಾಳಿ ನಡೆಸುವುದಕ್ಕೆ ಸೇನಾ ಪಡೆಗಳನ್ನು ಕಳುಹಿಸುವುದನ್ನು ತಡೆಹಿಡಿಯಬೇಕು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ ಫೀಲ್ಡ್ ಮಾರ್ಷಲ್ ಅಸೀಮ್ ಮುನಿರ್ ಮನವಿ ಮಾಡಿದ್ದರು. ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ತಕ್ಷಣದಿಂದಲೇ ಹಾಗೂ ಸಂಪೂರ್ಣವಾಗಿ ಮುಕ್ತಗೊಳಿಸಬೇಕು. ಹಡಗುಗಳ ಸಂಚಾರಕ್ಕೆ ಭದ್ರತೆ ಖಾತ್ರಿಪಡಿಸಬೇಕು. ಈ ಷರತ್ತಿಗೆ ಒಪ್ಪಿದಲ್ಲಿ ಇರಾನ್ ಮೇಲೆ ನಡೆಸುವ ದಾಳಿಗೆ ಎರಡು ವಾರ ನಿಲ್ಲಿಸಲಾಗುವುದು, ಇರಾನ್ ಮೇಲೆ ಬಾಂಬ್ ಹಾಕುವುದು ಹಾಗೂ ವಾಯು ದಾಳಿ ನಡೆಸುವುದನ್ನು ಎರಡು ವಾರಗಳ ಮಟ್ಟಿಗೆ ಸ್ಥಗಿತಗೊಳಿಸಲು ಒಪ್ಪಿಗೆ. ಇದು ಎರಡೂ ಕಡೆಯವರ ಒಪ್ಪಿಗೆ ಇರುವ ಕದನ ವಿರಾಮ

ಇರಾನ್ ನಿಲುವು: ಇರಾನ್ ಮೇಲಿನ ದಾಳಿಗಳನ್ನು ನಿಲ್ಲಿಸಿದಲ್ಲಿ ನಮ್ಮ ಸಶಸ್ತ್ರ ಪಡೆಗಳು ಕೂಡ ತಮ್ಮ ಕಾರ್ಯಾಚರಣೆ ಸ್ಥಗಿತಗೊಳಿಸಲಿವೆ, ಇರಾನ್ ಸೇನೆಯ ಸಮನ್ವಯದೊಂದಿಗೆ ಮುಂದಿನ ಎರಡು ವಾರ ಹೊರ್ಮುಜ್ ಜಲಸಂಧಿ ಹಡಗುಗಳ ಸಂಚಾರಕ್ಕೆ ಮುಕ್ತವಾಗಿರಲಿದೆ, ಅಮೆರಿಕ ಈ ಹಿಂದೆ ಮುಂದಿಟ್ಟಿದ್ದ 15 ಅಂಶಗಳು ಹಾಗೂ ಇರಾನ್ ಮುಂದಿಟ್ಟಿರುವ 10 ಅಂಶಗಳ ಆಧಾರದಲ್ಲಿ ಮಾತುಕತೆ ನಡೆಯಬೇಕು

ಪಾಕಿಸ್ತಾನ ಪಾತ್ರ: ಅಮೆರಿಕ ಹಾಗೂ ಇರಾನ್ ಕದನ ವಿರಾಮಕ್ಕೆ ಒಪ್ಪಿಗೆ ನೀಡಿದ್ದಾಗಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಶರೀಫ್ 'ಎಕ್ಸ್'ನಲ್ಲಿ ಘೋಷಣೆ, ಇರಾನ್‌ನ 10 ಅಂಶಗಳ ಪ್ರಸ್ತಾವ ಅಥವಾ ಅಮೆರಿಕ ಈ ಹಿಂದೆ ಪ್ರಸ್ತಾಪಿಸಿದ್ದ 15 ಅಂಶಗಳ ಯೋಜನೆ ಬಗ್ಗೆ ಉಲ್ಲೇಖ ಮಾಡದ ಶರೀಫ್, ಕದನ ವಿರಾಮಕ್ಕೆ ಇಸ್ರೇಲ್ ಸಮ್ಮತಿಸಿರುವ ಬಗ್ಗೆಯೂ ಉಲ್ಲೇಖಿಸದ ಪಾಕಿಸ್ತಾನ ಪ್ರಧಾನಿ, ಎಲ್ಲ ವಿವಾದಗಳ ಇತ್ಯರ್ಥ ಹಾಗೂ ನಿರ್ಣಾಯಕ ಒಪ್ಪಂದ ಕುರಿತು ಮಾತುಕತೆ ನಡೆಸುವುದಕ್ಕಾಗಿ ಇಸ್ಲಾ ಮಾಬಾದ್‌ನಲ್ಲಿ ಶುಕ್ರವಾರ ಆಯೋಜಿಸಿರುವ ಸಭೆಯಲ್ಲಿ ಪಾಲ್ಗೊಳ್ಳುವಂತೆ ಅಮೆರಿಕ ಹಾಗೂ ಇರಾನ್ ನಿಯೋಗಗಳಿಗೆ ಆಹ್ವಾನಿಸಿ ದರು.

ಇರಾನ್‌ನ ಪ್ರಸ್ತಾವಗಳು: ಇರಾನ್ ಮೇಲೆ ದಾಳಿ ಮಾಡುವುದಿಲ್ಲ ಎಂಬ ಬಗ್ಗೆ ಅಮೆರಿಕ ತಾತ್ವಿಕವಾಗಿ ಒಪ್ಪಿಗೆ ಸೂಚಿಸಬೇಕು ಹಾಗೂ ಬದ್ಧತೆ ಪ್ರದರ್ಶಿಸಬೇಕು, ಹೊರ್ಮುಜ್ ಜಲಸಂಧಿ ಮೇಲೆ ಇರಾನ್ ನಿಯಂತ್ರಣ ಮುಂದುವರಿಯಲಿದೆ, ಯುರೇನಿಯಂ ಸಮೃದ್ಧಗೊಳಿಸುವಿಕೆ ಕುರಿತು ಇರಾನ್ ಹೊಂದಿರುವ ಹಕ್ಕನ್ನು ಒಪ್ಪಿಕೊಳ್ಳಬೇಕು, ಇರಾನ್ ಜೊತೆ ನೇರವಾಗಿ ವ್ಯವಹರಿಸುವ ದೇಶಗಳ ಮೇಲೆ ಅಮೆರಿಕ ವಿಧಿಸಿರುವ ಎಲ್ಲ ನಿರ್ಬಂಧಗಳನ್ನು ತೆಗೆದು ಹಾಕಬೇಕು. ಇರಾನ್ ಮೇಲೆ ವಿವಿಧ ರೀತಿಯ ನಿರ್ಬಂಧಗಳನ್ನು ವಿಧಿಸುವುದಕ್ಕೆ ಸಂಬಂಧಿಸಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಕೈಗೊಂಡಿರುವ ಎಲ್ಲ ನಿರ್ಣಯಗಳನ್ನು ರದ್ದುಪಡಿಸಬೇಕು, ಇರಾನ್ ಕೈಗೊಂಡಿರುವ ಪರಮಾಣು ಕಾರ್ಯಕ್ರಮಗಳಿಗೆ ಸಂಬಂಧಿಸಿ ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ (ಐಎಇಎ) ಕೈಗೊಂಡಿರುವ ಎಲ್ಲ ನಿರ್ಣಯಗಳನ್ನು ರದ್ದು ಮಾಡಬೇಕು, ಯುದ್ಧ ಶುರುವಾದ ನಂತರ ಇರಾನ್‌ನಲ್ಲಿ ಉಂಟಾಗಿರುವ ಹಾನಿಗೆ ಸಂಬಂಧಿಸಿ ಪರಿಹಾರ ನೀಡಬೇಕು. ಕೊಲ್ಲಿ ರಾಷ್ಟ್ರಗಳಲ್ಲಿ ಅಮೆರಿಕ ನಿಯೋಜನೆ ಮಾಡಿರುವ ಸಶಸ್ತ್ರ ಪಡೆಗಳನ್ನು ಹಿಂಪಡೆಯಬೇಕು, ಲೆಬನಾನ್‌ನಲ್ಲಿರುವ ಇಸ್ಲಾಮಿಕ್ ರೆಸಿಸ್ಟನ್ಸ್ ಸೇರಿ ಎಲ್ಲ ಗುಂಪುಗಳ ವಿರುದ್ಧ ನಡೆಸುತ್ತಿರುವ ಸೇನಾ ಕಾರ್ಯಾಚರಣೆಗಳನ್ನು ನಿಲ್ಲಿಸಬೇಕು.

ವನ್ಯಜೀವಿಗಳ ಸಂತಾನ ಶಕ್ತಿ ಹರಣಕ್ಕೆ ಚಿಂತನೆ

ನಡೆಯುವ ಅಗತ್ಯವಿದೆ ಎಂದರು.

ಅರಣ್ಯ ವಾಸಿಗಳ ಸ್ಥಳಾಂತರ: ಸ್ವಯಂ ಪ್ರೇರಣೆಯಿಂದ ಕಾಡಿನಿಂದ ಹೊರಬರಲು ಇಚ್ಛಿಸುವ ಅರಣ್ಯವಾಸಿಗಳ ಸ್ಥಳಾಂತರದ ಬಗ್ಗೆಯೂ ಸರ್ಕಾರ ಗಂಭೀರ ಚಿಂತನೆ ನಡೆಸಿದ್ದು, ಅಂತಹವರ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ನಂತರ ಇವರ ಸ್ಥಳಾಂತರಕ್ಕೆ ಎಷ್ಟು ಹಣದ ಅಗತ್ಯವಿದೆ. ಆಯವ್ಯಯದಲ್ಲಿ ಎಷ್ಟು ಮೀಸಲಿಡಲಾಗಿದೆ. ಎಷ್ಟು ಕೊರತೆ ಆಗಲಿದೆ ಎಂಬ ಕುರಿತು ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು.

ಅರಣ್ಯದಲ್ಲಿನ ವಸತಿಪ್ರದೇಶಗಳ ಸ್ಥಳಾಂತರದಿಂದ ವನ್ಯಜೀವಿಗಳ ಆವಾಸ ಸ್ಥಾನ ವಿಸ್ತರಣೆ ಆಗಲಿದೆ. ಮೂಲಭೂತ ಸೌಕರ್ಯ ಇಲ್ಲದೆ ಬದುಕುತ್ತಿರುವ ಅರಣ್ಯವಾಸಿಗಳನ್ನೂ ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯವಾಗಲಿದೆ.

ಆನೆ ಧಾಮ: ಆನೆಗಳ ಸಮಸ್ಯೆ ಪರಿಹರಿಸಲು ಆನೆ ಧಾಮ ನಿರ್ಮಾಣ ಕುರಿತು ಸರ್ಕಾರ ಯೋಜನೆ ರೂಪಿಸಿತ್ತು ಆದರೆ, ಕೇಂದ್ರ ಸರ್ಕಾರದಿಂದ ಅನುಮತಿ ಸಿಗುವಲ್ಲಿ ತೊಡಕಾಗಿದೆ. ಸಮಸ್ಯೆ ಪರಿಹರಿಸಿಕೊಂಡು ಆನೆ ಧಾಮ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದರು.

ಸದಾ ಉಳಿಯಲಿ: ಭಾರತದ ಆಶಯ

ಅಡೆತಡೆ ಇಲ್ಲದೆ ನಡೆಯುತ್ತದೆ ಎಂದು ಭಾವಿಸಿದ್ದೇವೆ ಎಂದು ತಿಳಿಸಲಾಗಿದೆ.

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಕದನ ವಿರಾಮದಿಂದ ಮಧ್ಯಪ್ರಾಚ್ಯದಲ್ಲಿ ಒಂದು ತಿಂಗಳಿಗೂ ಹೆಚ್ಚು ಕಾಲ ನಡೆಯುತ್ತಿದ್ದ ಹೋರಾಟ ನಿಂತಿದೆ. ಇರಾನ್ ಐತಿಹಾಸಿಕ ವಿಜಯ ಸಾಧಿಸಿದೆ. ಡೊನಾಲ್ಡ್ ಟ್ರಂಪ್ ತಮ್ಮ ಬೆದರಿಕೆ ದಾಳಿಗಳಿಂದ ಹಿಂದೆ ಸರಿದು ಎರಡು ವಾರಗಳ ಕದನ ವಿರಾಮಕ್ಕೆ ಒಪ್ಪಿಕೊಂಡ ನಂತರ ಇರಾನ್ ಈ ಹೇಳಿಕೆ ನೀಡಿದೆ. ಟೆಹ್ರಾನ್ 10 ಅಂಶಗಳ ಪ್ರಸ್ತಾವನೆಯನ್ನು ಸಹ ಮಂಡಿಸಿದೆ, ಅದನ್ನು ಅಮೆರಿಕ ಅದನ್ನು ಒಪ್ಪಿಕೊಂಡಿದೆ ಎಂದು ಹೇಳಿದೆ.

ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಟೆಹ್ರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಭಾರತೀಯ ನಾಗರಿಕರು ತಕ್ಷಣ ದೇಶವನ್ನು ತೊರೆಯುವಂತೆ ಸೂಚಿಸಿದೆ. ಇದಕ್ಕೂ ಮೊದಲು, ಏಪ್ರಿಲ್ 7 ರಂದು ಹೊರಡಿಸಲಾದ ಹಿಂದಿನ ಸಲಹೆಯಲ್ಲಿ, ಜನರು ಜಾಗರೂಕರಾಗಿರಿ ಮತ್ತು ಸುರಕ್ಷಿತ ಸ್ಥಳಗಳಲ್ಲಿ ಉಳಿಯುವಂತೆ ಸೂಚಿಸಲಾಗಿತ್ತು

ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ

47 ಮಹಿಳೆಯರಿಗೆ ಯಶಸ್ವಿ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ

ಮೈಸೂರು, ಏ.8(ವಿವಿಹೆಚ್)– ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಆಂಕೊಲಜಿಯಲ್ಲಿ 47 ಮಹಿಳೆಯರಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಲಾಗಿದ್ದು, ಎಲ್ಲರೂ ಆರೋಗ್ಯವಾಗಿದ್ದಾರೆ ಎಂದು ಬಿಎಚ್‌ಐಒ ಸಂಸ್ಥೆಯ ಮುಖ್ಯ ವಿಕಿರಣ ಆಂಕೊಲಜಿಸ್ಟ್ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ. ವೈ.ಎಸ್. ಮಾಧವಿ ತಿಳಿಸಿದರು.

ಆಸ್ಪತ್ರೆ ಆವರಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ನೆರವಾಗುವ ಉದ್ದೇಶದಿಂದ ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆ ಮತ್ತು ಇನ್ಸ್ಟಿಟ್ಯೂಟ್ ಆಫ್ ಆಂಕೊಲಜಿ (ಬಿಎಚ್‌ಐಒ) ಹಾಗೂ ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್ ಸಹಯೋಗದಲ್ಲಿ 'ನಾರಿ ಸ್ವಸ್ಥಿ' ಯೋಜನೆಯಡಿ 47 ಅರ್ಹ ರೋಗಿಗಳಿಗೆ ಯಶಸ್ವಿಯಾಗಿ ಉಚಿತ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆ ನೆರವೇರಿಸಲಾಯಿತು ಎಂದರು.

ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವ ಆರ್ಥಿಕ ದುರ್ಬಲ ವರ್ಗದ ಮಹಿಳೆಯರಿಗೆ ಶಸ್ತ್ರಚಿಕಿತ್ಸಾ ವೆಚ್ಚವನ್ನು ಪೂರ್ಣವಾಗಿ ಭರಿಸುವ ಗುರಿಯೊಂದಿಗೆ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಆ ಮೂಲಕ 47 ಮಹಿಳೆಯರು ಈಗ ಚಿಕಿತ್ಸೆಯ ಲಾಭ ಪಡೆದಿದ್ದಾರೆ ಎಂದರು.

ರೋಗವನ್ನು ಆರಂಭಿಕ ಹಂತದಲ್ಲಿ ಪತ್ತೆ ಮಾಡುವುದರಿಂದ ಜೀವ ಉಳಿಸಬಹುದು. ಭಾರತದಲ್ಲಿ ಮಹಿಳೆಯರಲ್ಲಿ ಕಂಡುಬರುವ ಸಾಮಾನ್ಯ ಕ್ಯಾನ್ಸರ್‌ಗಳಲ್ಲಿ ಸ್ತನ ಕ್ಯಾನ್ಸರ್ ಪ್ರಮುಖವಾಗಿದ್ದು, ವಿಳಂಬ ಪತ್ತೆಯಿಂದಾಗಿ ಮರಣ ಪ್ರಮಾಣ ಹೆಚ್ಚುತ್ತಿದೆ ಎಂದು ಆತಂಕ



ಸರ್ಜನ್ ಡಾ.ಎಂ.ವಿಜಯಕುಮಾರ್ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ವ್ಯಕ್ತಪಡಿಸಿದರು. ಹಿರಿಯ ಸರ್ಜಿಕಲ್ ಆಂಕೊಲಜಿಸ್ಟ್ ಮತ್ತು ರೋಬೋಟಿಕ್ ಸರ್ಜನ್ ಡಾ.ಎಂ.ವಿಜಯಕುಮಾರ್ ಮಾತನಾಡಿ, ಪ್ರತಿ ರೋಗಿಯ ಚೇತರಿಕೆಯ ಹಾದಿಯು ವಿಭಿನ್ನವಾಗಿದ್ದು, ಶಸ್ತ್ರಚಿಕಿತ್ಸೆ ಪಡೆದ ಎಲ್ಲರೂ ಆರೋಗ್ಯವಾಗಿದ್ದಾರೆ. ಶಸ್ತ್ರಚಿಕಿತ್ಸೆಯು ಚಿಕಿತ್ಸೆಯ ಒಂದು ಭಾಗವಾದರೆ, ಭಾವನಾತ್ಮಕ ಬೆಂಬಲ ಮತ್ತು ನಿಯಮಿತ ತಪಾಸಣೆ ಪ್ರಮುಖ ಅಂಶ ಎಂದು ತಿಳಿಸಿದರು.

ಬಿಪಿಎಲ್ ಕಾರ್ಡುದಾರರಿಗೆ ಮಾತ್ರ ಚಿಕಿತ್ಸೆ ನೀಡಲಾಗಿಲ್ಲ. ಬಿಪಿಎಲ್ ಕಾರ್ಡ್ ಹೊಂದಿರದ ಹಲವು ಫಲಾನುಭವಿಗಳು ಸಹ ಈ ಯೋಜನೆಯ ಮೂಲಕ ಉನ್ನತ ಚಿಕಿತ್ಸೆ ಪಡೆದಿದ್ದಾರೆ. ಇದರಲ್ಲಿ ಸಂತಸದ ವಿಷಯಕ್ಕಿಂತ ಆತಂಕಪಡುವ ಅಂಶವೇ ಹೆಚ್ಚಿದೆ. ಕೇವಲ 3 ತಿಂಗಳಲ್ಲಿ ಇಷ್ಟು ಮಂದಿಗೆ ಚಿಕಿತ್ಸೆ ನೀಡಲಾಗಿದೆ ಎಂದರೆ ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿರುವವ ಸಂಖ್ಯೆ ಊಹಿಸಲು ಸಾಧ್ಯವಿಲ್ಲ. ಈ ರೋಗದ ಬಗ್ಗೆ ಭಯ ಪಡುವ ಬದಲು ಜಾಗೃತಿ ಮೂಡಿಸುವ ಕೆಲಸ ಆಗಬೇಕಿದೆ ಎಂದರು.

ಆಟೋಮೋಟಿವ್ ಆಕ್ಸಲ್ಸ್ ಲಿಮಿಟೆಡ್‌ನ ಅಧ್ಯಕ್ಷ ಮತ್ತು ನಿರ್ದೇಶಕ ನಾಗರಾಜ ಗರ್ಗೇಶ್ವರಿ, ಬಿಎಚ್‌ಐಒ ಸಿಒಒ ಗೌತಮ್ ಧರ್ಮೇರ್ಲಾ, ಶಸ್ತ್ರಚಿಕಿತ್ಸೆಗೆ ಒಳಪಟ್ಟ 47 ಮಂದಿ ಮಹಿಳೆಯರು ಈ ವೇಳೆ ಹಾಜರಿದ್ದರು.

ಅಗ್ನಿಶಾಮಕ ಸಿಬ್ಬಂದಿಗೆ 2 ಲಕ್ಷ ಮೌಲ್ಯದ ರಕ್ಷಣಾ ಸಲಕರಣೆ ವಿತರಣೆ

ಮೈಸೂರು, ಏ.8(ಎಂಕೆ)– ಸಿಎಸ್‌ಆರ್(ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ) ಯೋಜನೆಯಡಿ ಸುಮಾರು 2 ಲಕ್ಷ ರೂ.ಗಳ ರಕ್ಷಣಾ ಸಲಕರಣೆಗಳನ್ನು ಹೆಬ್ಬಾಳ ಅಗ್ನಿಶಾಮಕ ಠಾಣೆಗೆ ಬುಧವಾರ ಹಸ್ತಾಂತರಿಸಲಾಯಿತು.

ಠಾಣೆ ಸಭಾಂಗಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ 2 ಉಸಿರಾಟದ ಸಲಕರಣೆ, 8 ಎಣ್ಣೆ ಹೀರಿಕೆಯ ದಿಂಬು, 20 ಎಣ್ಣೆ ಹೀರಿಕೆಯ ಪ್ಯಾಡ್, 4 ರಾಸಾಯನಿಕ ನಿಯಂತ್ರಕ ಕೈಗವಸು, 2 ರಾಸಾಯನಿಕ ನಿಯಂತ್ರಕ ವಸ್ತ್ರ, 4 ರಾಸಾಯನಿಕ ನಿಯಂತ್ರಕ ಗ್ಲಾಸ್ ಸೇರಿದಂತೆ ಇನ್ನಿತರೆ ರಕ್ಷಣಾ ಸಲಕರಣೆಗಳನ್ನು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಹೆಬ್ಬಾಳ ಅಗ್ನಿಶಾಮಕ ಠಾಣೆಗೆ ಹಸ್ತಾಂತರಿಸಿದರು.

ಬಳಿಕ ಮಾತನಾಡಿದ ಅವರು, ಕೈಗಾರಿಕಾ ಪ್ರದೇಶಗಳಲ್ಲಿ ಅಗ್ನಿ ಅವಘಡಗಳು ಹೆಚ್ಚಾಗಿ ಸಂಭವಿಸಲಿದ್ದು, ಅಗ್ನಿಶಾಮಕ ಸಿಬ್ಬಂದಿ ಸದಾ ಕಾರ್ಯೋನ್ಮುಖರಾಗಿರಬೇಕು. ಎಲ್ಲಿಯಾದರೂ ಬೆಂಕಿ ಬಿದ್ದಿದ್ದರೆ ಜನರು ಹೊರಗಡೆ ಬಂದರೆ, ಅಗ್ನಿಶಾಮಕ ಸಿಬ್ಬಂದಿ ಬೆಂಕಿಯೊಂದಿಗೆ ಸೆಣಸಾಡಿ ಅದನ್ನು ನಂದಿಸುವ ಮೂಲಕ ಆಸ್ತಿ ಮತ್ತು ಪ್ರಾಣ ಸಂರಕ್ಷಣೆಯಂತಹ ಮಹತ್ವದ ಕಾರ್ಯ ಮಾಡುತ್ತಾರೆ ಎಂದು ಶ್ಲಾಘಿಸಿದರು.



ಸಿಎಸ್‌ಆರ್ ಯೋಜನೆಯಡಿ ರಕ್ಷಣಾ ಸಲಕರಣೆಗಳನ್ನು ಹೆಬ್ಬಾಳ ಅಗ್ನಿಶಾಮಕ ಠಾಣೆಗೆ ಹಸ್ತಾಂತರಿಸಲಾಯಿತು.

ಮೈಸೂರಿನಲ್ಲಿ ಅಗ್ನಿಶಾಮಕ ಅಧಿಕಾರಿ ಮತ್ತು ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಯಾವುದೇ ಸಮಸ್ಯೆಯಾದರೂ ಕೆಲ ನಿಮಿಷದಲ್ಲೇ ಸ್ಥಳಕ್ಕೆ ದಾವಿಸಿ ನೆರವು ನೀಡುತ್ತಿದ್ದಾರೆ. ಹಾಗೆಯೇ ಇತರರ ರಕ್ಷಣೆ ಜೊತೆಗೆ ಅಗ್ನಿಶಾಮಕ ಸಿಬ್ಬಂದಿ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಸಿಎಸ್‌ಆರ್ ಯೋಜನೆಯಡಿ ನೀಡಿರುವ ರಕ್ಷಣಾ ಸಲಕರಣೆಗಳನ್ನು ಸದುಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಮೈಸೂರು ಪ್ರಾಂತ್ಯ ಪ್ರಭಾರ ಮುಖ್ಯ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್, ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಉಪ ನಿರ್ದೇಶಕ ಎಂ.ಎಸ್.ಮಹದೇವ್, ಹೆಬ್ಬಾಳ ಅಗ್ನಿಶಾಮಕ ಠಾಣಾಧಿಕಾರಿ ಜಿ.ಲಕ್ಷ್ಮೀಕಾಂತ್ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಅಸ್ಸಾಂ ಕಾಂಗ್ರೆಸ್‌ಗೆ ದೊಡ್ಡ ಶಾಕ್: ಕಣದಿಂದ ಹಿಂದೆ ಸರಿದ ಅಭ್ಯರ್ಥಿ

ಗುವಾಹಟಿ: ನಾಳೆ ಅಸ್ಸಾಂ ವಿಧಾನಸಭಾ ಚುನಾವಣೆಗೆ ಮತದಾನ ನಡೆಯಲಿದ್ದು ಇಂದು ಮಹತ್ತರ ರಾಜಕೀಯ ಬೆಳವಣಿಗೆಯಾಗಿದೆ. ಉದಲ್ಗುರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುರೇನ್ ಡೈಮರಿ ಇಂದು ಪಕ್ಷಕ್ಕೆ ರಾಜೀನಾಮೆ ನೀಡುವುದಾಗಿ ಘೋಷಿಸಿ ಚುನಾವಣಾ ಕಣದಿಂದ ಹಿಂದೆ ಸರಿದಿದ್ದಾರೆ.

ಆದಾಗ್ಯೂ, ಡೈಮರಿ ಇನ್ನೂ ಪಕ್ಷಕ್ಕೆ ಔಪಚಾರಿಕವಾಗಿ ತಮ್ಮ ರಾಜೀನಾಮೆಯನ್ನು ಸಲ್ಲಿಸಿಲ್ಲ ಎಂದು ಕಾಂಗ್ರೆಸ್ ಸ್ಪಷ್ಟಪಡಿಸಿದೆ. ಡೈಮರಿ ಅವರ ಹೆಸರು ಎಲೆಕ್ಟ್ರಾನಿಕ್ ಮತಯಂತ್ರಗಳಲ್ಲಿ ಉಳಿಯುತ್ತದೆ ಮತ್ತು ಮತದಾರರು ಅವರಿಗೆ ಮತ ಚಲಾಯಿಸಲು ಸಾಧ್ಯವಾಗುತ್ತದೆ ಎಂದು ಚುನಾವಣಾ ಆಯೋಗದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ, ಏಕೆಂದರೆ ನಾಮಪತ್ರಗಳನ್ನು ಹಿಂಪಡೆಯುವ ಗಡುವು ಬಹಳ ಹಿಂದೆಯೇ ಮುಗಿದಿದೆ.

ಮಕ್ಕಳಲ್ಲಿ ಪರಿಸರ ಪ್ರಜ್ಞೆ ಅವಶ್ಯಕ

ಗುತ್ತಿಗೆದಾರ ಗೋವಿಂದೇಗೌಡ ಅಭಿಮತ



ಮೈಸೂರು, ಏ.8– ಮಕ್ಕಳ ಮನಸ್ಸು ಹೂವಿದ್ದ ಹಾಗೆ, ಹೂವನ್ನ ಬಹಳ ಜೋಪಾನವಾಗಿ ರಕ್ಷಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ಅವರ ಜೀವನದಲ್ಲಿ ಮೌಲ್ಯಗಳು ಸಹ ಅಷ್ಟೇ ಅವಶ್ಯಕ. ಆದ್ದರಿಂದ ಮಕ್ಕಳು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕೆಂದು ಗುತ್ತಿಗೆದಾರರಾದ ಗೋವಿಂದೇಗೌಡರು ಕರೆ ನೀಡಿದರು.

ಅವರು ಅಂತರರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಜಯಲಕ್ಷ್ಮಿಪುರಂ ಸೇವಾ ಕೇಂದ್ರದಲ್ಲಿ ನಡೆದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಬಹುಮಾನ ವಿತರಿಸಿ ಮಾತನಾಡುತ್ತಿದ್ದರು.

ಸಂಘದಂತೆ ಬಣ್ಣ ಎನ್ನುವ ಹಾಗೆ ಇಂದಿನ ಮಕ್ಕಳಿಗೆ ಸತ್ಸಂಗಗಳ ಅವಶ್ಯಕತೆ ಇದೆ. ಗಾಂಧೀಜಿಯವರು ಸಹ ತಪ್ಪು ಮಾಡುತ್ತಾರೆ. ನಂತರ, ತಂದೆಗೆ ಪತ್ರ ಬರೆದು ಪಶ್ಚಾತ್ತಾಪ ಪಡುತ್ತಾರೆ. ಮುಂದೆ ಮಹಾತ್ಮರಾಗುತ್ತಾರೆ ಎಂದರು.

ರಾಜಯೋಗಿನಿ ಬ್ರಹ್ಮಾಕುಮಾರಿ ಸಂಧ್ಯಾಜೀ ಮಾತನಾಡಿ, ಬೆಳೆಯುವ ಮರ ಸಿರಿಮೊಳಕೆಯಲ್ಲಿಯೇ ಎನ್ನುವ ಹಾಗೆ ಇಂದಿನ ಮಕ್ಕಳು, ಮಹಾತ್ಮರ ಜೀವನದ ಆದರ್ಶಗಳನ್ನು ತಮ್ಮದಾಗಿ ಮಾಡಿಕೊಂಡು ಉನ್ನತ ವ್ಯಕ್ತಿಗಳಾಗಿ ರೂಪುಗೊಳ್ಳುವುದು ಅವಶ್ಯಕ ಎಂದರು. ಅದಕ್ಕಾಗಿ ಇಂತಹ ಬೇಸಿಗೆ ಶಿಬಿರಗಳು ಪ್ರೇರಣೆಯಾಗುತ್ತವೆ ಎಂದರು.

ಕಾರ್ಯಕ್ರಮದ ಆಯೋಜಕರಾದ ಕೆಶಿಯಾಜಿ ಮಾತನಾಡಿ, ಏಕಲವ್ಯ ಹೇಗೆ ಗುರುಗಳ ಪ್ರತಿಮೆಯನ್ನು ಇಟ್ಟುಕೊಂಡು ಶಬ್ದವೇದಿ ಬಾಣ ಪ್ರಯೋಗ ಅಭ್ಯಾಸಮಾಡಲು ಏಕಾಗ್ರತೆ ಶಕ್ತಿಯನ್ನು ಹೆಚ್ಚಿಸಿಕೊಂಡನೋ ಹಾಗೆ ಇಂದಿನ ಮಕ್ಕಳು ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಧ್ಯಾನದ ಅಭ್ಯಾಸ ಬಹಳ ಅವಶ್ಯಕ ಎಂದರು.

ನಂತರ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಶಿಬಿರಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. 'ಮನೆಗೊಂದು ಮರ ಊರಿಗೊಂದು ವನ' ಎನ್ನುವ ಪರಿಸರ ಪ್ರಜ್ಞೆಯನ್ನು ಮೂಡಿಸಲು ಭಾಗವಹಿಸಿದ್ದ ಎಲ್ಲಾ ಶಿಬಿರಾರ್ಥಿಗಳಿಗೆ ಒಂದೊಂದು ಗಿಡವನ್ನು ವಿತರಿಸಲಾಯಿತು.


ಕಾರ್ಯಕ್ರಮದಲ್ಲಿ ಮಹೇಶ, ಪಾಲಾಕ್ಷ, ಚಂದ್ರಕಲಾ, ವೇದಾವತಿ, ಸುಜಾತ ಹಾಗೂ ಪೋಷಕರು ಹಾಜರಿದ್ದರು.


ಸೆಟ್‌ಬ್ಯಾಕ್ ಬಿಡದೇ ನಿಯಮ ಉಲ್ಲಂಘನೆ ; ದೂರು ದಾಖಲು

ಮೈಸೂರು,ಏ.8(ಪಿಎಂ)– ನಿಯಮಾನುಸಾರ ಸೆಟ್‌ಬ್ಯಾಕ್ ಬಿಡದೇ ತಮ್ಮ ನಿವೇಶನದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ನೆರೆ ನಿವೇಶನದಾರರು ಮನೆ ನಿರ್ಮಿಸುತ್ತಿರುವ ಬಗ್ಗೆ ನಾಗರಿಕರೊಬ್ಬರು ಕರ್ನಾಟಕ ಸರ್ಕಾರದ ಏಕೀಕೃತ ಸಾರ್ವಜನಿಕ ಕುಂದು ಕೊರತೆ ನಿವಾರಣಾ ವ್ಯವಸ್ಥೆಯಲ್ಲಿ (ಐಪಿಜಿಆರ್‌ಎಸ್) ಆನ್‌ಲೈನ್ ಮೂಲಕ ದೂರು ದಾಖಲಿಸಿದ್ದಾರೆ.

ಕೆ.ಬಿ.ಕುಮಾರ್ ಎಂಬುವರು ಹೀಗೆ ದೂರು ದಾಖಲಿಸಿದವರು. ಲಲಿತ್ ಮಹಲ್ ರೋಡ್ ತೂಗುದೀಪ ಸರ್ಕಲ್‌ನಿಂದ ಸಿದ್ದಾರ್ಥ ನಗರಕ್ಕೆ ಹೋಗುವ ದಾರಿಯ ಕಾರ್ನರ್‌ನಲ್ಲಿ ನಮ್ಮ ಸೈಟ್ (ಸಂಖ್ಯೆ 63–3–227/24/ಎ2) ಇದೆ. ಈ ಸೈಟ್ ಕಾಂಪೌಂಡ್ ಸೇರಿದಂತೆ ಬಸವರಾಜು ಹಾಗೂ ದಯಾನಂದ ಸಾಗರ ಎಂಬುವವರು ಮನೆಯನ್ನು ಕಟ್ಟುತ್ತಿದ್ದಾರೆ. ಇವರು ಸ್ವಲ್ಪ ಜಾಗ ಸಹ ಬಿಡದೇ ನನ್ನ ಸೈಟ್ ಕಾಂಪೌಂಡ್ ಸೇರಿಸಿ ಮನೆಯನ್ನು ನಿರ್ಮಿಸುತ್ತಿದ್ದಾರೆ ಎಂದು ಕುಮಾರ್ ದೂರಿನಲ್ಲಿ ಆರೋಪಿಸಿದ್ದಾರೆ.

ಈ ಬಗ್ಗೆ ನಾನು ಆಕ್ಷೇಪ ವ್ಯಕ್ತಪಡಿಸಿದ್ದು, ಅದಾಗ್ಯೂ ಯಾವುದೇ ಪ್ರಯೋಜನವಾಗಿಲ್ಲ. ಈ ಬಗ್ಗೆ ಸ್ಥಳೀಯ ಸಂಸ್ಥೆ ಎಇಇ ಭೈರಪ್ಪ ಸಹ ಖುದ್ದು ಸ್ಥಳ ಪರಿಶೀಲಿಸಿ ತಿಳಿ ಹೇಳಿದರೂ ಸದರಿ ನಿವೇಶನಾದಾರರು ಯಾವುದೇ ರೀತಿ ಸ್ಪಂದಿಸದೇ ಅದೇ ರೀತಿ ಕಾಮಗಾರಿ ಮುಂದುವರೆಸುತ್ತಿದ್ದಾರೆ. ಸದರಿಯವರು 3 ಅಡಿ ಜಾಗ ಬಿಟ್ಟು ಅವರ ಮನೆಯನ್ನು ನಿರ್ಮಿಸಿಕೊಳ್ಳಲು ಆದೇಶ ನೀಡಬೇಕೆಂದು ದೂರಿನಲ್ಲಿ ಅವರು ಕೋರಿದ್ದಾರೆ.





ಸೆಟ್‌ಬ್ಯಾಕ್ ಬಿಡದೇ ನಿವೇಶನದ ಕಾಂಪೌಂಡ್ ಸೇರಿಸಿ ಮನೆಗಳನ್ನು ನಿರ್ಮಿಸುತ್ತಿರುವುದು.

ಮುಕ್ತ ವಿವಿಯಲ್ಲಿ ಮಹಿಳಾ ದಿನಾಚರಣೆ

ಕುಟುಂಬದ ಪ್ರಗತಿಗೆ ಶ್ರಮಿಸಿ ದುಡಿಯುವ ಮಹಿಳೆಯರೂ ಸಹ ಸಾಧಕಿಯರೇ

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ

ಮೈಸೂರು,ಏ.8(ಪಿಎಂ)– ಮನೆಯಲ್ಲಿ ಎಲ್ಲರ ಪ್ರೀತಿ ವಿಶ್ವಾಸಗಳಿಸಿ ಕುಟುಂಬವನ್ನು ಪ್ರಗತಿಯತ್ತ ತೆಗೆದುಕೊಂಡು ಹೋಗುವ ಮಹಿಳೆಯೂ ಸಾಧಕಿಯೇ ಹೌದು ಎಂದು ಮೈಸೂರು ವಿವಿ ಕುಲಸಚಿವೆ(ಆಡಳಿತ) ಎಂ.ಕೆ.ಸವಿತಾ ಹೇಳಿದರು.

ಮೈಸೂರಿನ ರಾಜ್ಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ವಿವಿ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಧಕಿಯರು ಎಂದಾಕ್ಷಣ ಕೇವಲ ಮೇಲ್ಮಟ್ಟದ ಹುದ್ದೆ ಅಲಂಕರಿಸಿದ ಮಹಿಳೆಯರನ್ನು ಮಾತ್ರವೇ ಗುರುತಿಸುವುದಲ್ಲ. ಅವರ ಜೊತೆಗೆ ಕುಟುಂಬದ ಶ್ರೇಯೋಭಿವೃದ್ಧಿಗಾಗಿ ದುಡಿಯುವ ಮಹಿಳೆಯರ ಕೊಡುಗೆ ಸಹ ಪರಿಗಣಿಸಬೇಕು ಎಂದು ತಿಳಿಸಿದರು.

ಮಹಿಳಾ ದಿನಾಚರಣೆಯು ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. 20 ವರ್ಷಗಳ ಹಿಂದೆ ನಾನು ತಹಸೀಲ್ದಾರ್ ಆಗಿ ಸೇವೆ ಆರಂಭಿಸಿದಾಗ, ತಾಲೂಕು ಮ್ಯಾಜಿಸ್ಟ್ರೇಟ್ ಆಗಿ ವರದಕ್ಷಿಣೆ ಕಿರುಕುಳದಿಂದ ಮಹಿಳೆಯರ ಆತ್ಮಹತ್ಯೆ ಸೇರಿದಂತೆ ಮಹಿಳಾ ದೌರ್ಜನ್ಯ ಪ್ರಕರಣಗಳನ್ನು ಹತ್ತಿರದಿಂದ ನೋಡಿದ್ದೇನೆ. ಅಂದಿಗೆ ಹೋಲಿಸಿದರೆ ಮಹಿಳಾ ದೌರ್ಜನ್ಯ ಪ್ರಕರಣಗಳು ಇಂದು ಇಳಿಮುಖವಾಗಿವೆ. ಜೊತೆಗೆ ಅಂದು ಒಬ್ಬರು ಇಬ್ಬರು ಮಹಿಳೆಯರು ಮಾತ್ರವೇ ಉನ್ನತ ಮಟ್ಟದ ಸ್ಥಾನ ಅಲಂಕರಿಸುತ್ತಿದ್ದರು. ಆದರೆ ಇಂದು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸುತ್ತಿದ್ದಾರೆ ಎಂದರು.

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಕುಲ ಸಚಿವರಾದ ಪ್ರೊ.ಎಸ್.ಕೆ.ನವೀನ್ ಕುಮಾರ್, ಡಾ.ಸಿ.ಎಸ್.ಆನಂದ ಕುಮಾರ್, ಡೀನ್‌ಗಳಾದ ಡಾ.ಎನ್.ಆರ್. ಚಂದ್ರೇಖರ್ (ಅಧ್ಯಯನ ಕೇಂದ್ರಗಳು), ಪ್ರೊ.ಎಂ.ರಾಮನಾಥಂ ನಾಯ್ಡು (ಶೈಕ್ಷಣಿಕ) ಹಾಗೂ ವಿವಿ ಸಿಬ್ಬಂದಿ ಹಾಜರಿದ್ದರು.



ಮೈಸೂರಿನ ರಾಜ್ಯ ಮುಕ್ತ ವಿವಿಯ ಕಾವೇರಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬೈಕರ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲವ್ ಮಾಕ್ಟೇಲ್–3 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಗಾರ್ಡಿಯನ್ಸ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಧುರಂದರ್–2 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಧುರಂದರ್–2 (ಕ)	3 ಪ್ರದರ್ಶನಗಳು
ರಾಜಕಮಲ್	
ಲೀಡರ್ (ತ) + ಕಾಳಿದಾಸ–2 (ತ)	4 ಪ್ರದರ್ಶನಗಳು
ಸಂಗಂ	
ಧುರಂದರ್–2 (ಕ)	3 ಪ್ರದರ್ಶನಗಳು
ಲಿಡೋ	
ಧುರಂದರ್–2 (ಕ)	3 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಫಸ್ಟ್ ನೈಟ್ ವಿತ್ ದೆವ್ವ (ಕ)	4 ಪ್ರದರ್ಶನಗಳು

ಉತ್ತರ ಕ್ರಿಯಾದಿ ಮತ್ತು ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ಬೋರಲಿಂಗೇಗೌಡರು

ಇವರು ದಿನಾಂಕ: 30–03–2026 ಸೋಮವಾರ ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಮತ್ತು ಭೂಶಾಂತಿ ಕಾರ್ಯವನ್ನು ದಿನಾಂಕ: 09–04–2026 ಗುರುವಾರ ಬೆಳಿಗ್ಗೆ 10–45 ಗಂಟೆಗೆ ಯರಗನಹಳ್ಳಿ ರುದ್ರಭೂಮಿಯಲ್ಲಿ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಬೋರೇಗೌಡರ ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು.

8ನೇ ವರ್ಷದ ಸವಿನೆನಪು



ಜನನ 23.6.1992

ನಿಧನ 09.04.2018

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ ಕುಟುಂಬ ವರ್ಗ

ಬಿ.ವಿ.ಸುಧೀಂದ್ರ ಗೌಡ ಬಿ.ಇ

ದುಃಖತಪ್ತರು: ತಂದೆ ವಿಜೇಂದ್ರ, ತಾಯಿ ಗಾಯತ್ರಿ, ಅಕ್ಕ–ಸಿಂಧು (ಧನಲಕ್ಷ್ಮಿ), ಭಾವ–ಸುರೇಶ, ಮೊಮ್ಮಕ್ಕಳು ಮತ್ತು ಲಕ್ಕಪ್ಪಗೌಡರ ಕುಟುಂಬವರ್ಗದವರು. ಬಿಳಿಕೆರೆ, ಹುಣಸೂರು ತಾಲ್ಲೂಕು

